

44

# ಅನಂತದೆಡೆಗೆ

ಲೇಖಕರು :
ಶ್ರೀರಾಮಚಂದ್ರ

ಅನುವಾದಕರು :
ಶ್ರೀ ಶ್ರೀ. ಅ. ಸರ್ನಾಡ, ಎಂ.ಎ., ಎಂ.ಎಡ್.

ಶ್ರೀ ರಾಮಚಂದ್ರ ಮಿಷನ್
ಉತ್ತರ ಪ್ರದೇಶ್

ಪ್ರಕಾಶಕರು :

ಶ್ರೀ ರಾಮಚಂದ್ರ ಮಿಷನ್

ಪ್ರಕಾಶನ ವಿಭಾಗ :

ಷಾಹಜಹಾನ್‌ಪೂರ್ (ಉ. ಪ್ರ)

ಮುಖಚಿತ್ರ : ಕೃಷ್ಣ ಪೋತದಾರ್

ಮೊದಲನೆಯ ಮುದ್ರಣ : ೧೯೬೯, ೧೦೦೦ ಪ್ರತಿಗಳು

ಎರಡನೆಯ ಮುದ್ರಣ : ೧೯೭೯, ೧೦೦೦ ಪ್ರತಿಗಳು

ಹಕ್ಕುಗಳನ್ನು ಕಾದಿಡಲಾಗಿದೆ.

ಬೆಲೆ : ರೂ ನಾಲ್ಕು (ರೂ. 4/–)

ಮುದ್ರಕರು : ಲಿಪಿ ಮುದ್ರಣ
ಬೆಂಗಳೂರು–560 004

# ವಿಷಯ ಸೂಚಿ


| | | |
|---|---|---|
| ೧. | ಮುನ್ನುಡಿ | i |
| ೨. | ಅರಿಕೆ | vii |
| ೩. | ಭೂಮಿಕೆ | viii |
| ೪. | ಜ್ಞಾನ ಪ್ರಕರಣ | ೧ |
| ೫. | ಗ್ರಂಥಿ ಪ್ರಕರಣ | ೪ |
| ೬. | ಅಂತಿಮದಶಾ ಪ್ರಕರಣ | ೨೮ |
| | ಪರಿಶಿಷ್ಟ – ೧ | ೪೦ |
| | ಪರಿಶಿಷ್ಟ – ೨ | ೪೨ |

# Publications of
# Shri Ram Chandra Mission

| ENGLISH : | | Rs. P. |
|---|---|---|
| 1. | Efficacy of Raja Yoga in the Light of Sahaj Marg by Shri Ram Chandraji | 8-00 |
| 2. | Reality at dawn by Shri Ram Chandraji | 8-00 |
| 3. | Towards Infinity | 3-00 |
| 3A. | Sahaj Marg Philosophy by Ram Chandraji | 7-00 |
| 4. | Commentary on Ten Commandments of Sahaj Marg (Translated by Shri Raghavendra Rao) | 6-00 |
| 5. | Voice Real first selection by Shri Ram Chandraji | 15-00 |
| 6. | Voice Real-Second Selection by Shri Ram Chandraji | 15-00 |
| 7. | Thus Speaks Sri Ram Chandraji | 1-00 |
| 8. | Sahaj Marg : Shri Ram Chandra's New Darsana by Dr. K. C. Varadachari | 12-00 |
| 9. | Lectures on Sahaj Marg by Dr. K. C. Varadachari | 10-00 |
| 10. | Talks on Ten Commandments of Sahaj Marg by Dr. K. C. Varadachari | 3-00 |
| 11. | Talks on Efficacy of Raja Yoga by Dr. K. C. Varadachari | 1-50 |
| 12. | Talks on Sahaj Marg Philosophy by Dr. K. C. Varadachari | 5-00 |
| 13. | Sahaj Marg & Personality Problems : Vol. I. Yoga Psychology & Modern Psychological Theories | 8-00 |
| 14. | Vol. II, Superstition and Spirituality | 5-00 |
| 15. | A Peep into Sahaj Marg by Shri Ishwar Sahai | 5-00 |

| | | Rs. P. |
|---|---|---|
| 16. | Autobiography of Ram Chandra by Shri Ram Chandraji | 10–00 |
| 17. | Grand Master's 'Truth Eternal' (Translated from Urdu) | 10–00 |
| 18. | A Panoramic View of Sahaj Marg by Shri Raghavendra Rao | 5–00 |
| 19. | India in the West by Shri P. Rajagopalachari | 15–00 |
| 20. | Sahaj Marg in outlines by Shri Ishwar Sahai | 0–30 |
| 21. | Sahaj Marg-A Natural Way of God-Realisation by Shri Laxmi Sankar | 0–30 |
| 22. | Today is Ours by Shri G. Vijaya Rangachari | 1–00 |
| 23. | A Digest of Sahaj Marg by Shri G. Vijaya Rangachari | 0–50 |
| 24. | Babuji's 71st Birthday Souvenir | 5–00 |
| 25. | Lalaji's Birth Centenary Souvenir | 10–30 |
| 26. | Saptati by Shri G. Vijaya Rangachar | 1–00 |
| 27. | Babuji's 75th Birthday Souvenir | 25–00 |
| 28. | My Master by Shri P. Rajagopalachari | 15–00 |
| 29. | Sahaj Marg in Europe by Shri P. Rajagopalachari | 25–00 |
| 30. | Blossoms in the East by Shri P. Rajagopalachari | 15–00 |

## HINDI

| | | |
|---|---|---|
| 1. | Rajayoga Ka Divya Darsan (Translation of No. 1) | 4–00 |
| 2. | Satya Ka Uday (Translation of No. 2) Ordinary: 4–00 Deluxe: | 5–00 |
| 3. | Anant Ki Or by Shri Ram Chandraji | 3–00 |
| 4. | Sahaj Marg Ki Ruparekha | 0–00 |
| 5. | Sahaj Marg Ke Das Usoolonki sharah (Urdu book in Devanagari Script) | 5–00 |

## ಶ್ರೀ ರಾಮಚಂದ್ರ ಮಿಷನ್ನಿನ
## ಕನ್ನಡ ಪ್ರಕಟಣೆಗಳು

| | | | |
|---|---|---|---|
| ೧. | ಸತ್ಯೋದಯಂ | (ಅನು.) ಶ್ರೀ. ಶ್ರೀ ಆ. ಸರ್ನಾಡ | ೧೦-೦೦ |
| ೨. | ಸಹಜಮಾರ್ಗಾನುಸಾರ ರಾಜಯೋಗದ ಪ್ರಭಾವ | ,, | ೬-೦೦ |
| ೩. | ಸಹಜಮಾರ್ಗದ ಹತ್ತು ನಿಯಮಗಳ ವ್ಯಾಖ್ಯಾನ | ,, | ೩-೦೦ |
| ೪. | ಸಹಜ ಮಾರ್ಗದ ರೂಪರೇಷೆಗಳು | ,, | ೦-೫೦ |
| ೫. | ಅನಂತದೆಡೆಗೆ | ,, | ೪-೦೦ |
| ೬. | ಋತವಾಣಿ | ,, | ೧೨-೦೦ |
| ೭. | ಸಹಜ ಮಾರ್ಗದರ್ಶನ | ಅನು. : ಶ್ರೀ ಶ್ರೀಕಂಠಯ್ಯ | ೪-೦೦ |
| ೮. | ಸಹಜ ಮಾರ್ಗ ಸಮೀಕ್ಷೆ | ಲೇ. : ಶ್ರೀ ರಾಘವೇಂದ್ರರಾವ್ | ೫-೦೦ |
| ೯. | ಶ್ರೀರಾಮಚಂದ್ರಜಿಯವರ ನುಡಿಮುತ್ತುಗಳು | | ೧-೨೫ |

**ಶ್ರೀ ರಾಮಚಂದ್ರ ಮಿಷನ್ ಯೋಗಾಶ್ರಮ**
೧೩, ೨೪ನೇ ಮೇನ್, ಬನಶಂಕರಿ ೨ನೇ ಸ್ಟೇಜ್
ಬೆಂಗಳೂರು-೫೬೦೦೭೦

# ಮುನ್ನುಡಿ

(ಇಂಗ್ಲಿಷ್ ಮೂಲದಿಂದ)

ಷಾಹಜಹಾನ್‌ಪುರದ ಶ್ರೀ ರಾಮಚಂದ್ರಜಿ ಮಹಾರಾಜರು ಬರೆದ "ಅನಂತ್ ಕೀ ಓರ್" ಎಂಬ ಕೃತಿಗೆ ಮುನ್ನುಡಿಯನ್ನು ಬರೆಯಬೇಕೆಂಬ ಆಹ್ವಾನವನ್ನು ನಾನು ತುಂಬ ವಿನಯಭಾವದಿಂದ ಸ್ವೀಕರಿಸಿದ್ದೇನೆ. ಈ ಕೃತಿಯನ್ನು ಕರಡುಪ್ರತಿಯಲ್ಲಿ ನೋಡಿದಾಗ ಇದನ್ನು ಜಗತ್ತಿಗೆ ಪರಿಚಯ ಮಾಡಿಕೊಡುವ ಸಾಮರ್ಥ್ಯವು ನಿಜವಾಗಿ ನನ್ನಲ್ಲಿಲ್ಲವೆಂದೆನಿಸಿತು. ಆದರೆ ನಾನಿದನ್ನು ಹೇಗಾದರೂ ಮಾಡಬೇಕೆಂದು ಅವರ ಹಾರ್ದಿಕ ಇಚ್ಛೆಯಿದ್ದಿತಾದುದರಿಂದ ಈ ಕೆಲಸಕ್ಕೆ ಒಪ್ಪಿದೆ.

ಪ್ರಾಚೀನಕಾಲದ ಗೂಢ ಯೋಗಮಾರ್ಗವನ್ನು ಯೋಗ್ಯ ಜಿಜ್ಞಾಸು ಜೀವಿಗಳಿಗೆ ತಿಳಿಯುವಂತೆ ಬೋಧಿಸುತ್ತ ತರಬೇತಿ ಕೊಡುತ್ತಿರುವ ಗುರುಗಳಲ್ಲಿ ಶ್ರೀ ರಾಮಚಂದ್ರಜಿಯವರು ಸರ್ವಶ್ರೇಷ್ಠರೆನ್ನಲು ಸಂಕೋಚವೆನಿಸಿದರೆ ಶ್ರೇಷ್ಠತಮರಲ್ಲೊಬ್ಬರೆಂದಾದರೂ ಹೇಳಬಹುದು. ಅವರ ಶ್ರೇಷ್ಠ ಸದ್ಗುರುಗಳಾದ ಫತೆಹ್‌ಗಡದ ಶ್ರೀ ರಾಮಚಂದ್ರಜಿಯವರು ಅವರಿಗೆ ಅಂತಿಮಸ್ಥಿತಿಯ ನೇರವಾದ ಅನುಭವಮಾರ್ಗವನ್ನು ಕಲಿಸಿಕೊಟ್ಟಿದ್ದರಲ್ಲದೆ ನಿಜವಾಗಿಯೂ ಪೂರ್ಣಯೋಗದ ಅಂತಿಮಸ್ಥಿತಿಯನ್ನು ಅವರಿಗೆ ಕರುಣಿಸಿದ್ದರು. ಪರಮಪದ ಅಥವಾ ಅನಂತವೆಂದು ವರ್ಣಿಸಲಾದ ಕೊನೆಯ ಸ್ಥಿತಿಯನ್ನು ಸಾಕ್ಷಾತ್ಕರಿಸಿಕೊಂಡ ಗುರುವಿನ ಪಾತ್ರವು ಈ ಯೋಗದ ಮಹತ್ತ್ವಪೂರ್ಣ ಅಂಗವಾಗಿದೆ. ತತ್ತ್ವಜ್ಞಾನಿಗಳು ಅನಂತದ ಬಗೆಗೆ ಮಾತನಾಡುವರೇನೋ ನಿಜ. ಆದರೆ, "ನವಾಗ್ಗಚ್ಛತಿ ನೋ ಮನೋ" (ಅಲ್ಲಿಗೆ ಮಾತು ಮುಟ್ಟುವುದಿಲ್ಲ, ಮನಸ್ಸು

ನಿಲುಕುವುದಿಲ್ಲ), ಅಥವಾ "ನ ತತ್ರ ಸೂರ್ಯೋ ಭಾತಿ ನ ಶಶಾಂಕಃ" (ಅಲ್ಲಿ ಸೂರ್ಯನು ಹೊಳೆಯುವುದಿಲ್ಲ, ಚಂದ್ರನು ಬೆಳಗುವುದಿಲ್ಲ) ಎಂದು ಮುಂತಾದ ಶ್ರುತಿವಾಕ್ಯಗಳನ್ನು ಹೇಳಿ ವಿಚಿತ್ರರೀತಿಯ ಬೌದ್ಧಿಕ ಪಲಾಯನವಾದವನ್ನು ಪ್ರತಿಪಾದಿಸಿ ಅದನ್ನು ಸಾಕ್ಷಾತ್ಕರಿಸಿಕೊಳ್ಳುವ ಪ್ರಯತ್ನವನ್ನು ಒಡನೆಯೆ ಬಿಟ್ಟುಕೊಡುತ್ತಾರೆ. ಅದು ಅವರ್ಣನೀಯವಾಗಿದ್ದರೂ ಆ ಪರಮಾತ್ಮ ತತ್ತ್ವದ ಕೃಪೆಯಿಂದ ಅದರ ಅನುಭವ ಪಡೆಯಲು ಸಾಧ್ಯವಿದೆ. ಏಕೆಂದರೆ ಆ ದೇವಾಧಿದೇವನು ತಾನು ಒಲಿದ ವ್ಯಕ್ತಿಗೆ ತನ್ನ ಶರೀರವನ್ನು ಪ್ರಕಟಗೊಳಿಸುತ್ತಾನೆ —"ತನುಂ ಸ್ವಾಮ್ ವಿವೃಣುತೇ." ಈ ಯೋಗದ ಅಭ್ಯಾಸದಲ್ಲಿ ಆತ್ಮವು ಒಂದು ಸ್ತರದಿಂದ ಮತ್ತೊಂದು ಸ್ತರಕ್ಕೇರುವಾಗ ಬರುವ ಅನುಭವಗಳ ಪ್ರಗತಿಯ ಆಂತರಿಕ ಚಿತ್ರಣವನ್ನು ಶ್ರೀ ರಾಮಚಂದ್ರಜಿ ಮಹಾರಾಜರು ಕೊಟ್ಟಿದ್ದಾರೆ. ಪರಮ ತತ್ತ್ವದ ಈ ಭೂಮಿಕೆಗಳು ಅಥವಾ ಸ್ತರಗಳು ವಾಸ್ತವವಾಗಿ ಪ್ರತಿಯೊಂದು ಕಿರಣ ಅಥವಾ ಜೀವಿಯ ಸೃಜನಾತ್ಮಕ ಅವತರಣದ ಪ್ರಕ್ರಿಯೆಯ ಮೂಲಕ ನಿರ್ಮಿತವಾಗಿದ್ದು ಅದು ಕೆಲವು ಗ್ರಂಥಿ ಅಥವಾ ಘಟ್ಟಗಳನ್ನು ನಿರ್ಮಾಣಮಾಡಿತು. ಇಂಥ ಪ್ರತಿಯೊಂದು ಗ್ರಂಥಿಯೂ ತನ್ನದೇ ಆದ ಒಂದು ವಿಶಿಷ್ಟ ರೀತಿ ಹಾಗು ರೂಪವನ್ನು ತಳೆದು ಬಂಧನ ಮತ್ತು ದುಃಖಗಳಿಗೆ ಕಾರಣವಾಯಿತು. ಅವತರಣ ಮಾಡಿದ ಪ್ರತಿಯೊಂದು ಆತ್ಮವು ತನ್ನ ಮೂಲ ಸ್ಥಾನಕ್ಕೆ ಹೋಗಲು ಪ್ರಯತ್ನಿಸುವುದು ಅನಿವಾರ್ಯವಾಗಿದೆ. ಅವತರಣದ ಸೋಪಾನಗಳ ಪರಿಜ್ಞಾನವು ಅದಕ್ಕೆ ಮರೆತುಹೋದುದರಿಂದ ಆ ಸೋಪಾನಗಳನ್ನೆಲ್ಲ ಅರಿತಂಥ, ಹಾಗು ಅವುಗಳನ್ನು ದಾಟಿ ಅನಂತದವರೆಗೆ ತಲುಪಿ ಅನ್ಯರನ್ನು ಯೌಗಿಕ ಪ್ರಾಣಾಹುತಿಯ ಮೂಲಕ ಒಂದು ಮೆಟ್ಟಲಿನಿಂದ ಮತ್ತೊಂದು ಮೆಟ್ಟಲಿಗೆ ಕರೆದೊಯ್ಯಬಲ್ಲಂಥ, ಮಹಾಪುರುಷನನ್ನು ಆಶ್ರಯಿಸಬೇಕಾಗುವುದು. ಇಂಥ ಯಾವನಾದರೊಬ್ಬ ವ್ಯಕ್ತಿಯ ಬಗ್ಗೆ ಯಾವಾಗಲೂ ಗಂಭೀರವಾದ ಸಂದೇಹಕ್ಕೆ ಅವಕಾಶವಿದ್ದೇ ಇರುವುದು. ಏಕೆಂದರೆ, ಆತನು ಸ್ವಲ್ಪ ಮೇಲೇರಿ ಸಾಮಾನ್ಯ ಮಾನವನ

ಸ್ಥಿತಿಗಿಂತ ಎಷ್ಟೋ ಮುಂದುವರಿದಿದ್ದರೂ ಅಸ್ತಿತ್ವದ ಯಾವುದಾದರೊಂದು ಮೇಲಿನ ಸ್ತರದಲ್ಲಿ ಸಿಕ್ಕಿಬಿದ್ದು ಅದೇ ಉಚ್ಚತರವಾದ ಚಕ್ರದಲ್ಲಿ ಸುತ್ತಾಡುತ್ತಿರುವ ಸಂಭವವಿರುತ್ತದೆ. ಈ ಗ್ರಂಥಿಗಳ ವಾಸ್ತವಿಕ ಸ್ವರೂಪವನ್ನು ತಿಳಿದುಕೊಂಡು ಅವನ್ನು ಲಯಗೊಳಿಸಿ ಸಾರೂಪ್ಯತೆ–ಸಾಯುಜ್ಯತೆಗಳನ್ನು ಪಡೆದು ಒಮ್ಮೆಲೇ ದಾಟಿಹೋಗಬೇಕೆಂದು ಶ್ರೀ ರಾಮಚಂದ್ರಜಿಯವರು ತಮ್ಮ ಸೂಕ್ಷ್ಮ ಹಾಗು ಸುಸ್ಪಷ್ಟ ದೃಷ್ಟಿಯಿಂದ ತಿಳಿಸಿ ಹೇಳುತ್ತಾರೆ. ಈ ವರ್ಣನೆಗಳ ಅಪೂರ್ವತೆ, ಅಸ್ತಿತ್ವದ ಈ ಗ್ರಂಥಿ ಅಥವಾ ವೃತ್ತಗಳ ಅತಿಕ್ರಮಣ ಪದ್ಧತಿ, ಮತ್ತು ಮೊದಲು ಅವತರಣಕ್ಕೆ ಕಾರಣವಾಗಿ ಈಗ ಆರೋಹಣದಲ್ಲಿ ಸಹಾಯಕವಾಗಿರುವ ಬೇರೆ ಬೇರೆ ಬಗೆಯ ಆನಂದದ ಅನುಭವಗಳು —ಇವೆಲ್ಲ ಇದುವರೆಗೆ ಉಪಲಬ್ಧವಾದ ಯೋಗಸಾಹಿತ್ಯಕ್ಕೆ ಅಪರಿಚಿತವಾದ ಒಂದು ನವೀನ ತಂತ್ರವಾಗಿವೆ. ಕೆಲವು ಉಪನಿಷತ್ತುಗಳಲ್ಲಿ ಗ್ರಂಥಿಗಳ ಹಾಗು ಭೂಮಿಕೆಗಳ (ಸಪ್ತಭೂಮಿಕೆಗಳ) ವರ್ಣನೆಗಳು ದೊರೆಯುವುವೇನೋ ನಿಜ. ಆದರೆ ಅವುಗಳ ಸ್ವರೂಪ, ಅಸ್ತಿತ್ವ ಹಾಗು ಜ್ಞಾನದ ಸ್ಥಿತಿ, ಇವುಗಳ ಮನೋವೈಜ್ಞಾನಿಕ ಉಪಪತ್ತಿ ನಮಗೆಲ್ಲಿಯೂ ದೊರೆಯುವುದಿಲ್ಲ. ಶ್ರೀ ರಾಮಚಂದ್ರಜಿಯವರು ಹದಿಮೂರು ಗ್ರಂಥಿಗಳ ವಿವರಣೆಯನ್ನು ಕೊಟ್ಟು ಅವುಗಳ ಮೇಲೆ ಅದ್ಭುತ ಬೆಳಕನ್ನು ಬೀರಿದ್ದಾರೆ. ಅವುಗಳನ್ನು ಭೇದಿಸದೆ, ಸಡಿಲುಗೊಳಿಸಿ ದಾಟಬೇಕು. ಎಲ್ಲರಿಗಿಂತ ಮುಂದೆ ಹೋಗಿ, ಅವರು ಜ್ಞಾನಭೂಮಿಕೆಗಳ ಆಚೆಗಿರುವ ಅಸ್ತಿತ್ವದ ಉಚ್ಚತರ ಘಟ್ಟಗಳನ್ನು ತೋರಿಸುತ್ತಾರೆ. ಅವು ಮಾನವನಿಗೆ ಪ್ರಾಪ್ತವಾಗಬಲ್ಲ ಸರ್ವೋತ್ಕೃಷ್ಟ ಸರ್ವಾತೀತ ಸ್ಥಿತಿಗಳಾಗಿವೆ. ಆದರೆ ಆ ಘಟ್ಟದಲ್ಲಿ ಮನುಷ್ಯನ ಆತ್ಮವು ಮರ್ತ್ಯವೆಂದು ಕರೆಯಬಹುದಾದ ಎಲ್ಲವನ್ನೂ ದಾಟಿ ಅಂತಿಮ ಅಸ್ತಿತ್ವವನ್ನು ಮುಟ್ಟಿರುವುದು. ಧ್ಯಾನದ ಮೂಲಕ ಪ್ರಾಪ್ತವಾಗುವ ಜ್ಞಾನದಿಂದ, ಐತಿಹಾಸಿಕ ಪ್ರಸಿದ್ಧಿಯನ್ನು ಪಡೆದ ಕೆಲ ಶ್ರೇಷ್ಠತಮ ಸಂತರು ಹಾಗು ಋಷಿಗಳು ತಮ್ಮ ಜೀವಮಾನದಲ್ಲಿ ಯಾವ ಘಟ್ಟವನ್ನು ಮುಟ್ಟಿದ್ದರೆಂಬುದನ್ನು ಕಂಡುಕೊಳ್ಳಬಹುದು.

ಪ್ರತಿಯೊಬ್ಬನೂ ಅನ್ವೇಷಣ ಮಾಡಿ ಪ್ರವೇಶಿಸಲೆಂದು ಪ್ರತೀಕ್ಷೆಮಾಡುತ್ತಿರುವ ದಿವ್ಯಾನಂದವನ್ನು ಸ್ವತಃ ಪಡೆದು ತನ್ನಲ್ಲಿಯೆ ಪ್ರಮಾಣೀಕರಿಸಿ ನೋಡ-ಬಹುದು. ಯಾರ ಮಾನವಪ್ರೇಮವು ನಮಗೆ ತಿಳಿದಿರುವ ಎಲ್ಲವನ್ನೂ ಮೀರಿದೆಯೋ ಅಂಥ ಸರ್ವಶ್ರೇಷ್ಠ ಸದ್ಗುರುವಿನ ಪ್ರಾಮಾಣಿಕ ವಾಣಿ-ಯನ್ನು ನಾವಿಲ್ಲಿ ಕಾಣುವೆವು. ಆಂತರಿಕ ಸಂಘರ್ಷದ ಈ ಪ್ರಪಂಚದಲ್ಲಿ ಕಲ್ಯಾಣಕ್ಕೋಸ್ಕರ ವ್ಯಕ್ತಿಯನ್ನು ಅಣಿಗೊಳಿಸದೆ ವಿಶ್ವಕಲ್ಯಾಣದ ಬರಿಯ ಕೂಗನ್ನೆಬ್ಬಿಸುವುದು ಸುಲಭ. ಏಕೆಂದರೆ, ವಿಶ್ವಸಮಸ್ಯೆಯು ವಸ್ತುತಃ ವ್ಯಕ್ತಿಯ ಸಮಸ್ಯೆಯೆಂಬ ಮಾತು ಎಂದೆಂದಿಗೂ ಸತ್ಯವಾದುದು. 'ಸರ್ವ-ಮುಕ್ತಿ'ಯ ಬಗೆಗೆ ಮಾತನಾಡುವ ಜನರು ತಮ್ಮ ಸ್ವಂತ ಮುಕ್ತಿಗಾಗಿ ಕ್ವಚಿತ್ ಪ್ರಯತ್ನ ಮಾಡುವರು. ಏಕೆಂದರೆ, 'ಏಕಮುಕ್ತಿ'ಯು ಲೋಕ ಮುಕ್ತಿ'ಯ ಪ್ರಥಮ ಸೋಪಾನವೆಂಬುದು ತೀರ ಸತ್ಯ. ಎಲ್ಲರೂ ಒಂದೇ ಕಾಲಕ್ಕೆ ಮುಕ್ತರಾಗಬೇಕೆನ್ನುವುದು ಅಪೇಕ್ಷಣೀಯವಾಗಿದ್ದರೂ ಅದರ ದೈವೀಸಂಭಾವ್ಯತೆ ತೀರ ಕಡಮೆ. ಆದರೆ, ಅದೇ ಪ್ರತಿಯೊಬ್ಬನೂ ಉನ್ನತಿ-ಯನ್ನಾಗಲಿ, ಪರಿವರ್ತನೆಯನ್ನಾಗಲಿ, ಪರಾಮನೋದಶೆಯನ್ನಾಗಲಿ ಹೊಂದ ಬಯಸಿದುದಾದರೆ ಇದೇ ಜನ್ಮದಲ್ಲಿ ಸಾಧ್ಯವಾಗಬಹುದು. ಇಷ್ಟಾದರೂ ತನಗೆ ಕಾರಣ ತಿಳಿದಾಗಲಿ ತಿಳಿಯದೆಯಾಗಲಿ ತಾತ್ತ್ವಿಕ, ಭಾವನಾತ್ಮಕ ಇಲ್ಲವೆ ಬೌದ್ಧಿಕ ಪ್ರವಂಚನೆಯಿಂದಾಗಿ ಪ್ರಯತ್ನವನ್ನು ಬಿಟ್ಟುಬಿಡುವುದು ಸುಲಭ ವಾಗಿದೆ. ಅನಂತದ ಅನುಭವವನ್ನೂ ಜೀವನಸಮಸ್ಯೆಯ ಪರಿಹಾರವನ್ನೂ ವಾಸ್ತವವಾಗಿ ಪಡೆಯಬಯಸುವವರಿಗೆ ಈ ಹಲವು ಪುಟಗಳು ತುಂಬ ಉಪಯುಕ್ತವೂ ಸಹಾಯಕವೂ ಆಗುವುವು. ಈ ಅಧಿಕೃತ ವಚನಗಳಿಂದ ಅವರಿಗೆ ನಿಜವಾದ ಗುರುವಿನ ಆಶ್ರಯ ದೊರೆತು ಆತನ ಮೂಲಕ ಅವರು ಪರಮಪದದ ಅನ್ವೇಷಣ ಮಾಡುವರು. ಏಕೆಂದರೆ, ನಿಜವಾದ ಗುರುವನ್ನು ಪಡೆಯುವುದು ತೀರ ಕಠಿಣವೆಂಬ ಮಾತು ಯಥಾರ್ಥವಾದುದು. ಆದರೆ ನಿಜವಾದ ಶಿಷ್ಯನು ದೊರೆಯುವುದೂ ಅಷ್ಟೇ ಕಠಿಣವೆಂದು ಉಪನಿಷತ್ತಿನ

ಮಾತಿನಲ್ಲಿ ಇದಕ್ಕೆ ಉತ್ತರ ರೂಪವಾಗಿ ನಾವು ಹೇಳಬಹುದು. 'ಗುರು' ಪದಕ್ಕೆ ಎಲ್ಲ ರೀತಿಯಿಂದಲೂ ತೀರ ಯೋಗ್ಯರಾದವರೊಬ್ಬರು ನಮ್ಮ ನಡುವೆ ಇರುವುದು ನಮ್ಮ ಸೌಭಾಗ್ಯವೇ ಸರಿ. ಅವರನ್ನು ಪರೀಕ್ಷಿಸಿ ಅವರಿಂದ ಉಪಯೋಗ ಪಡೆಯಬೇಕೆಂಬುದೇ ಅವರ ಹಾರ್ದಿಕ ಅಪೇಕ್ಷೆ–ಯಾಗಿದೆ. ಭಾರತವು ಅವರ ಸಹಾಯಪಡೆಯುವ ಯೋಗ್ಯತೆಯನ್ನು ಹೊಂದಲಿ; ಜನರ ನಡುವೆ ಅವರ ಇರುವಿಕೆಯಿಂದ ಮಾನವಕುಲವು ಲಾಭ ಹೊಂದುವಂತಾಗಲಿ.

ನಮ್ಮಲ್ಲಿ ಅನೇಕ ಜನರು ಉನ್ನತ ಜೀವನಕ್ಕಾಗಿ ಹಂಬಲಿಸು–ತ್ತಿದ್ದಾರೆ. ಅದರ ಜೊತೆಯಲ್ಲಿಯೆ ಅನೇಕ ಧ್ವನಿಗಳು, ಅನೇಕ ಸಿದ್ಧಾಂತಗಳು ಹಾಗು ಅಸಂಖ್ಯ ಆಕಾಂಕ್ಷೆಗಳು ಇರುವುದು ಕಂಡು ಬರುತ್ತದೆ. ಕೇವಲ ಅಧ್ಯಾತ್ಮಿಕ ಪರಿಹಾರವೊಂದೇ ನಿಜವಾದ ಪರಿಹಾರ–ವಾಗಬಲ್ಲುದೆಂಬುದು ಸ್ಪಷ್ಟವಾಗಿದೆ. ನಿಜವಾದ ಅಧ್ಯಾತ್ಮವನ್ನು ಕಂಡು ಹಿಡಿಯದವರಾರೂ ಮಾನವತೆಯ ಪುನರುತ್ಥಾನದಲ್ಲಿ ವಸ್ತುತಃ ಸಹಾಯಕ–ರಾಗಲಾರರು. ಪುನರ್ಘಟನೆಯಂತೂ ದೂರದ ಮಾತಾಯಿತು. ಆದುದರಿಂದ ಅಧ್ಯಾತ್ಮಿಕ ಕ್ಷೇತ್ರದಲ್ಲಿ ಸಹ ಕೇಳಿಬರುತ್ತಿರುವ 'ಮಾನವತಾವಾದ', 'ಜೀವಕಾರುಣ್ಯವಾದ' ಮುಂತಾದ ಕೆಳಮಟ್ಟದ ಧ್ವನಿಗಳು ಅಧ್ಯಾತ್ಮದ ಆಭಾಸ ಸ್ವರಗಳಾಗಿದ್ದು ಅಧ್ಯಾತ್ಮದ ಅಭಿವ್ಯಂಜಕಗಳೇ ಹೊರತು ಸ್ವಯಂ ಅಧ್ಯಾತ್ಮವಲ್ಲ. ನಾವು ಯಾವ ಕಲಬೆರಕೆಯೂ ಇಲ್ಲದ ವಾಸ್ತವಿಕ ಅಧ್ಯಾತ್ಮದತ್ತ ಸಾಗಬೇಕಾಗಿದೆ. ಏಕೆಂದರೆ, ಇಂದಿನ ಯುಗವು ಹಿಂದಿನವು–ಗಳಿಗಿಂತ ಹೆಚ್ಚು ತೊಡಕಿನದಾಗಿದ್ದು ಜಗತ್ತಿನಾದ್ಯಂತ ಮಾನವನ ಎಲ್ಲ ವೃತ್ತಿಗಳ ಪೂರ್ಣ ರೂಪಾಂತರದ ಅಗತ್ಯವಿದೆ. ನಿಜವಾದ ಅಧ್ಯಾತ್ಮವೇ ಜಗತ್ತಿನಲ್ಲಿ ನಿಜವಾದ ಐಕ್ಯವನ್ನು ಸಾಧಿಸಬಲ್ಲುದು. ಉಳಿದೆಲ್ಲ ಅಂತರರಾಷ್ಟ್ರೀಯ ಹಾಗು ಅಂತರ್ಜನಾಂಗದ ಸಹಕಾರೋದ್ಯಮಗಳು

ಮಾನವ ಸಮಸ್ಯೆಯ ಅಂತರಾಳವನ್ನು ಎಂದಿಗೂ ಮುಟ್ಟಲಾರವು. ಆದುದರಿಂದ ವಾಸ್ತವಿಕ ಹಾಗು ಅಂತಿಮ ವಸ್ತುವನ್ನೇ ಹೊಂದಲು ಯತ್ನಿಸುವುದು ಗಂಭೀರ ಪ್ರಕೃತಿಯ ಜನರ ಕರ್ತವ್ಯವಾಗಿದೆ. ಹಾಗೆಂದು ನಾವು ಮನುಷ್ಯರನ್ನು ಕೇವಲ ಆದಿಮ ಹಾಗು ಮೂಲವಸ್ತುವಿನಲ್ಲಿ ರೂಪಾಂತರಗೊಳಿಸಿ ಅನುಗಾಲವೂ ಅದರಲ್ಲಿಯೇ ವಿಲೀನಗೊಳಿಸಬಯಸುವೆವೆಂದು ತಿಳಿಯಬಾರದು. ತದ್ವಿರುದ್ಧವಾಗಿ ಪ್ರತಿಯೊಬ್ಬನೂ ಅಂತಿಮ ಸ್ಥಿತಿಯ ಅನುಭವ, ಜ್ಞಾನಗಳನ್ನು ಮರಳಿ ಹೊಂದುವವರೆಗೆ ಸರ್ವಮುಕ್ತಿಯು ಸಾಧ್ಯವಿಲ್ಲ. ಮುಕ್ತಿ ಪಡೆದ ನಂತರ ವ್ಯಕ್ತಿಯಲ್ಲಿ 'ಸೃಷ್ಟಿಕಿರಣವು' ನಂದಿ ಹೋಗಿ ಪ್ರಪಂಚವು ಬಡವಾಗುವುದೆಂದೂ ದೇವರು 'ಲೀಲಾಕಿರಣ' ರಹಿತನಾಗುವನೆಂದೂ ಇದರರ್ಥವಲ್ಲ. ಆದುದರಿಂದ ಶ್ರೀ ರಾಮಚಂದ್ರಜಿಯವರು ವ್ಯಕ್ತಿಯ ಪರಿಪೂರ್ಣತೆ ಹಾಗು ಸಾಕ್ಷಾತ್ಕಾರದ ಬಗೆಗೆ ಆತುರಭಾವದಿಂದ ಪ್ರೇರಿತರಾಗಿ ಈ ಪುಸ್ತಕವನ್ನು ಪ್ರಪಂಚದ ಕೈಗೆ ಕೊಟ್ಟಿದ್ದಾರೆ. ಯುಗಯುಗಗಳ ಅಭಿಲಾಷೆಯ ಪರಿಪೂರ್ಣತೆಯನ್ನು ಕಾಣಲು ಅವರು ಬಹುಕಾಲ ಬಾಳಲಿ.

ತಿರುಪತಿ
(ದಕ್ಷಿಣ ಭಾರತ)

ಡಾ. ಕೆ. ಸಿ. ವರದಾಚಾರಿ,
ಎಂ.ಎ., ಪಿಎಚ್.ಡಿ.
ರೀಡರ್, ದರ್ಶನ ವಿಭಾಗ,
ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯ.

# ಅರಿಕೆ

ಪೂಜ್ಯಗುರುಗಳ ಪರಮಾನುಗ್ರಹದಿಂದ **‘ಅನಂತ ಕೀ ಓರ್’** ಎಂಬ ಅವರ ಹಿಂದೀ ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸಿದ್ದೇನೆ. ಇದರಲ್ಲಿ ಬರುವ ಸಂಗತಿಗಳೆಲ್ಲ ಕೇವಲ ಅನುಭವವೇದ್ಯವಾದುದರಿಂದ ಆ ಮಟ್ಟದ ಅನುಭವ ಪಡೆದವರಿಗೇ ಇದರ ಸಜೀವಾನುವಾದ ಮಾಡಲು ಸಾಧ್ಯ. ನನಗಾದರೋ ಅನುವಾದಮಾಡುವ ಚಪಲತೆಯೂ ಅಂಥ ಉನ್ನತ ಮಟ್ಟದ ಅನುಭವಗಳನ್ನು ಪಡೆಯಬೇಕೆಂಬ ಲವಲವಿಕೆಯೂ ಇದ್ದುದರಿಂದ ಅಂಜುತ್ತ ಅಂಜುತ್ತ ಈ ಕಾರ್ಯಕ್ಕೆ ಕೈ ಹಾಕಿದೆ. ಗುರುದೇವರ ಆಶೀರ್ವಾದದಿಂದಲೇ ಈ ಕೆಲಸ ಮುಗಿದಿದೆಯೆಂದಿಷ್ಟೇ ಹೇಳಬಲ್ಲೆ.

ನನ್ನ ಗುರುಬಂಧುಗಳಾದ ಶ್ರೀ ರಾಘವೇಂದ್ರರಾಯರೂ ಇನ್ನಿತರ ಸತ್ಸಂಗಿ ಬಾಂಧವರೂ ಇದನ್ನು ಆಮೂಲಾಗ್ರವಾಗಿ ಪರಿಶೋಧಿಸಿ ಪ್ರಕಟನೆಗೆ ಯೋಗ್ಯವಾಗುವಂತೆ ಮಾಡಿಕೊಟ್ಟಿದ್ದಾರೆ. ಅವರೆಲ್ಲರಿಗೂ ನಾನು ಋಣಿ.

ಯಾರ ಅಹೇತುಕ ಕೃಪೆಯು ಸದಾ ನನ್ನ ಬೆಂಗಾವಲಿದ್ದು ನನ್ನನ್ನು ಯುಕ್ತಕಾರ್ಯಗಳಲ್ಲಿ ತೊಡಗಿಸುತ್ತ ಬಂದಿದೆಯೋ ಆ ಪೂಜ್ಯಗುರುದೇವರ ಪಾದಪದ್ಮಗಳಲ್ಲಿ ಈ ಕೃತಿಯನ್ನು ಭಕ್ತಿಯಿಂದ ಸಮರ್ಪಿಸುತ್ತೇನೆ.

ಕಲ್ಬುರ್ಗಿ
ಸೌಮ್ಯ ಸಂವತ್ಸರ
ಶ್ರೀ ಕೃಷ್ಣಜನ್ಮಾಷ್ಟಮಿ

**ಶ್ರೀ. ಅ. ಸರ್ನಾಡ.**

# ಭೂಮಿಕೆ

ಈ ಕಿರುಹೊತ್ತಗೆಯನ್ನು ಬರೆದುದರ ಉದ್ದೇಶ ಕೇವಲ ಇಷ್ಟೆ: 'ಜ್ಞಾನ'ವೆಂದರೇನು. ಯಾವ ಯಾವ ಅವಸ್ಥೆಯಲ್ಲಿ ಜ್ಞಾನದ ಯಾವ ಯಾವ ಸ್ಥಿತಿಗಳಿರುತ್ತವೆ–ಎಂಬುದರ ಗುಟ್ಟು ಜನರಿಗೆ ತಿಳಿಯಲಿ ಎಂಬುದು. ನಮ್ಮಲ್ಲಿಯ ಧಾರ್ಮಿಕ ಗ್ರಂಥಗಳಲ್ಲಿ ಜ್ಞಾನದ ಬಗೆಗೆ ಬಹಳಷ್ಟು ಬರೆಯ–ಲಾಗಿದೆಯಾದರೂ ಇಂದು ನಾಳಿನ ಲೇಖಕರು ಈ ಹಳೆಯ ವಿಷಯವನ್ನು ತಮ್ಮದೇ ಆದ ಬಣ್ಣದಲ್ಲದ್ದಿ ಜನತೆಯ ಮುಂದಿಟ್ಟರು. ಇದರ ಹೊಣೆಯು ಹೆಚ್ಚಾಗಿ ಗಿರಾಕಿಗಳಿಗೆ ಗೋದಿಯನ್ನು ತೋರಿಸಿ ಜವೆಯನ್ನು ಮಾರುವಂಥ ಜನರ ಮೇಲೆ ಇದೆ. ಇದರ ಪರಿಣಾಮವೇನಾಗಬಹುದು, ಇದರಿಂದ ಎಷ್ಟು ವಿಷ ಹರಡಬಹುದು ಎಂದು ಅವರು ವಿಚಾರ ಮಾಡಲಿಲ್ಲ. ಅಮೃತದ ಹೆಸರಿನಿಂದ ವಿಷವನ್ನು ಕೊಡಲಾಯಿತು. ವಾಸ್ತವಿಕವಾಗಿ ಅಧ್ಯಾತ್ಮಿಕತೆಯ ಕತ್ತನ್ನು ಹಿಸುಕಲಾಯಿತು. ಹೀಗೆ ಮಾಡಿದವರಂತೂ ಸ್ವತಃ ಯಾವ ಪರಮಾರ್ಥವನ್ನೂ ಪಡೆಯಲಿಲ್ಲ. ಆದರೆ ಪರರನ್ನಂತೂ ಕೆಡಿಸಿಯೇಬಿಟ್ಟರು, ದೊಡ್ಡ ದೊಡ್ಡ ವ್ಯಾಖ್ಯಾನಗಳೂ ಓಜಃಪೂರ್ಣವಾದ ಪ್ರವಚನಗಳೂ ಕೊಡಲಾಗುತ್ತವೆ ; ಜ್ಞಾನದ ಮಾತುಗಳು ಹೇಳಲಾಗುತ್ತವೆ. ಮತ್ತು ಇದೇ ಯೋಗ್ಯತೆಗೇ ಇಂದು ನಾಳೆ ಮಹತ್ತ್ವ ಕೊಡಲಾಗುತ್ತದೆ. ಜನತೆ ಹೇಗಿದ್ದಿತೋ ಅವರಿಗೆ ಅಂಥವರೇ ಮುಂದಾಳುಗಳು, ಪ್ರತಿನಿಧಿಗಳು ದೊರೆತರು. ಜನರು ಅವರನ್ನು ಹೊಗಳತೊಡಗಿದರು ; ಮತ್ತು ಅವರು ಜನರ ಮೇಲೆ ತಮ್ಮ ಪ್ರಭಾವ ಬೀರಲಾರಂಭಿಸಿದರು. ಸಾಧಾರಣ ಜನತೆಯಾದರೂ "ಈ ಮಹಾತ್ಮರು ನಿಜವಾಗಿ ಅಧ್ಯಾತ್ಮಿಕತೆಯ ಮಾರ್ಗ–ವನ್ನರಿತವರು, ಸಮ್ಮಾನಕ್ಕೆ ಯೋಗ್ಯರು" ಎಂದು ತಿಳಿಯಿತು. ಇದರ ಪರಿಣಾಮವೆಂದರೆ ಅವರ ಉದರನಿರ್ವಾಹಕ್ಕೆ ದಾರಿಯಾಯಿತು. ಅಥವಾ

ಅವರ ದುಡಿತಕ್ಕೆ ಸಂಮಾನಸಹಿತ ಕೂಲಿ ಸಿಕ್ಕಿತೆಂದರೂ ಸರಿಯೆ. ಈಗ ಯಾರಾದರೂ ಅವರನ್ನು ಕುರಿತು, "ನೀವು ಉಪದೇಶ ಮಾಡಿದುದು ನಿಮ್ಮ ಸ್ವಂತದ ಅನುಭವವೋ ?" ಅಥವಾ ಪುಸ್ತಕಗಳ ಮೂಲಕ ದೊರೆತ ಹೆರವರ ಅನುಭವವೋ ?" ಎಂದು ಕೇಳಿದರೆ. "ಅನುಭವವು ಯಾರದೇ ಇರಲಿ ; ಜ್ಞಾನವು ಇದೇ" ಎಂದುತ್ತರ ಬರುವುದು. ಕೆಲಜನರಂತೂ ಎಷ್ಟು ಮುಂದುವರಿದರೆಂದರೆ ಅವರ ದೃಷ್ಟಿಯಲ್ಲಿ ಕೇವಲ ಸಂಸಾರವನ್ನು ಅಸಾರ– ವೆಂದು ತಿಳಿಯುವುದು, ಅದರ ನಶ್ವರತೆ ಹಾಗು ಅಸ್ಥಿರತೆಯ ಊಹೆ ಮಾಡುವುದು, ಇಲ್ಲವೆ ಈಶ್ವರನು ಚಿರಂತನ ಮತ್ತು ಶಾಶ್ವತನೆಂದು ಒಪ್ಪಿಕೊಳ್ಳುವುದು — ಇದೇ ನಿಜವಾದ ಜ್ಞಾನವಾಗಿದೆ. ಇದರ ಅರ್ಥವಿಷ್ಟೆ : ಅವರೆದುರು ಮಾವಿನಹಣ್ಣಿನ ಸಿಹಿಯನ್ನು ವರ್ಣಿಸಿದರೆ ಹಣ್ಣು ತಿಂದಂತೆಯೆ ಆಯಿತು. ಮಾವಿನ ಹಣ್ಣಿನ ರುಚಿಯ ವರ್ಣನೆಯನ್ನು ಕೇಳುವ ಮಾತ್ರ– ದಿಂದಲೇ ಹೊಟ್ಟೆ ತುಂಬುವುದೇನು ? ಹಸಿದವನಿಗೆ, ರೊಟ್ಟಿಗಳಿಂದ ಅವನ ಹಸಿವು ಹಿಂಗಬಲ್ಲುದೆಂಬುದನ್ನು ತಿಳಿಸುವುದರಿಂದಲೇ ಅವನ ಹಸಿವು ಅಡಗುವುದೆ ? ಆ ಮೇಲೆ ಆತನಿಗೆ ರೊಟ್ಟಿ ತಿನ್ನುವ ಅಗತ್ಯವಿಲ್ಲವೆ ? ಸ್ವಾರಸ್ಯವೆಂದರೆ, ತಾವು ತುಂಬಾ ಮಾತನಾಡಬೇಕೆಂದು ಅವರ ಅಪೇಕ್ಷೆ ; ಮತ್ತು ಮನಸ್ಸಿನಲ್ಲಿಯೆ ತಾವು ಜ್ಞಾನಿಗಳೆಂದು ತಿಳಿದಿರುವರು. ಇದಂತೂ ಆ ವೇಷಧಾರಿಯ ಕಥೆಯಂತಾಯಿತು : ಯಾವನೋ ಒಬ್ಬ ನಾಟಕದಲ್ಲಿ ಅರಸನ ಪಾತ್ರ ವಹಿಸಿದ. ನಾಟಕ ಮುಗಿದ ಮೇಲೂ ತಾನು ಅರಸನೆಂದೇ ತಿಳಿದು ಪೇಟೆಯಲ್ಲಿ ತಿರುಗಾಡಹತ್ತಿದ. ಹೀಗಾದರೆ, ಒಂದು ಸಾಮ್ರಾಜ್ಯದಲ್ಲಿ ಒಬ್ಬ ಸಮ್ರಾಟನಿಗೆ ಸಿಗತಕ್ಕ ಮರ್ಯಾದೆ–ಪ್ರತಿಷ್ಠೆಗಳು ಅವನಿಗೆ ಸಿಗಬಲ್ಲುವೆ ? ತನ್ನ ಕಡೆಯಿಂದ ಬೇಕಾದ ವೇಷ ಹಾಕಿಕೊಳ್ಳಲಿ, ಅದರಿಂದ ವಾಸ್ತವಿಕತೆ ಬರುವುದಿಲ್ಲ. ಅಲ್ಲದೆ ಜಾಣನಾದವನು ಈ ಮಹಾಶಯರ ಆಳವೆಷ್ಟೆಂಬುದನ್ನು ತಿಳಿದುಕೊಳ್ಳಬಲ್ಲನು ; ಅವರ ಅಧ್ಯಾತ್ಮಿಕ ಗಳಿಕೆ, ಸಿದ್ಧಿಗಳನ್ನು ಅಳೆಯಬಲ್ಲನು. ತಮ್ಮ ವಿದ್ವತ್ತೆಯ

ತ್ಪ್ರಭಾವದಿಂದ ಹೆರವರ ಬಾಯಿ ಮುಚ್ಚುವರೆಂಬುದೇನೋ ನಿಜ. ಆದರೆ ಅವರ ಸತ್ಯವು ಬಯಲಿಗೆ ಬಂದೇ ಬರುವುದು. ಯಾವ ಜನಾಂಗದಲ್ಲಿ ಇಂಥ ಜನರು ಹುಟ್ಟುವರೋ ಆ ಜನಾಂಗಕ್ಕೆ ದೇವರೇ ಗತಿ. ಸತ್ಯದೊಡನೆ ಅವರಿಗೆ ಯಾವ ಸಂಬಂಧವೂ ಇಲ್ಲ ; ಕೇವಲ ಪುಸ್ತಕಗಳೊಂದಿಗೇ ಅವರ ಸಂಬಂಧ. ತಾವು ಸ್ವಂತ ದಾರಿ ನಡೆಯುವುದನ್ನು ಅರಿಯರು ; ಪರರಿಗೆ ದಾರಿ ತೋರುವುದನ್ನು ಮಾತ್ರ ಬಲ್ಲರು. ಅವರಿಗೆ ಇರುವಿಕೆಯು ಗೊಡವೆ ಬೇಡ ; ಸ್ಮರಣೆಯಂತೂ ಅವರ ಹಿಡಿತದಲ್ಲಿಯೇ ಇಲ್ಲ. ಅರ್ಥಾತ್ ಸಹನಶೀಲತೆಯನ್ನು ತೋರುವುದು ಅವರ ಸಂತ ಆಚರಣೆಗೆ ವಿರುದ್ಧವಾಗಿದೆ. ಸೇವೆ ಮಾಡಿಸಿಕೊಳ್ಳುವುದು ತಮ್ಮ ಅಧಿಕಾರವೆಂದು ತಿಳಿಯುವರು ; ಆದರೆ ಸೇವೆ ಮಾಡುವುದು ಮಾತ್ರ ಅವರ ವಿಚಾರದಲ್ಲಿ ಮಹತ್ತ್ವ ಹೀನವಾಗಿದೆ. ಜ್ಞಾನಕ್ಕೂ ಈ ಮಾತುಗಳಿಗೂ ಯಾವ ಸಂಬಂಧವೂ ಇಲ್ಲ–ವೆಂಬಂತಿದೆ. ಜ್ಞಾನವೆಂಬುದು ಚಂಚಲ ವ್ಯಕ್ತಿಗಳಿಗೆ ಒಂದು ಪುಸ್ತಕೀಯ ತರಂಗವಿದ್ದಂತೆ. ಈ ತರಂಗದ ಪ್ರವಾಹವನ್ನು ಜನತೆಯ ಕಡೆಗೆ ತಿರುಗಿಸುವುದಷ್ಟೆ ಇವರ ಕೆಲಸ. ಆಯಿತು, ಇದೇ ಅವರ ದೊಡ್ಡಸ್ತಿಕೆ. ಜ್ಞಾನದ ದಶೆಯನ್ನು ಹೇಗೆ ಉಂಟು ಮಾಡಬೇಕು, ಗ್ರಂಥಿಗಳ ರಹಸ್ಯವನ್ನು ಹೇಗೆ ಅರಿತುಕೊಳ್ಳಬೇಕು, ಲಯ ಅವಸ್ಥೆಯನ್ನು ಹೇಗೆ ಪಡೆಯಬೇಕು, ಜ್ಯೋತಿರ್ಮಯ ದಶೆಗಳು ಹೇಗೆ ಪ್ರಾಪ್ತವಾಗಬಲ್ಲುವು, ಅಲ್ಲಿಯ ಜ್ಞಾನವು ಹೇಗೆ ದೊರೆಯಬಲ್ಲುದು ಎಂಬುದರ ವಿಚಾರವೇ ಅವರಿಗಿಲ್ಲ. ಇವುಗಳ ಸಾಧನಗಳೂ ಅವರಿಗೆ ಗೊತ್ತಿಲ್ಲ. ಯಾರನ್ನಾದರೂ ಕೇಳಿ ಅಭ್ಯಾಸ ಮಾಡುವ ಇಚ್ಛೆಯೂ ಅವರಿಗಿರುವುದಿಲ್ಲ. ಏಕೆಂದರೆ, ಅನ್ಯರೂ ತಮ್ಮಂಥವರೇ ದೊರೆಯುವಾಗ ಯಾರನ್ನು ಕೇಳಬೇಕು ? ಗೃಹಸ್ಥರಿಗಂತೂ ಅವರು ಬೋಧಿಸುವುದನ್ನೇ ಬಲ್ಲರು. ಅವರಿಂದ ಕಲಿಯುವ ಪ್ರಶ್ನೆಯೆ ಅವರ ಮನಸ್ಸಿನಲ್ಲಿ ಸುಳಿಯುವುದಿಲ್ಲ. ಅಂಥ ಗೃಹಸ್ಥರ ಯೋಗ್ಯತೆಯ ಕಲ್ಪನೆಯೂ ಈ ಗುರುಗಳಿಗೆ ಆಗುವುದಿಲ್ಲ. ಎಲ್ಲೋ ಸ್ವಲ್ಪಮಟ್ಟಿಗೆ

ಆದರೂ ಗೃಹಸ್ಥರನ್ನು ಕೇಳುವುದು, ಅವರಿಂದ ಕಲಿಯುವುದು ಅವರ ಮಾನ-ಮರ್ಯಾದೆಗಳಿಗೆ ವಿರುದ್ಧವಾಗುವುದು. ಇದೇ ಅಹಂಕಾರವೇ ಅವರ ಆಸನವನ್ನು ಬುಡಮೇಲು ಮಾಡಿತು. ಕೇವಲ ಶೃಂಗಾರವಷ್ಟೆ ಉಳಿಯಿತು. ಸ್ಥಿತಿಯು ಹೀಗಾದಾಗ ಅದಕ್ಕೆ ಅನುರೂಪವಾದ ಸಂಗತಿಗಳು ಹುಟ್ಟತೊಡಗಿದುವು. ಪ್ರತಿಯೊಂದು ಪದಾರ್ಥವು ವಿರೂಪ-ಗೊಂಡಿತು ; ಮತ್ತು ಅವುಗಳಿಂದ ವಿಕೃತ ಪರಿಣಾಮವೇ ಉಂಟಾಗ ತೊಡಗಿತು. ಯೋಗದ ವಾಸ್ತವತೆಯು ಲುಪ್ತವಾಯಿತು. ಜ್ಞಾನಿಯಾಗಲು ರಟಂತಿಯು ಆರಂಭವಾಯಿತು. ಇದನ್ನೇ ಪೂರ್ಣವೆಂದು ತಿಳಿದು ಎರಡನೆ-ಯವರಿಗೆ ಹೇಳತೊಡಗಿದರು. ವಾಸ್ತವಿಕ ತತ್ತ್ವವು ಆವರಿಗೆ ಅಪರಿಚಿತವಾಗಿಯೆ ಉಳಿಯಿತು. ಮೂಲದ ಅನುಕರಣ ಮಾಡಲೂ ಅವರಿಂದಾಗಲಿಲ್ಲ. ಇಷ್ಟೇ ಅಲ್ಲ, ಅದರ ವಿರುದ್ಧ ಮಾತುಗಳೇ ಅವರ ವಿಚಾರದಲ್ಲಿ ಬರತೊಡಗಿದುವು ; ಹಾಗು ಅವನ್ನೇ ಅವರು ಕಲಿಸತೊಡಗಿದರು. ಒಂದು ವೇಳೆ ಭಕ್ತಿಯ ಕಡೆಗೆ ಒಲಿದರೆ ಮಾನವೀಯ ಗುಣಗಳ ಚಮತ್ಕಾರ ತೋರಿಸತೊಡಗಿದರು. ಜ್ಞಾನದ ಕಡೆಗೆ ಒಲಿದರೆ ಅವರ ಸ್ವೇಚ್ಛಾಚಾರವು ನಗ್ನರೂಪದಲ್ಲಿ ಕಾಣಿಸಿಕೊಳ್ಳತೊಡಗಿತು, ಅವರ ಒಲ್ಲಿಯು ಯಾವುದರಿಂದ ತೋರುದ್ದಿದ್ದಿತೋ ಅದನ್ನೇ ಅವರು ಹಿಂಡಿದರು ; ಅರ್ಥಾತ್ ಅವರಲ್ಲಿದ್ದ ವಿಕಾರಗಳೇ ಅನ್ಯರಲ್ಲಿ ಸೇರಿದುವು. ಜನಸಾಮಾನ್ಯರು ಅವರ ಸರಳ ನಿಯಮಗಳಿಗೆ ತಮ್ಮ ಹೃದಯದಲ್ಲಿ ಸ್ಥಾನಕೊಟ್ಟು ವಸ್ತುತಃ ಅತ್ಯಂತ ವಿಕೃತ ದಶೆಗೆ ಇಳಿದರು. ಜ್ಞಾನಪ್ರಾಪ್ತಿಗೆ ವಿರುದ್ಧವಾದ ಸಾಧನಗಳನ್ನೇ ನಾವು ಪ್ರಯೋಗಿಸುತ್ತಿದ್ದರೂ ಜ್ಞಾನಿಗಳೆನಿಸುವ ಗರ್ವವು ಹಾಗೆಯೆ ಉಳಿದಿದೆ. ಯಾರು ಏನೇ ಹೇಳಲಿ, ಅವರಿಗೆ ಅದರ ಚಿಂತೆಯೆಲ್ಲಿ ? ತಾವು ಆಡುತ್ತಿರುವ ಮಾತುಗಳೇ ಅವರಿಗೆ ಪರಮ ಪ್ರಯೋಜನ. ಸರಿಯಾದ ಮಾತನ್ನು ತಮಗೆ ಹೇಳುವಷ್ಟಾದರೂ ಬೇರೆಯವರಿಗೆ ಅಧಿಕಾರವನ್ನು ಕೊಡುವುದಿಲ್ಲ. ಏಕೆಂದರೆ ಅವರು ತಮ್ಮನ್ನು ತಾವು ಪರಿಪೂರ್ಣರೆಂದು

ತಿಳಿಯುವರು. ಆದ್ದರಿಂದಲೇ ಹೀಗೆ ಹೇಳುವ ಸಂಪೂರ್ಣ ಅಧಿಕಾರ ಅವರಿಗಿದೆ. ನಿಯತಿಯು ಯಾವ ಕಡೆಗೆ ಒಯ್ಯಬೇಕೆಂದಿರುವುದು ಎಂಬುದರ ಅರಿವು ಇವರಿಗಿಲ್ಲ; ಏಕೆಂದರೆ ಅವರ ನಿಲುಕು ಅಲ್ಲಿಯವರೆಗೆ ಇಲ್ಲ. ಇನ್ನು ಮುಂದೆ ಎಚ್ಚರಗೊಳ್ಳಬೇಕೆಂಬುದನ್ನೂ ಅವರು ಅರಿಯರು.

ಈ ಪುಸ್ತಕದಲ್ಲಿ ವರ್ಣಿಸಲಾದ ಸ್ಥಿತಿಗಳ ಮೇಲೆ ಯಾರಾದರೂ ಪ್ರಭುತ್ವ ಪಡೆದುಕೊಂಡರೆ ಅವರು ನಿಜವಾಗಿಯೂ ಜ್ಞಾನಿಗಳೆನ್ನಿಸಿಕೊಳ್ಳಲು ಯೋಗ್ಯರು. ಅದಕ್ಕಿಂತ ಮುಂದೆ ಹೋದರೆ ಗುರುಗಳಾಗಲು ಅರ್ಹರು. ಮತ್ತು ಅದಕ್ಕೂ ಮುಂದೆ ಹೋಗಿ ವಿರಳ ಪುರುಷರೇ ಪಡೆಯುವ ಸ್ಥಿತಿಯನ್ನು ಪಡೆದುದಾದರೆ ಅವರಿಗೆ 'ಸದ್ಗುರು' ಎಂಬುದೇ ಯೋಗ್ಯ ಶಬ್ದವಾಗಬಲ್ಲುದು. ಅನರ ನಂತರ ಅವರಿಗೆ ತಿಳಿಯದ ಯಾವ ರಹಸ್ಯವೂ ಉಳಿಯುವುದಿಲ್ಲ.

ಈ ಪುಸ್ತಕವನ್ನು ನಾನು ಯಾರನ್ನೂ ಆಕ್ಷೇಪಿಸಬೇಕೆಂಬ ವಿಚಾರದಿಂದ ಬರೆದಿಲ್ಲ. ಆದರೆ, ಇದರಿಂದ ಜ್ಞಾನಿಗಳೆನ್ನಿಸಿಕೊಳ್ಳುವವರು ಅಹಂಕಾರದಿಂದ ಮುಕ್ತರಾಗಿ ನಿಜತ್ವದಲ್ಲಿ ನೆಲೆಸಲಿ; ಕಾಲಪರಿವರ್ತನೆಯಲ್ಲಿ ಅಥವಾ ಒಳ್ಳೆಯ ಕಾಲವನ್ನು ತರುವುದರಲ್ಲಿ ಸಹಾಯಕರಾಗಲಿ ಎಂಬ ಭಾವನೆಯಿಂದ ಬರೆದಿದ್ದೇನೆ. ಭಗವತ್ಕೃಪೆಯಿಂದ ಹಾಗೆಯೆ ಆಗಲಿ. ಕಾಲವು ಸುಧಾರಿಸಿಯೆ ತೀರುವುದು. ಆದರೆ ಇಂಥ ಜನರೂ ಅದರಲ್ಲಿ ಪಾಲುಗೊಂಡರೆ ಮತ್ತಷ್ಟು ಒಳ್ಳೆಯದಾಗುವುದು.

ಗ್ರಂಥಕರ್ತ.

# ಜ್ಞಾನ ಪ್ರಕರಣ

ಸೃಷ್ಟಿನಿರ್ಮಾಣದ ಸಮಯ ಬಂದಾಗ ಸಿದ್ಧತೆಗಳಾಗತೊಡಗಿದವು. ಧಾರೆಗಳು ಪ್ರವಹಿಸಿದುವು. ಕಂಪನ ಹುಟ್ಟಿತು; ತೊಡಕುಗಳು ಬೀಳತೊಡಗಿದುವು. ವೇಗವು ಹುಟ್ಟಿಕೊಂಡಿತು. ಮಂಥನ ಕಾರ್ಯವು ಆರಂಭವಾಯಿತು. ಕ್ರಿಯೆ–ಪ್ರತಿಕ್ರಿಯೆಗಳಾಗತೊಡಗಿದವು. ಈ ಕ್ರಮವು ಬಹುದಿನಗಳವರೆಗೆ ನಡೆಯಲು, ವಸ್ತುಗಳು ವ್ಯಕ್ತವಾಗಲಾರಂಭಿಸಿದುವು. ಸೃಷ್ಟಿಯು ರಚನೆಯಾಗತೊಡಗಿತು. ಜಡ–ಚೇತನ ಸಮುದಾಯವು ಉತ್ಪನ್ನವಾಗತೊಡಗಿತು. ಮೆಲ್ಲ ಮೆಲ್ಲನೆ ಎಲ್ಲ ವಸ್ತುಗಳೂ ಪ್ರಕಾಶಕ್ಕೆ ಬಂದುವು. ಪ್ರಪಂಚವು ರಚಿತವಾಯಿತು. ಗತಿಶೀಲತೆಯು ಆರಂಭವಾಗಿ ಎಲ್ಲಿಯವರೆಗೆ ಮುಂದುವರಿಯಿತೆಂದರೆ, ಅದರ ಮೂಲದಲ್ಲಿದ್ದ ಗತಿಹೀನತೆಯ ವಿಚಾರವು ತರಂಗಿತವಾಗತೊಡಗಿತು. ಇದೇ ದರ್ಶನ ಶಾಸ್ತ್ರದ ಆಧಾರವಾಯಿತು. ಬುದ್ಧಿಯ ಓಡಾಟವು ಇಲ್ಲಿಂದಲೇ ಆರಂಭವಾಗುವುದು. ತನಗಿಂತ ಮೇಲಿನ ವಸ್ತುವಿನ ಶೋಧವು ಇಲ್ಲಿಯೇ ಆರಂಭವಾಯಿತು. ಅರ್ಥಾತ್ ಧರ್ಮದ ತಳಪಾಯ ಬಿದ್ದಿತು. ಗತಿಶೀಲತೆಯಂತೂ ನಮ್ಮಲ್ಲಿ ಇದ್ದೇ ಇತ್ತು. ಈಗ ನಾವು ಅದರ ಅನಸ್ತಿತ್ವವನ್ನು ಕುರಿತು ವಿಚಾರಮಾಡತೊಡಗಿದೆವು. ಅನಸ್ತಿತ್ವದ ವಿಷಯವಾಗಿ ಆಲೋಚನೆ ಮಾಡಿದಾಗ ಅದಕ್ಕಿಂತ ಮೊದಲಿನ ವಸ್ತು ಅರ್ಥಾತ್ ಗತಿಹೀನತೆಯ ತಿಳಿವಳಿಕೆಯಾಯಿತು. ಈ ಪ್ರಕಾರ ಗತಿಶೀಲತೆಯು ನಮಗೆ ಅದಕ್ಕಿಂತ ಮೊದಲಿನ ದಶೆಯ– ಎಂದರೆ, ಗತಿಹೀನತೆಯ– ಸಮಾಚಾರ ಕೊಟ್ಟಿತು. ಮತ್ತು ಗತಿಹೀನತೆಯು ನಮಗೆ ಗತಿಶೀಲತೆಯ ಅರ್ಥವನ್ನು ತಿಳಿಸಿತು. ಈಗ ಪರಸ್ಪರ ವಿರೋಧಿ ವಸ್ತುಗಳ ಅರ್ಥ ನಮಗೆ

ತಿಳಿಯಿತು. ಗತಿಶೀಲತೆಯ ಮುಂಚಿನ ಸ್ಥಿತಿಯು ನಮ್ಮ ವಿಚಾರದಲ್ಲಿ ಬಂದಾಗ ಅದು ಗತಿಹೀನತೆಯ ಸ್ಥಿತಿಯೇ ಇದ್ದಿತು. ಈಗ ನಾವು ಗತಿಶೀಲತೆಯ ಆನಂದದೊಂದಿಗೆ ಪರಿಚಿತರಾಗಿದ್ದೆವು; ಅದರ ಆಸ್ವಾದನವನ್ನು ಎಷ್ಟರಮಟ್ಟಿಗೆ ಮಾಡಿದ್ದೇವೆಂದರೆ, ನಮ್ಮಲ್ಲಿ ಶಾಂತಿಯ ವಿಚಾರವು ತಾನಾಗಿಯೇ ಹುಟ್ಟಿಕೊಂಡಿತು. ಗತಿಹೀನತೆಯ ಶೋಧವು ಪ್ರಾರಂಭವಾದಾಗ ನಮ್ಮ ದೃಷ್ಟಿಯು ಶಾಂತಿಯಮೇಲೆ ನೆಲೆಸಿತು. ಅದೊಂದು ಆನಂದದಾಯಕ ವಸ್ತುವೆಂದು ಊಹಿಸಿದೆವು. ಆದರೆ ವಾಸ್ತವವಾಗಿ ಈ ಶಾಂತಿ ಮತ್ತು ಆನಂದ ಏನಿದೆ ? ಇದರ ಸ್ವಾದವೆಂತಹುದು ?–ಎಂಬುದು ಇದುವರೆಗೂ ನಮಗೆ ತಿಳಿದಿಲ್ಲ. ಅನುಭವವು ತಿಳಿವಳಿಕೆಯನ್ನು ಹೆಚ್ಚಿಸಿತು. ಇದೇನೋ ಒಂದು ಪದಾರ್ಥವಿದೆಯೆಂದು ತಿಳಿದಿರುವೆವಾದರೂ ಅದರ ರುಚಿಯನ್ನು ಇದುವರೆಗೂ ನೋಡಿಲ್ಲ. ಇದು ಜ್ಞಾನದ ಆರಂಭಾವಸ್ಥೆ. ಸಾಂಸಾರಿಕರು ಈ ತಿಳಿವಳಿಕೆಗೆ ಜ್ಞಾನವೆನ್ನುವರು. ಇವರರ್ಥವೇನೆಂದರೆ, ಶಾಂತಿಯೆಂಬ ಅವಸ್ಥೆಯ ಅಸ್ತಿತ್ವವೂ ಇದೆಯೆಂದು ನಮಗೆ ತಿಳಿದಿದೆ. ಸಾಮಾನ್ಯವಾಗಿ ಪ್ರಾಪಂಚಿಕ ಜನರ ಸ್ಥಿತಿಯು ಇದೇ ಆಗಿದೆ. ಇಷ್ಟು ಮಾತು ತಿಳಿದರೆ ಸಾಕು, ಜ್ಞಾನಿಗಳ ಪಟ್ಟಿಯಲ್ಲಿ ಹೆಸರು ಬರೆಸಲಾಗುವುದು. ಪ್ರಾಪಂಚಿಕ ಜನರ ದೃಷ್ಟಿಯಲ್ಲಿ ಇದೇ ಜ್ಞಾನದ ಮಹತ್ವ.

ಈಗ, ಈ ಪದಾರ್ಥ ಏಕೆ ಬಂದಿತು ? ಜಡ ಹಾಗು ಚೈತನ್ಯದ ಗ್ರಂಥಿಯೆ ಇದರ ಮೂಲವಾಗಿದೆ. ವಿಷ ಮತ್ತು ವಿಷನಾಶಕ ಹೆಚ್ಚಾಗಿ ಒಂದಕ್ಕೊಂದು ಸಮೀಪವೇ ಸಿಕ್ಕುತ್ತವೆ. ನಾವು ಜಡತೆಯಲ್ಲಿದ್ದಾಗ ಚೇತನತೆಯ ವಿಚಾರ ಬರುವುದು ಅವಶ್ಯಕವಾಗಿದ್ದಿತು. ಕಾರಣವೇನೆಂದರೆ, ಜಡತೆಯ ಆಧಾರವಾದರೂ ಚೇತನತೆಯೆ ಆಗಿದ್ದು ಇದು ಸಂಮಿಶ್ರ ದಶೆಯಾಗಿದೆ. ಈಗ, ನಮ್ಮಲ್ಲಿ ಬಂದ ಮೊದಲನೆಯ ವಿಚಾರವೆಂದರೆ, ಚೇತನತೆಯಲ್ಲಿ ಪ್ರವೇಶಮಾಡಬೇಕೆಂಬುದು. ಅರ್ಥಾತ್ ನಮಗೇ ಚೇತನತೆ


ಯಲ್ಲಿ ಹೋಗಲು ಮೊದಲನೆಯ ಸೂಚನೆ ಸಿಕ್ಕಿದ್ದಿತು. ತೀರ ಎತ್ತರವಾದ ಅಥವಾ ತೀರ ಕೆಳಗಿರುವ ವಸ್ತುವಿನ ಮೇಲೆ ನಮ್ಮ ದೃಷ್ಟಿ ಹರಿಯುವುದಿಲ್ಲ ವೆಂದು ನಿಯಮವಿದೆ. ಅದು ನಮ್ಮ ತಿಳಿವಳಿಕೆಗೆ ನಿಲುಕುವುದೂ ಇಲ್ಲ. ಮನುಷ್ಯನಲ್ಲಿ ಮಧ್ಯದ ಸ್ಥಿತಿಯಿದ್ದ ಕಾರಣ ಅವನು ಸಮ – ಅವಸ್ಥೆಗೆ ಅಧಿಕಾರಿಯಾದನು. ಆ ನಡುವಿನ ವಸ್ತು ನಮ್ಮೊಳಗೆ ಯಾವುದಾಗ ಬಲ್ಲುದು ? ಅದು ಹೃದಯವೇ. ಜಡ ಹಾಗು ಚೇತನ ಗ್ರಂಥಿಯ ಅನುಭವವು ಸ್ಪಷ್ಟರೂಪದಿಂದ ಇಲ್ಲಿಯೆ ಆಗುವುದು. ಆದುದರಿಂದ ಹೃದಯದ ಮೇಲೆ ಧ್ಯಾನಮಾಡುವುದು ಅತ್ಯಂತ ಲಾಭದಾಯಕವಾಗಿದೆ. ನಮಗೆ ಈ ಮಾತು ತನ್ನಿಂದ ತಾನೆ ಹೊಳೆದಿರಬಹುದು; ಇಲ್ಲವೆ ಚೇತನತೆಯ ಕಡೆಗೆ ಹೋಗಲು ಘಟನೆಗಳು ನಮ್ಮನ್ನು ವಿವಶಗೊಳಿಸಿರಬಹುದು. ಅದೇನೇ ಇರಲಿ, ಚೇತನತೆಯ ಕಡೆಗೆ ನಾವು ಒಲಿದೆವು. ಎಲ್ಲಿಯ ವರೆಗೆ ಚೇತನತೆಯ ಅರಿವು ನಮಗಿದೆಯೋ ಅಲ್ಲಿಯವರೆಗೆ ಸಾಂಸಾರಿಕ ತೆಯ ವಿಚಾರ ನಮ್ಮಲ್ಲಿದೆ. ಇದನ್ನೇ ಕಥವೈದ್ಯರು ಜ್ಞಾನವೆಂದು ಕರೆದಿದ್ದಾರೆ.

::::::  ::::::

# ಗ್ರಂಥಿ ಪ್ರಕರಣ

## ಮೊದಲನೆಯ ಗ್ರಂಥಿ

ನಾವು ಈ ಚೇತನತೆಯೊಂದಿಗೆ ಸಂಪೂರ್ಣ ಬೆರೆತು ಹೋಗಿ ಅದರ ಪ್ರಭಾವವನ್ನು ನಮ್ಮಲ್ಲಿ ಅರಗಿಸಿಕೊಂಡು ಅದರಲ್ಲಿ ಲಯಹೊಂದುವುದೇ ವಾಸ್ತವವಾಗಿ ಜ್ಞಾನದ ಅವಸ್ಥೆ. ಈ ದಶೆಯನ್ನುಂಟು ಮಾಡಿಕೊಂಡು ಇದರಲ್ಲಿ ಲಯವಾದಾಗಲೇ ನಿಜಕ್ಕೂ ಆ ಗ್ರಂಥಿಯ ನಾಲ್ಕೂನಿಟ್ಟಿನ ಜ್ಞಾನವು ಪ್ರಾಪ್ತವಾಗಿ ಅಷ್ಟರ ಮಟ್ಟಿಗೆ ಜ್ಞಾನಿಗಳಾದೆವು. ನಾವು ಯಾವಾಗ ಅದರಲ್ಲಿ ಲಯಾವಸ್ಥೆಯನ್ನು ಪಡೆದೆವೋ, ಅದರ ಆನಂದವನ್ನು ಸವಿದು ಹೃದಯವು ಮುಂದೆ ಹೋಗಲು ಕಾತರಿಸತೊಡಗಿತೋ, ಆಗ ನಮ್ಮಲ್ಲಿ ಉಂಟಾಗಿದ್ದ ಜ್ಞಾನದ ಸಂಬಂಧವು ನಮ್ಮನ್ನು ಉನ್ನತ ಸ್ಥಿತಿಗೆ ಕೊಂಡೊಯ್ಯಲು ವಿವಶಗೊಳಿಸಿತು. ಸಾಹಸ ಹೆಚ್ಚಿತು; ಮುಂದೆ ಹೋದ ಸಂತೋಷಕರ ಸುದ್ದಿಯೂ ಬಂದಿತು. ಪ್ರತಿಯೊಂದು ಲಯ ಅವಸ್ಥೆಯ ನಂತರ ಬರುವ ವಾಸ್ತವಿಕ ಜೀವನವು ನಮ್ಮಲ್ಲಿ ಮೂಡಿತು. ಇದು ನಮಗೆ ಮತ್ತಷ್ಟು ಸಹಾಯ ಮಾಡಿತು. ನಾವು ಇನ್ನೂ ಮುಂದು ವರಿದೆವು. ಎರಡನೆಯ ಗ್ರಂಥಿ ಬಂದಿತು. ಈಗ ನಮ್ಮಲ್ಲಿ ಕಳವಳವೇನೋ ಇದೆ. ಆದರೆ, ಅದರೊಡನೆ ತತ್ಪರತೆಯೂ ಸಾಕಷ್ಟಿದ್ದು, ಅದರಲ್ಲಿ ಪರಿಶ್ರಮಪೂರ್ವಕ ತೊಡಗಿದರೆ, ಹಿಂದಿನ ಅವಸ್ಥೆಗಿಂತ ಶ್ರೇಷ್ಠ ದಶೆಯು ಬಂದೇ ಬರುವದು. ಪ್ರತಿಯೊಂದು ವಸ್ತುವೂ ಸಮೀಪವೇ ಇದ್ದು ನಾವು ಎಲ್ಲಿಗೂ ಹೋಗಬೇಕಾಗಿಲ್ಲವಾದರೂ ಅಂತಿಮದಶೆಯನ್ನಂತೂ ಮುಟ್ಟಲೇ ಬೇಕಾಗಿದೆ. ಒಂದು ವೇಳೆ ಯೋಗ್ಯ ಗುರುವು ದೊರೆತು ಈ ವಿಷವನ್ನು ಹೀರಿಕೊಂಡುಬಿಟ್ಟರೆ ವಿಷದ ಔಷಧಿ–ವಿಷಹಾರಿ–ಮಾತ್ರವೇ



ಬಾಕಿ ಉಳಿಯುವುದು. ತಮ್ಮ ಪ್ರಯತ್ನದಿಂದ ಜನರು ಬಹುದೂರ ಮುಟ್ಟುವರಾದರೂ ಸಮಯ ಬಹಳ ಬೇಕಾಗುವುದು. ಆದುದರಿಂದ ಈ ತಿರುಗಣಿಯ ಸುಳಿಯಲ್ಲಿ ಸಿಕ್ಕಿಬೀಳುವ ಅಂಜಿಕೆ ಸದಾ ಇರುವುದು. ಇದೇ ಪ್ರಕಾರ ಅಗಣಿತ ಗ್ರಂಥಿಗಳಿವೆ. ಮತ್ತು ಪ್ರತಿಯೊಂದು ಗ್ರಂಥಿಗೂ ಅವೇ ಲಯ ಹಾಗೂ ಸಾರೂಪ್ಯತೆಯ ಅವಸ್ಥೆಗಳು ಬರುತ್ತ ಹೋಗುವವು.

ಈಗ ನಾನು ಮೊದಲನೆಯ ಗ್ರಂಥಿಯ ಅನಂತರ ಬರುವ ಚೇತನತೆಯನ್ನು ಕುರಿತು ಸ್ವಲ್ಪ ಹೇಳುವೆನು. ನಾವು ಆ ಗ್ರಂಥಿಯನ್ನು ದಾಟಿ ಈ ಚೇತನತೆಯನ್ನು ಹೊಂದಿದಾಗ ಜಗತ್ತು ಅವಶ್ಯವಾಗಿ ಸ್ವಲ್ಪ ಬದಲಾಯಿಸುವುದು. ನಾವು ಅದರಲ್ಲಿ ಲಯಾವಸ್ಥೆಯನ್ನು ಪಡೆದರೆ ಈಶ್ವರೀಯ ದಶೆಯು ಆರಂಭವಾಗುವುದು. ಇದರಲ್ಲಿ ಸಾರೂಪ್ಯ ಹೊಂದಿದಾಗ ಸಮಸ್ತ ಜಡ–ಚೇತನ ಸಮುದಾಯವನ್ನು ಒಂದು ವಿಚಿತ್ರ ದಶೆಯು ಆವರಿಸಿದಂತೆ ನಮಗೆ ಕಂಡುಬರುವುದು. ಅದರಲ್ಲಿ ಈಶ್ವರೀಯ ದಶೆಯ ಆಭಾಸವಾಗುವುದು. ಶಬ್ದಗಳಿಂದ ವ್ಯಕ್ತಮಾಡಲಾಗದ ಒಂದು ಉನ್ಮಾದ ಬರುವುದು. ಇಲ್ಲಿ ಒಂದು ವೇಳೆ ಯಾರಿಗಾದರೂ ಯೋಗ್ಯ ಗುರು ಸಿಗದಿದ್ದರೆ ಜನರು ಬಹುಶಃ ಈ ಮೊದಲನೆಯ ಅವಸ್ಥೆಯಲ್ಲಿಯೆ ಅವಧೂತರಾಗುವರು. ಆಗ ಅವರ ಪ್ರಯತ್ನವೆಲ್ಲ ನಿಂತು ಹೋಗುವುದು. ಜೀವನಾವಧಿಯೆಲ್ಲ ಇಲ್ಲಿಯೆ ಸಿಕ್ಕಿಬೀಳುವರು. ವಾಸ್ತವವಾಗಿ, ಜ್ಞಾನದ ಮೊದಲನೆಯ ಅಧ್ಯಾಯದ ಆರಂಭದಂತಿರುವ ಈ ಸ್ಥಿತಿಯು ತಾವು ಧುರಂಧರ ಜ್ಞಾನಿಗಳೆಂದು ಸಾರುವ ಜನರಿಗೆ ಎಂದಾದರೂ ಪ್ರಾಪ್ತವಾಗಿದೆಯೆ ಎಂಬುದನ್ನು ಕೇಳಿ ನೋಡಿರಿ. ಇದೇ ದಶೆಯನ್ನು ಧ್ಯಾನಿಸುತ್ತ ಕುಳಿತರೆ ವಾಸ್ತವಿಕತೆ ಹೊರಟುಹೋಗಿ ಕೃತ್ರಿಮತೆ ಬರುವುದು.

*

## ಎರಡನೆಯ ಗ್ರಂಥಿ :

ಈಗ ನಾವು ಎರಡನೆಯ ಗ್ರಂಥಿಯನ್ನು ತಲುಪಿದೆವು. ಇದರ ಸುತ್ತಲೂ ಇರುವ ಸ್ಥಿತಿಯು ಜ್ಞಾನದ ಎರಡನೆಯ ಅವಸ್ಥೆ. ಪ್ರೇಮ–ಭಕ್ತಿಗಳು ನಮ್ಮನ್ನು ಒಂದು ವೇಳೆ ಅಲ್ಲಿಯವರೆಗೆ ಮುಟ್ಟಿಸಿದರೆ ಜ್ಯೋತಿರ್ಮಯ ದಿವ್ಯದಶೆಗಳ ರೂಪವೂ ಬದಲಾಗುವುದು. ಆ ವಸ್ತುವು ಹಗುರವಾಗಿ ಶ್ರೇಷ್ಠತರ ದಶೆಯು ಪ್ರಾಪ್ತವಾಗುವುದು. ಸಾರಾಂಶವಿಷ್ಟೆ: ಮೊದಲಿನ ಸ್ಥಿತಿಯು ಭಾರವಾಗಿದ್ದಿತು ; ಇದು ಅದಕ್ಕಿಂತ ಹಗುರಾಗಿರುವುದು, ಈಗ ಈ ಎರಡನೆಯ ಗ್ರಂಥಿಯಲ್ಲಿ ಏನಿದೆ ? ನಾಲ್ಕೂ ಕಡೆಗೂ ಈಶ್ವರೀಯ ದಶೆಯೆ ಕವಿದಿರುವಂತೆ ಅನುಭವವಾಗುವುದು. ಅಂಥ ದಶೆ ಅಥವಾ ದಿವ್ಯಪ್ರಕಾಶ ಇಲ್ಲಿದೆ. ಇಲ್ಲಿ ಸ್ವಲ್ಪ ಸರಳತೆಯ ಆಭಾಸವಾಗುವುದು. ನಾವು ಅದರ ಒಳಕ್ಕೆ ಇನ್ನಷ್ಟು ಪ್ರವೇಶಿಸಿದ್ದೇವೆಂದು ಇದರರ್ಥ. ಪ್ರತಿಯೊಂದು ಸ್ತರದಲ್ಲಿ ಲಯಾವಸ್ಥೆ ಮತ್ತು ಸಾರೂಪ್ಯತೆ ಬರುವುದು. ಯಾವುದನ್ನು ಎರಡನೆಯ ಅವಸ್ಥೆಯ ಜ್ಞಾನವೆನ್ನುವರೋ ಆ ದಶೆಯ ಪ್ರಾಪ್ತಿಯೆ ಸಾರೂಪ್ಯತೆ. ಈಗ ನಾವು ಇದರಲ್ಲಿ ಲಯ ಅವಸ್ಥೆಯನ್ನು ಪಡೆದೆವು. ಸಾರೂಪ್ಯತೆಯ ಸಂತೋಷವಾರ್ತೆಯು ಬಂದಿತು. ಅದರಲ್ಲಿ ನಾವು ಸಾಕಷ್ಟು ರಮಿಸಿದಾಗ ಮೂರನೆಯ ಗ್ರಂಥಿಯ ಕಡೆಗೆ ನಮ್ಮ ದೃಷ್ಟಿ ಹೊರಳಿತು.

## ಮೂರನೆಯ ಗ್ರಂಥಿ :

ಈಗ ನಮ್ಮ ಪ್ರೇಮವು ಬಲವತ್ತರವಾದರೆ ಅದರಲ್ಲಿಯೂ ಹೊಕ್ಕೆವು. ಪ್ರತಿಯೊಂದು ಗ್ರಂಥಿಯಲ್ಲಿ ಸ್ವಲ್ಪ ಭಾರದ ಅನುಭವವಾಗುವುದೆಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳತಕ್ಕದ್ದು. ಇದನ್ನು ನೋಡಿ ಬಹುತೇಕ ಜನರು ಅಭ್ಯಾಸವನ್ನು ಬಿಟ್ಟು ಕೊಡುವರು. ಆದರೆ, ಕಾಯಿಲೆಯ ನಂತರ

ಆರೋಗ್ಯಲಭಿಸುವದೆಂಬ ಮಾತು ಮನವರಿಕೆಯಾದರೆ ಪ್ರತಿಯೊಂದು ಗ್ರಂಥಿಯನ್ನು ದಾಟುವ ಸಾಹಸವುಂಟಾಗುವುದು. ಈಗ ದಿವ್ಯ ದಶೆಗಳ ರೂಪು ಬೇರೆಯಾಯಿತು. ಭಾರದಿಂದ ಬಿಡುಗಡೆ ದೊರೆಯಿತು. ವಾಸ್ತವಿಕತೆಯ ಕೆಳ ಅಂತಸ್ತಿನ ಭಾನವುಂಟಾಯಿತು. ಲಘುತ್ವವು ಮತ್ತಷ್ಟು ಹೆಚ್ಚಿತು: ಸುತ್ತಲೂ ಸರಳತೆಯು ಪ್ರತೀತಿಯಾಗತೊಡಗಿತು. ಆದರೆ ನಿರ್ಮಲತೆ ಇನ್ನೂ ದೂರವಿದೆ. ಇದು ಮೂರನೆಯ ಗ್ರಂಥಿಯ ಅನಂತರದ ಮಾತು. ಇಲ್ಲಿ ಆತ್ಮದ ಸ್ವಲ್ಪ ಪ್ರಕಾಶವು ಅನುಭವಕ್ಕೆ ಬರುವುದು. ಈ ಸ್ಥಾನವನ್ನು ಜನರು ಆತ್ಮದ ಸ್ಥಾನವೆಂದು ಕರೆಯುತ್ತಾರೆ. ಏಕೆಂದರೆ, ಇಲ್ಲಿ ಇಂಥವೇ ದಿವ್ಯ ದಶೆಗಳ ಅನುಭವ ವುಂಟಾಗುವುದು. ಸ್ವಚ್ಛತೆ ಮತ್ತು ಸರಳತೆಗಳು ಈ ಅವಸ್ಥೆಯ ಜೀವಾಳವಾಗಿವೆ. ಬಹುಶಃ ಸಮಾಸಮ ದಶೆಯು ಪ್ರತೀತವಾಗುವುದು. ಇಂಥವೇ ಅಗಣಿತ ಗ್ರಂಥಿಗಳ ಶ್ರೇಣಿ ಇದೆ. ಅವುಗಳ ವರ್ಣನೆಯು ವ್ಯರ್ಥ. ಏಕೆಂದರೆ, ಇವುಗಳ ನಡುವಿನ ಅಂತರವು ಶಬ್ದಗಳಿಂದ ವ್ಯಕ್ತಮಾಡಲು ಬಾರದಷ್ಟು ಕಡಿಮೆಯಿದೆ. ತಾತ್ಪರ್ಯವೇನೆಂದರೆ, ಈಗ ಆತ್ಮಸ್ಥಾನದ ದಿವ್ಯ ದಶೆಗಳು ನಮ್ಮೆದುರು ಕಾಣಿಸಿಕೊಳ್ಳುತ್ತವೆ. ನಮಗೆ ಈ ಸ್ಥಾನದ ಮಹತ್ವ ತಿಳಿದುಬಂದು ನಾವದನ್ನು ಮನನಮಾಡಿ ಅದರಲ್ಲಿ ಲಯಹೊಂದುವೆವು. ಈಗ ಮೊದಲನೆಯ ಆವರಣವು ಸರಿಯುವುದು. ನಮಗೆ ಆತ್ಮದ ಸುಗಂಧ ತಟ್ಟುವುದು. ಅಂಥದೇ ದೃಶ್ಯವು ಒಳಗೂ ಹೊರಗೂ ಕಾಣಲಾರಂಭಿಸುವದು. ಒಂದುವೇಳೆ ಹೀಗಾಗದಿದ್ದರೆ ಅದನ್ನು ಜ್ಞಾನದ ದಶೆಯೆಂದು ಎಂದಿಗೂ ಹೇಳಲಾಗದು. ಇದನ್ನು ಧ್ಯಾನಿಸಿ ಪಡೆದುದಾದರೆ ಕೃತ್ರಿಮತೆ ತಲೆದೋರು ವುದು. ತನ್ನ ವಿಚಾರಶಕ್ತಿಯ ಜೋರು ಕೊಡುವುದರಿಂದ ಒಳಗೊಳಗೇ ಅದರ ಚಮತ್ಕಾರಗಳ ಅನುಭವವಾಗತೊಡಗುವುದು. ಮುಂದೆ ಇದೇ ಒಂದು ಬಂಧನ ವಾಗುವುದು; ಮತ್ತು ಬಲೆಯಲ್ಲಿ ಎಷ್ಟರ ಮಟ್ಟಿಗೆ ಸಿಕ್ಕಿಬೀಳುವರೆಂದರೆ ಅದರಿಂದ ಬಿಡುಗಡೆ ಹೊಂದುವುದು ತುಂಬ ಕಷ್ಟವಾಗುವುದು. ಮೊದಲಿನಿಂದ ಕೊನೆಯವರೆಗೆ ಯೋಗ್ಯವಾದ ಅಭ್ಯಾಸವನ್ನು ಮುಂದುವರಿಸುವವನೇ ನಿಜವಾದ ಸಾಧಕನೆನಿಸುವನು.

ಈ ಮೂರನೆಯ ಗ್ರಂಥಿಯು ಆತ್ಮದ ಸಮಗ್ರ ಕ್ಷೇತ್ರವನ್ನು ಒಳಗೊಳ್ಳುವುದು. ಇದರಲ್ಲಿ ಮತ್ತೆ ಅಸಂಖ್ಯವಾದ ಸಣ್ಣ ಸಣ್ಣ ಗ್ರಂಥಿಗಳಿವೆ. ಇವನ್ನೆಲ್ಲ ದಾಟಿದ ಮೇಲೆಯೆ ನಾವು ಈ ಕ್ಷೇತ್ರದಿಂದ ಹೊರಗೆ ಬರುವೆವು. ಮನುಷ್ಯನಲ್ಲಿ ಈ ವಸ್ತುಗಳು ಅನೇಕ ಪದರುಗಳಾಗಿ ಕುಳಿತಿವೆ. ಅದೇನೇ ಇರಲಿ, ಈಗ ನಾವು ಇದಕ್ಕಿಂತ ಮುಂದೆ ತಲುಪಲು ಯತ್ನಿಸುತ್ತೇವೆ. ಭಗವಂತನ ಸಹಾಯದಿಂದ ನಮಗೆ ಮುಂದಿನ ಸುವಾರ್ತೆ ದೊರೆಯುವುದು, ಇಲ್ಲಿಯವರೆಗಂತೂ ನಮಗೆ ಜ್ಞಾನವಾಗಿಯೇ ಬಿಟ್ಟಿತು. ನಾವು ದಿವ್ಯ ಅಥವಾ ಜ್ಯೋತಿರ್ಮಯ ವೃತ್ತವನ್ನು ಪ್ರವೇಶಿಸಿದುದೇ ಇದಕ್ಕೆ ಸಾಕ್ಷಿ. ಈಗ ಇದರ ಮುಂದಿನ ಗ್ರಂಥಿ ಬರುವುದು.

**ನಾಲ್ಕನೆಯ ಗ್ರಂಥಿ :**

ಸೃಷ್ಟಿ ರಚನೆಯಲ್ಲಿ ಪ್ರತಿಯೊಂದು ವಸ್ತುವಿನ ಅಗತ್ಯವಿರುತ್ತದೆ. ಒಂದೊಂದು ತತ್ತ್ವವೂ ಇದಕ್ಕೆ ಸಾಕ್ಷಿಯಾಗಿದೆ. ಈಗ ನಾವು ಇದರ ಮುಂದಿನ ದಶೆಯನ್ನು ಮುಟ್ಟುವೆವು. ಅಲ್ಲಿ ದಿವ್ಯಪ್ರಕಾಶದ ಸಮೂಹವು ಒಂದು ಜ್ವಾಲೆಯ ರೂಪದಲ್ಲಿ ಕಾಣಿಸುವುದು. ಭಕ್ತನು ಈ ಕಾವನ್ನು ಪ್ರೇಮದ ಕಾವಿನೊಂದಿಗೆ ಸಂಬಂಧಿಸಿಕೊಳ್ಳುವನು. ಇನ್ನೊಂದು ಮಾತು : ಧಾರೆಗಳು ಪ್ರವಹಿಸತೊಡಗಿದಾಗ ಅವುಗಳ ಕೇಂದ್ರವು ತಣ್ಣಗಿದ್ದಿತು; ಏಕೆಂದರೆ ಅದರಲ್ಲಿ ಪದಾರ್ಥವು (*matter*) ಬೆರೆತಿರಲಿಲ್ಲ. ಧಾರೆಗಳು ಇಳಿಯುತ್ತಲೇ ಅವುಗಳಿಂದ ಆಘಾತಗಳು ಹೆಚ್ಚುತ್ತಲೇ ನಡೆದುವು. ಇವು ವಾಸ್ತವವಾಗಿ ಸೃಷ್ಟಿಯು ಎಲ್ಲಿಂದ ಪ್ರಾರಂಭವಾಗಿದ್ದಿತೋ ಅಲ್ಲಿಯೇ ಹೆಚ್ಚಾಗಿ ಉಂಟಾದವು. ಇದನ್ನು ತಿಳಿದುಕೊಳ್ಳಲು ನಾವು ಮೂರು

ಭಾಗಗಳನ್ನು ಕಲ್ಪಿಸಿಕೊಂಡರೆ ಈ ಮಾತು ಮತ್ತಷ್ಟು ಸ್ಪಷ್ಟವಾಗುವುದು. ಎಲ್ಲಿ ಶೀತಲತೆಯು ತನ್ನದೇ ಆದ ಕ್ರಿಯೆಯಿಂದ ಕಾವನ್ನು ಹುಟ್ಟಿಸಿಕೊಂಡಿದ್ದಿತೋ ಆ ಪ್ರದೇಶವನ್ನು ಹೊಕ್ಕಾಗ ಅದು ಅಲ್ಲಿಂದಲೇ ವ್ಯಕ್ತ ರೂಪವನ್ನು ತಳೆಯಿತು. ಇದು ನಡುವಿನ ಭಾಗವಾಗಿದ್ದಿತು. ಇದರಂತೆಯೇ ಈಗ ಅದೇ ಮಧ್ಯ ಭಾಗವು ಒಂದು ಗ್ರಂಥಿಯ ರೂಪದಲ್ಲಿ ನಮ್ಮೆದುರು ಬರುವುದು. ಅದರಲ್ಲಿ ನಮಗೆ ತಿರುಗುವ ಚಕ್ರಗಳಂತೆ ಕಾಣುವವು. ನಿಜಸಂಗತಿಯೇನೆಂದರೆ, ಅದೇ ಮೂಲತತ್ತ್ವವು ತಾನೇ ಒಂದು ಗ್ರಂಥಿಯಾಯಿತು. ಕ್ರಿಯೆ-ಪ್ರತಿಕ್ರಿಯೆಗಳು ಹೆಚ್ಚಿದ ಕಾರಣ ಅದು ಪದಾರ್ಥದ ರೂಪವನ್ನು ಪಡೆಯುವಷ್ಟು ಗಟ್ಟಿಯಾಯಿತು. ಈ ಗ್ರಂಥಿಯಲ್ಲಿ ನಾವು ನಮ್ಮ ವಿಚಾರಗಳೊಂದಿಗೆ ಸಮಾವಿಷ್ಟರಾಗಿ ಮುಂದಿನ ದಶೆಯನ್ನು ಮುಟ್ಟುವ ಧ್ಯಾನದಲ್ಲಿಯೆ ಇದರಲ್ಲಿ ಭ್ರಮಣ ಮಾಡುತ್ತಿದ್ದೇವೆ. ನಮ್ಮ ದೃಢವಾದ ತತ್ಪರತೆಯಿಂದ ಯಶ ದೊರೆತಾಗ ಈ ಗ್ರಂಥಿಯು ವಾಸ್ತವಿಕ ದಶೆಗೆ ಬರುವೆವು. ಇಲ್ಲಿಯ ಪ್ರಕಾಶವು ಸ್ವಲ್ಪ ಅಗ್ನಿತತ್ತ್ವದೊಂದಿಗೆ ಸಂಬಂಧಪಟ್ಟಿದೆ.

ಮನುಷ್ಯನು ಈ ಗ್ರಂಥಿಯಲ್ಲಿ ಲಯ ಅವಸ್ಥೆಯನ್ನು ಪಡೆದು–ದಾದರೆ ಅಗ್ನಿತತ್ತ್ವದ ಮೇಲೆ ಅಧಿಕಾರವುಂಟಾಗುವುದು. ಈ ಗ್ರಂಥಿಯಿಂದ ಹೊರಬಿದ್ದಾಗ ನಾವು ಇದರ ವಾಸ್ತವಿಕತೆಯನ್ನು ಮುಟ್ಟುವೆವು. ಇದು ನಮ್ಮ ಉನ್ನತಿಗೆ ಸೋಪಾನಪ್ರಾಯವಾಗಿದ್ದು ಆ ಸ್ಥಾನದ ದಶೆಯು ತಿಳಿವಳಿಕೆಯನ್ನುಂಟು ಮಾಡಿಕೊಡುವುದು. ಇದರಲ್ಲಿ ನಾವು ಲಯ ಅವಸ್ಥೆಯದ್ನು ಹೊಂದಿದಾಗ ಇಲ್ಲಿಯ ಜ್ಞಾನದ ದಶೆಯು ನಮ್ಮೊಳಗೆ ಉಂಟಾಗುವುದು. ಈಗ ಈ ವಸ್ತು ನಮ್ಮದಾಯಿತು. ಇದರ ಮೇಲೆ ನಮಗೆ ಪ್ರಭುತ್ವ ಬಂದಿತು. ಈ ಸೀಮೆಯ ವರೆಗೆ ನಾವು ಜ್ಞಾನಿಗಳಾದೆವು. ಅದರ ವೈಶಿಷ್ಟ್ಯವು ನಮಗೆ ತಿಳಿಯಿತು; ಅದರಲ್ಲಿ ನಾವು ಲಯ ಕೂಡ ಹೊಂದಿದೆವು. ವಾಸ್ತವವಾಗಿ ಜ್ಞಾನಿಯ ದಶೆ ಹೇಗಿರುವುದು ? ಈ

ಪದಾರ್ಥವೆಂಥದು ? ಆ ಸ್ಥಾನದ ಲಯ ಅವಸ್ಥೆಯ ನಂತರ ಬರುವ ಸಾರೂಪ್ಯತೆಯ ದಶೆಯೆ ನಿಜವಾಗಿ ಆ ಸ್ಥಾನದ ಜ್ಞಾನ. ಈ ಅವಸ್ಥೆಯಲ್ಲಿ ನಾವು ಜಾಗೃತರಾಗುವೆವು. ಆದುದರಿಂದ ಅದನ್ನು ನಾವು ಆ ಸ್ಥಾನದ ಸಾರೂಪ್ಯತಾ-ಜೀವನವೆಂದು ಕರೆಯುವೆವು: ಮತ್ತು ಸಜೀವ ವಸ್ತುವೇ ಈ ಜೀವನದ ಅನುಭವ ಪಡೆಯಬಲ್ಲುದು. ಈಗ ನಮ್ಮ ಸಾಹಸ ಮತ್ತಷ್ಟು ಹೆಚ್ಚಿತು. ಇದಕ್ಕಿಂತ ಮುಂದಿನ ಜ್ಞಾನ ಪಡೆಯುವ ಹಂಬಲ-ವುಂಟಾಯಿತು.

### ಐದನೆಯ ಗ್ರಂಥಿ :

ಈಗ ನಾವು ಇದಕ್ಕಿಂತ ಮೇಲಿನ ಗ್ರಂಥಿಯಲ್ಲಿ ಪ್ರವೇಶ ಮಾಡಿದೆವು. ಅಗ್ನಿಯ ಅಸ್ತಿತ್ವವು ಇಲ್ಲದಾಯಿತು. ಈಗ ಅದರ ವಿರುದ್ಧ ದಶೆಯಲ್ಲಿ ಸಾಗಿದ್ದೇವೆಂದು ಇದರರ್ಥ. ಇದು ಜಲಸ್ಥಾನ, ಕೇವಲ ಇದೇ ಗ್ರಂಥಿಯಲ್ಲಿ ನಾವು ಲಯವನ್ನು ಪಡೆದು ಉಳಿದುಕೊಂಡುದಾದರೆ ಸಾಕಷ್ಟು ಸುತ್ತಾಡಿದ ನಂತರವೂ ಇದೇ ತತ್ತ್ವದ ಮೇಲಷ್ಟೆ ನಮಗೆ ಅಧಿಕಾರವುಂಟಾಗುವುದು. ಜ್ಞಾನವು ನಮಗೇನು ಸಹಾಯ ಮಾಡುವುದು ? ಅದು ನಮ್ಮೊಳಗೆ ಭಗವದನ್ವೇಷಣಬುದ್ಧಿಯನ್ನು ಹುಟ್ಟಿಸುವುದು. ಈ ಮಾತು ಯಾರ ವಿಚಾರ ದಲ್ಲಿಯೂ ಬಾರದಿದ್ದರೆ, ಅಥವಾ ವಾಸ್ತವಿಕತೆಯನ್ನು ಹುಡುಕುವುದು ನಮಗೆ ಬೇಡವಾದರೆ ಇದೇ ಗ್ರಂಥಿಯಲ್ಲಿಯೇ ಸಿಕ್ಕಿಬೀಳುವೆವು ; ಮತ್ತು ಚಮತ್ಕಾರ ಗಳನ್ನು ತೋರಿಸಲಾರಂಭಿಸುವೆವು. ನಮ್ಮ ತಳಮಳವು ನಮ್ಮ ಸಹಾಯಕ್ಕೆ ಬಂದು, ಈ ಗ್ರಂಥಿಯಲ್ಲಿ ಲಯಹೊಂದಿದ ಮೇಲೆ ಸಾರೂಪ್ಯತೆಯ ದಶೆ ಯುಂಟಾದುದಾದರೆ ನಮಗೆ ಆ ಅವಸ್ಥೆಯ ಜ್ಞಾನವಾಗುವುದು. ನಮ್ಮ ಧ್ಯೇಯವು ವಾಸ್ತವಿಕತೆಯ ಮೇಲೆಯೆ ನೆಟ್ಟಿರುವುದಾದ್ದರಿಂದ ಆ ಗ್ರಂಥಿಯ ಮೇಲೆ ನಮಗೆ ಅಧಿಕಾರವುಂಟಾದರೂ ಅದರಿಂದ ಕೆಲಸ ತೆಗೆದುಕೊಳ್ಳುವುದರ ಕಡೆಗೆ ನಮ್ಮ ದೃಷ್ಟಿ ಹೊರಳುವುದಿಲ್ಲ. ನೀರನ್ನು ಕಂಡ ಮೇಲೆ ಅನುಭವಕ್ಕೆ

ಬರುವ ಪ್ರಸನ್ನತೆಯಷ್ಟೇ ಶಾಂತಗುಣವು ಇದರದಿದೆ. ಈ ಗ್ರಂಥಿಯಲ್ಲಿ ಲಯಹೊಂದಿ ಸಾರೂಪ್ಯತೆಯ ದಶೆಯನ್ನು ಪಡೆದಾಗ ಆ ಸ್ಥಿತಿಯ ಜ್ಞಾನವುಂಟಾಗುವುದು.

ಪ್ರತಿಯೊಂದು ಗ್ರಂಥಿಯ ಅನಂತರ ಉಂಟಾಗುವ ಒಂದು ಸ್ಥಿತಿಯನ್ನು ಕುರಿತು ಬರೆಯುವುದೊಳಿತು. ಯಾವುದೇ ಗ್ರಂಥಿಯಲ್ಲಿ ಲಯಾವಸ್ಥೆಯನ್ನು ಪಡೆದ ಮೇಲೆ ನಾವು ಸಾರೂಪ್ಯತೆಯ ದಶೆಯನ್ನು ಮುಟ್ಟಿದಾಗ ಆ ದಶೆಯೆ ಅದರ ಕೊನೆಯಾಗುವುದಿಲ್ಲ. ಸಾರೂಪ್ಯತೆಯೂ ಲಯವಾಗಿ ಅದಕ್ಕಿಂತ ಉತ್ತಮ ಸಾರೂಪ್ಯತೆಯ ದಶೆಯಲ್ಲಿ ಮಾರ್ಪಾಟು ಹೊಂದುವುದು. ಅದನ್ನು ಸಾಯುಜ್ಯತೆಯೆಂದು ಕರೆಯುವರು. ಆಗ ಆ ದಶೆಯ ಜ್ಞಾನವು ಪೂರ್ಣವಾಯಿತೆಂದು ತಿಳಿಯಬೇಕು.

ಒಳ್ಳೆಯದು, ಈ ಸಾಯುಜ್ಯತೆಯೂ ನಮ್ಮಲ್ಲುಂಟಾಯಿತು. ಈಗ ಇದರ ತರುವಾಯ ಬರುವ ಜ್ಞಾನವನ್ನು ಶೋಧಿಸುತ್ತೇವೆ. 'ಶೋಧ' ಮತ್ತು 'ಹಂಬಲ' ಗಳಲ್ಲಿ ಬಹಳ ಅಂತರವಿದೆ. ಆದಕಾರಣ ಇಲ್ಲಿ 'ಹಂಬಲ' ವೆಂಬ ಶಬ್ದವೇ ಹೆಚ್ಚು ಯೋಗ್ಯ. ಈಗ ಈ ಹಂಬಲ ನಮ್ಮನ್ನು ಐದನೆಯ ಗ್ರಂಥಿಗೆ ಮುಟ್ಟಿಸಿ ಮೊದಲನೆಯ ನಾಲ್ಕೂ ಗ್ರಂಥಿಗಳಲ್ಲಿ ಅತ್ಯುತ್ತಮವಾದ ಸ್ಥಿತಿಯನ್ನು ತರುವುದು. ಈಗ ನಮ್ಮೊಳಗೆ ಆ ಗ್ರಂಥಿಯಲ್ಲಿ ಪ್ರವಾಸ ಮಾಡುವ ಅವಸ್ಥೆಯುಂಟಾಯಿತು. ಅಲ್ಲಿಯ ಸಂಗತಿಗಳು ನಮ್ಮ ಅನುಭವಕ್ಕೆ ಬರತೊಡಗಿದವು. ನಾವು ಇಲ್ಲಿ ನಮ್ಮ ಆಸನವನ್ನು ಸ್ಥಿರಗೊಳಿಸಿದ್ದೇವೆ. ಆದ್ದರಿಂದ ನಮ್ಮ ಧ್ಯಾನದ ರೂಪವು ಆ ರೀತಿ ಆಯಿತು. ಹೀಗೆ ಇದು ಮುಂದುವರಿಯಿತು. ಕೊನೆಗೆ ಈ ಪ್ರವಾಸದಲ್ಲಿ ಲಯ ಅವಸ್ಥೆಯನ್ನುಂಟುಮಾಡಿಕೊಂಡೆವು. ಆಗ ನಮಗೆ ಇಲ್ಲಿಯ ವಿಚಿತ್ರ ದಶೆಯನ್ನನುಭವಿಸುವ ಸುಯೋಗವೊದಗಿತು. ಈ ಅವಸ್ಥೆಯಲ್ಲಿ ವಾಯು ತತ್ತ್ವದ ಮೇಲೆ ನಮಗೆ ಅಧಿಕಾರ ಬರುವುದು. ಆದರೆ ಆ ವಾಯು

ಬದಲಾವಣೆ ಹೊಂದಿರುವುದು. ಅದು ಬಿರುಸಾಗಿ ಬೀಸುವುದಿಲ್ಲವಾದರೂ ಅದರಲ್ಲಿ ಹೆಚ್ಚು ಪ್ರಸನ್ನತೆಯನ್ನು ಕೊಡುವ ಯಾವುದೋ ಒಂದು ವಸ್ತು-ವಿರುವುದು. ಇಲ್ಲಿ ಅಭ್ಯಾಸಿಗೆ ಎರಡು ದಶೆಗಳುಂಟಾಗುವುವು. ಒಮ್ಮೊಮ್ಮೆ ಜ್ಞಾನಾವಸ್ಥೆಯಿಂದ ವಾಸ್ತವಿಕ ಜ್ಞಾನಾವಸ್ಥೆಯನ್ನು ತಲುಪಿದಾಗ ಸ್ವಲ್ಪ ದುಃಖವೆನಿಸಿದಂತೆ ಆಗಿ ಕಣ್ಣೀರು ಬರುವುದು. ಕೆಲವೊಮ್ಮೆ ಅಲ್ಲಿಯ ಗಾಳಿಯು ವರ್ತಮಾನದಶೆಯ ಅನುಭವಕೊಟ್ಟು ಒಂದು ರೀತಿಯ ಪ್ರಸನ್ನತೆಯನ್ನು ತರುವುದು. ಇದು ಒಮ್ಮೆ ಅಳುವಿನ ರೂಪದಲ್ಲಿ, ಒಮ್ಮೆ ನಗುವಿನ ರೂಪದಲ್ಲಿ ವ್ಯಕ್ತವಾಗುವುದು. ನಮ್ಮ ಸಾಧನಪದ್ಧತಿಯಲ್ಲಿ ಅಭ್ಯಾಸಿಯನ್ನು ಈ ಅವಸ್ಥೆಯ ಮೇಲೆ ಹೆಚ್ಚು ಕಾಲ ತಡೆಯಲಾಗುವುದಿಲ್ಲ. ನಮ್ಮ ಇಚ್ಛಾಶಕ್ತಿ ಹಾಗು ಆತ್ಮಿಕಬಲದಿಂದ ಆ ಅವಸ್ಥೆಯ ವಾಸ್ತವಿಕ ಸಾರೂಪ್ಯತೆಯ ದಶೆಯನ್ನು ತಂದುಕೊಟ್ಟು ಮುಂದಕ್ಕೊಯ್ಯುವೆವು. ಅಂತೂ ಈ ಸಮಯ ಬಂದಿತು. ನಾವು ಇದರಲ್ಲಿ ಸಂಪೂರ್ಣ ಸಾರೂಪ್ಯತೆಯನ್ನು ಪಡೆದು ಮುಂದೆ ಹೋದೆವು. ಈಗ ನಮಗೆ ಪಿಂಡದೇಶದ ಜ್ಞಾನವಾಯಿತು. ಪ್ರತಿಯೊಂದು ಗ್ರಂಥಿಯ ಮೇಲೆ ಧ್ವನಿಯಿದೆ; ಮತ್ತು ಗ್ರಂಥಿಯು ಎಷ್ಟು ಉನ್ನತಾವಸ್ಥೆಯದಿರುವುದೋ ಧ್ವನಿಯೂ ಅಷ್ಟೇ ಮಧುರವಾಗುತ್ತ ಹೋಗುವುದು. ಪಿಂಡದೇಶದಲ್ಲಿ ಈ ಧ್ವನಿಯು ತೀವ್ರ-ವಾಗಿರುತ್ತದೆ. ಯಾರಾದರೂ, ಕೇವಲ ಈ ಧ್ವನಿಗಳ ಮೇಲಾಗಲಿ ಅವುಗಳ ಏರಿಳಿತಗಳ ಮೇಲಾಗಲಿ ಧ್ಯಾನ ಮಾಡಿದ್ದಾದರೆ ಆ ಸ್ಥಾನದ ಸಿದ್ಧಿಗಳು ಅವರಲ್ಲಿ ಬಂದುಬಿಡುವುವು. ಐದೂ ಗ್ರಂಥಿಗಳಲ್ಲಿ ಧ್ವನಿಗಳು ಪರಸ್ಪರ ಸ್ವಲ್ಪ ಹೋಲುತ್ತಿದ್ದರೂ ಅವು ಬೇರೆಬೇರೆ ಪ್ರಕಾರದುವಾಗಿವೆ. ಇದನ್ನು ಪಂಚಾಗ್ನಿವಿದ್ಯೆಯೆನ್ನುವರು. ರಾವಣನಿಗೆ ಇದು ಸಂಪೂರ್ಣ ಸಿದ್ಧಿಸಿತ್ತು. ಆದರೆ ನಾನಂತೂ ಯಾರನ್ನೂ ರಾಕ್ಷಸನನ್ನಾಗಿ ಮಾಡಬಯಸುವುದಿಲ್ಲ. ಚಮತ್ಕಾರಗಳ ಕಡೆಗೂ ಒಯ್ಯುವ ಇಚ್ಛೆಯಿಲ್ಲ. ಆದುದರಿಂದ ಈ ರಹಸ್ಯವನ್ನು ಬಿಚ್ಚುವುದಿಲ್ಲ. ಆ ಕಡೆಗೆ ಹೋಗಬಯಸುವವರು ಸ್ವಯಂ ಪ್ರಯತ್ನಮಾಡಲಿ. ಆ ಸ್ಥಳಗಳಲ್ಲಿಯ ಸ್ಪಂದನವೇ ಹಾಗಿದೆ. ಅದರಿಂದ

ಧ್ವನಿಯ ಅನುಭವ ಬರುವುದು. ದಶೆಗೆ ತಕ್ಕಂತೆ ಧ್ವನಿಯು ತೀವ್ರವಾಗಲಿ ಮಂದವಾಗಲಿ ಅವಶ್ಯ ಆಗುವುದು.

## ಆರನೆಯ ಗ್ರಂಥಿ :

ಈಗ ನಾವು ಬ್ರಹ್ಮಾಂಡಮಂಡಲದ ಕಡೆಗೆ ಹೆಜ್ಜೆಯನ್ನಿಡುವೆವು. ನಮ್ಮ ಓಟವು ಈಗ ಆರನೆಯ ಗ್ರಂಥಿಯನ್ನು ತಲುಪಿತು. ಇಲ್ಲಿಂದಲೇ ಬ್ರಹ್ಮಾಂಡವು ಆರಂಭವಾಗುವುದು. ಇನ್ನೊಂದು ಮಾತನ್ನು ನಾನು ಬರೆದೇ ಬಿಡುವೆನು : ಪಿಂಡದೇಶದ ಈ ಅವಸ್ಥೆಯನ್ನು ತಲುಪಿದ ಅಭ್ಯಾಸಿಯು ಬ್ರಹ್ಮಾಂಡಮಂಡಲದಲ್ಲಿ ಕಾಲಿಟ್ಟಿದ್ದರೆ ಆತನು ಈ ಜಗತ್ತಿನಲ್ಲಿ ಪುನಃ ಜನಿಸುವುದಿಲ್ಲ. ಇದರ ಜ್ಞಾನದಿಂದ ಇಷ್ಟೇ ಲಾಭವಿದೆ. ಆರನೆಯ ಗ್ರಂಥಿಗೆ ಬರುತ್ತಲೇ ದಿವ್ಯಪ್ರಕಾಶದ ರೂಪವು ಬದಲಾಗುವುದು. ಮತ್ತು ಅದರಲ್ಲಿ ಪದಾರ್ಥದ ಪ್ರಭಾವ ಕಡಮೆಯಾಗುವುದು. ಇನ್ನೊಂದು ಮಾತು: ನಾವು ಆರನೆಯ ಗ್ರಂಥಿಯಲ್ಲಿ ಸ್ವಲ್ಪ ತಡೆದು ಮೊದಲಿನಂತೆ ಮುಂದುವರಿಯ ಬೇಕಾಗುವುದು. ಒಬ್ಬ ಒಳ್ಳೆಯ ಗುರು ದೊರೆತರೆ ಆತನು ಈ ಗ್ರಂಥಿಯಲ್ಲಿ ಬಹಳಕಾಲ ನಿಲ್ಲಗೊಡುವುದಿಲ್ಲ. ಅಲ್ಲಿಯ ದಶೆಯನ್ನು ಹುಟ್ಟಿಸಿ ಅಭ್ಯಾಸಿಯನ್ನು ಏಳನೆಯ ಗ್ರಂಥಿಗೆ ಒಯ್ದುಬಿಡುವನು. ತಮ್ಮ ಪ್ರಯತ್ನದಿಂದ ಸಾಗುವವರು ಈ ಆರನೆಯ ಗ್ರಂಥಿಯ ಮೇಲೂ ಲಯ ಮತ್ತು ಸಾರೂಪ್ಯತೆಯನ್ನು ತಾವಾಗಿಯೆ ಪಡೆಯುವರು. ಪರಿಣಾಮವೇನಾಗುವುದೆಂದರೆ, ಅಲ್ಲಿಯ ಚಮತ್ಕಾರಗಳ ಹಾಗು ಪ್ರಕಾಶದ ಆಕರ್ಷಣೆಯನ್ನು ಮೀರಿ ಅಭ್ಯಾಸಿಯ ಮನಸ್ಸು ಏಳನೆಯ ಗ್ರಂಥಿಗೆ ಹೋಗಬಯಸುವುದಿಲ್ಲ. ಈ ಆರನೆಯ ಗ್ರಂಥಿಯಲ್ಲಿ ಸಾಕಷ್ಟು ಪ್ರಕಾಶವಿದೆ; ಸ್ವಲ್ಪ ಹೊಗೆಬಣ್ಣದ ಅನುಭವವೂ ಬರುವುದು. ಆದರೆ ನಾವು ಈ ಗ್ರಂಥಿಯ ಮೇಲಿನ ಸಾರೂಪ್ಯತೆಯ ದಶೆಯನ್ನು ಪಡೆದಾಗಲೇ ಹೊಗೆಬಣ್ಣದ ಆಭಾಸವು ಇಲ್ಲದಂತಾಗುವುದು. ಪ್ರಕಾಶವೇ ಎಲ್ಲೆಡೆಗೂ ಕಾಣ ತೊಡಗುವುದು. ವಾಸ್ತವವಾಗಿ, ಶಕ್ತಿಯ ವಿತರಣಮಾಡುವ

ಸ್ಥಾನವೇ ಇದಾಗಿದೆ. ಮೇಲಿನಿಂದ ಬಂದ ಶಕ್ತಿಯನ್ನು ಪಿಂಡದೊಳಗೆ ಮುಟ್ಟಿಸುವುದೂ ಇದೇ.

## ಏಳನೆಯ ಗ್ರಂಥಿ :

ಈಗ ನಾವು ಏಳನೆಯ ಗ್ರಂಥಿಯ ಕಡೆಗೆ ಸಾಗುವೆವು. ಈ ಸ್ಥಾನವು ಬ್ರಹ್ಮಾಂಡದೇಶದೊಳಗಡೆಯೆ ಇದೆ. ಇದನ್ನು ವಿರಾಟ್ ದೇಶ ವೆಂದೂ ಹೇಳುವರು. ಇದನ್ನು ಕುರಿತು ಹೇಳುವುದೇನಿದೆ ? ಭಗವಂತನು ಈ ಸ್ಥಿತಿಯನ್ನು ಎಲ್ಲರಿಗೂ ಕರುಣಿಸಲಿ. ಮುಂದುವರಿದ ಸುವಾರ್ತೆಯು ದೊರಕುವಂತಾಗಲಿ. ಇಲ್ಲಿ ಪವಿತ್ರತೆಯ ಅನುಭವವು ಬಹಳಷ್ಟಾಗುವುದು. ಆದರೂ ಇನ್ನೂ ಪದಾರ್ಥದ ಪ್ರಭಾವವಿದ್ದೇ ಇದೆ ಮಹಾಭಾರತದಲ್ಲಿ ಪ್ರಯೋಗವಾಗಿದ್ದ ಅಣುವಿನ ಶಕ್ತಿ ಇಲ್ಲಿ ಅಧಿಕವಾಗಿದೆ. ಯೋಗಿಯು ಈ ದಶೆಯ ಮೇಲೆ ಪೂರ್ಣವಾಗಿ ಪ್ರಭುತ್ವ ಪಡೆಯುವುದೊಳ್ಳೆಯದು. ಭಾರತದ ಯೋಗಿಗಳು ಇದರ ಮೇಲೆ ಪೂರ್ಣ ಅಧಿಕಾರ ಪಡೆದಿದ್ದರು. ಇಲ್ಲಿ ವಿದ್ಯುತ್–ಶಕ್ತಿಯ ಅನುಭವವು ವಿಶೇಷವಾಗಿ ಉಂಟಾಗುವುದು. ಬಹುತೇಕ ಜನರಿಗೆ ಇದು ಪ್ರಿಯವಾಗುವುದಾದ್ದರಿಂದ ಅವರು ಇದರಲ್ಲಿಯೇ ಸಿಕ್ಕಿಬೀಳುತ್ತಾರೆ. ಇದರ ಪರಿಣಾಮವಾಗಿ ಅವರ ಪ್ರಗತಿಯು ಕುಂಠಿತವಾಗುವುದು. ಈ ಸ್ಥಿತಿಯು ಪ್ರಶಂಸನೀಯವಾಗಿದ್ದರೂ ಇದು ಮಕ್ಕಳಾಟಿಕೆಯ ವಸ್ತುವೇ. ಈ ಸ್ಥಾನದ ಶಕ್ತಿಯಿರದ ಭಾರತ ವರ್ಷದ ಪ್ರಾಚೀನ ಋಷಿಗಳು ತೀರ ಕಡಮೆ. ದೂರ್ವಾಸ ಋಷಿಗಳಲ್ಲಿ ಈ ಸ್ಥಾನದ ಶಕ್ತಿ ಬಹಳ ಹೆಚ್ಚಿದ್ದಿತು. ಎರಡನೆಯವರನ್ನು ಅಳುವಂತೆ ಮಾಡುವ–ರೌದ್ರ–ಶಕ್ತಿಯೂ ಚಕಿತಗೊಳಿಸುವ ಶಕ್ತಿಯೂ ಹಾಗು ತಲೆಯಲ್ಲಿ ಗೊಂದಲವೆಬ್ಬಿಸುವ ಶಕ್ತಿಯೂ ಪ್ರಧಾನವಾಗಿರುವ ಕೇಂದ್ರ ದೊಡನೆ ಅವರ ಸಂಬಂಧವುಂಟಾಗಿದ್ದಿತು. ನಮ್ಮ ಭಾರತವರ್ಷದಲ್ಲಿ ಋಷಿಗಳನ್ನು ಎಷ್ಟು ಮಟ್ಟಿಗೆ ಗೌರವಿಸಲಾಗುತ್ತಿದ್ದಿತೆಂದರೆ ದೂರ್ವಾಸರನ್ನು ರುದ್ರನ ಅವತಾರವೆಂದು ತಿಳಿಯಲಾಗಿತ್ತು. ದೂರ್ವಾಸರಿಗೆ ಈ ಸ್ಥಿತಿ

ಉಂಟಾಗಿದ್ದುದರಿಂದ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಅವರ ಮಟ್ಟವು ಎಷ್ಟಿದ್ದಿತೆಂಬ ಬಗೆಗೂ ಮಾನವಜೀವನದ ಗುರಿಯನ್ನು ಸಾಧಿಸುವುದರಲ್ಲಿ ಅವರು ಎಷ್ಟರ ಮಟ್ಟಿಗೆ ಸಫಲರಾದರೆಂಬುದನ್ನೂ ನಾನಿಲ್ಲಿ ಪ್ರಸ್ತಾಪಿಸಬಯಸುವುದಿಲ್ಲ.

ಪಿಂಡದಲ್ಲಿದ್ದ ಪ್ರತಿಯೊಂದು ವಸ್ತುವಿಗೂ ಅಲ್ಲಿಂದಲೇ ಶಕ್ತಿಯು ದೊರೆಯುವುದು. ಅಲ್ಲಿ ಅಗಣಿತ ಶಕ್ತಿಗಳಿವೆ. ಈ ಗ್ರಂಥಿಯಲ್ಲಿ ನಾವು ಲಯಾವಸ್ಥೆಯನ್ನು ಪಡೆದಂತೆಲ್ಲ ಹೆಚ್ಚೆ ಹೆಚ್ಚೆಗೂ ಅಸೀಮ ಶಕ್ತಿಯ ಅನುಭವವುಂಟಾಗುವುದು. ವಿದ್ಯುತ್ತಿನ ತೀಕ್ಷ್ಣತೆ ಎಲ್ಲೆಡೆಯಲ್ಲಿಯೂ ದೃಷ್ಟಿಗೋಚರವಾಗುವುದು. ಇಲ್ಲಿ ಪ್ರತಿಯೊಂದು ವಸ್ತುವೂ ಬೀಜರೂಪದಲ್ಲಿರುವುದು. ನಾವು ಇದರ ತಿಳಿವಳಿಕೆಯನ್ನುಂಟುಮಾಡಿಕೊಂಡುದೇ ಆದರೆ ನಮಗೆ ಪ್ರತಿಯೊಂದು ಶಕ್ತಿಯ ಚೇತನವು ಪ್ರಾಪ್ತವಾಗುವುದು. ಈ ಗ್ರಂಥಿಯಲ್ಲಿ ನಾವು ಲಯ ಹೊಂದಲಾರಂಭಿಸಿದಾಗ ನಮ್ಮ ವಿಸ್ತಾರವು ಹೆಚ್ಚುತ್ತ ನಡೆದು ನಾವು ಪ್ರಪಂಚದ ತುಂಬ ವ್ಯಾಪಿಸಿದ ಅನುಭವವುಂಟಾಗುವುದು. ಏಕೆಂದರೆ, ಅಲ್ಲಿಯ ಪ್ರಸಾರದ ಅವಸ್ಥೆಯ ಪ್ರಭಾವದಿಂದಲೇ ನಾವು ಪಿಂಡದೇಶದಲ್ಲಿ ಪ್ರಸಾರಹೊಂದುವೆವು. ಯೋಗಿಗಳು ಇಲ್ಲಿಯ ಶಕ್ತಿಗಳನ್ನು ಬಳಸಿಕೊಂಡು ಪ್ರಕೃತಿನಿಯಮವನ್ನು ಕೆಲಕಾಲ ಸ್ಥಗಿತಗೊಳಿಸಬಹುದು. ನಾವು ಪೂರ್ಣರೂಪದಿಂದ ಲಯಾವಸ್ಥೆಯನ್ನು ಹೊಂದಿದುದಾದರೆ ಈ ಶಕ್ತಿಯನ್ನು ನಾವು ಬೇಕಾದಷ್ಟು ದೊಡ್ಡ ಕಾರ್ಯದಲ್ಲಿ ಪ್ರಯೋಗಿಸಬಹುದು, ಇಲ್ಲಿಯ ಶಕ್ತಿಯಿಂದ ಮದ್ದು–ಗುಂಡುಗಳ ಶಕ್ತಿಯನ್ನು ಜಯಿಸಬಹುದು. ಈ ಪ್ರಪಂಚದಲ್ಲಿ ಜರುಗುವ ಎಲ್ಲ ಘಟನೆಗಳೂ ಮೊಟ್ಟ ಮೊದಲು ಇಲ್ಲಿಯೇ ಸಂಭವಿಸುವುವು; ಮತ್ತು ಅವು ಘಟಿಸುವ ಮುಂಚೆಯೆ ಅವನ್ನು ನಾವು ತಿಳಿದು ಕೊಳ್ಳಬಹುದು. ನಮ್ಮ ಅನುಭವವು ತೀವ್ರವಾಗಿದ್ದರೆ, ನಮಗೆ ಬ್ರಹ್ಮಾಂಡದೇಶದ ಸಣ್ಣ ಸಣ್ಣ ಕೇಂದ್ರಗಳಲ್ಲಿ ಆಯಾ ಬಿಂದುಗಳಿಗೆ ಸಂಬಂಧಪಟ್ಟ ಭೂಭಾಗಗಳ ಮೇಲೆ ಪ್ರಭಾವಬೀರುವ ವಿಭಿನ್ನ ಶಕ್ತಿಗಳು ದೊರೆಯುವುವು.

ವೈಜ್ಞಾನಿಕ ರೀತಿಯಿಂದ ಈ ಶಕ್ತಿಗಳ ಅನುಸಂಧಾನ ಮಾಡಿದ್ದಾದರೆ ಅವನ್ನು ಶಸ್ತ್ರಾಸ್ತ್ರಗಳಲ್ಲಿ ಬಳಸಬಹುದು. ಆದರೆ ಕೇವಲ ಪಾಶ್ಚಾತ್ಯ ನಾಗರಿಕತೆ-ಯುಳ್ಳ ಜನರಷ್ಟೇ ಈ ರೀತಿಯ ಅನುಭವವನ್ನು ಬೆಳೆಸಿಕೊಳ್ಳಬಲ್ಲರು. ಏಕೆಂದರೆ ಅವರ ದೃಷ್ಟಿಯು ಈಶ್ವರ ಪ್ರಾಪ್ತಿಯಕಡೆಗಿರದೆ ಭೌತಿಕ ಪದಾರ್ಥಗಳ ಕಡೆಗಿರುತ್ತದೆ. ನಮ್ಮಲ್ಲಿಯ ಯೋಗಿಗಳು ಈ ಕಡೆಗೆ ಲಕ್ಷ್ಯ ಕೊಡುವುದಿಲ್ಲ. ಏಕೆಂದರೆ ಅವರ ಧ್ಯೇಯವು ಭಗವತ್‌ಪ್ರಾಪ್ತಿ-ಯಾಗಿದ್ದು ಪ್ರಪಂಚದ ಕಲ್ಯಾಣಕ್ಕಾಗಿ ಆ ಶಕ್ತಿಯನ್ನು ಪಯೋಗಿಸುವರು. ಆದರೆ, ಯಾವ ಸ್ಥಿತಿಯಲ್ಲಿ ನಿಯತಿಯು ಪ್ರಪಂಚದಲ್ಲಿ ವಿನಾಶಕಾರಿ ಪ್ರಯೋಗವನ್ನಪೇಕ್ಷಿಸಿ ನಾಶವನ್ನುಂಟುಮಾಡುತ್ತ ಹೋಗುವುದೋ ಆ ಸ್ಥಿತಿಗಳು ಮಾತ್ರ ಅಪವಾದಾತ್ಮಕವಾಗಿವೆ. ಈ ಸ್ಥಾನವು ಎಷ್ಟು ದೊಡ್ಡದಿದೆಯೆಂದರೆ ಸಾವಿರಾರು ವರ್ಷ ಇದರಲ್ಲಿ ಸಂಚರಿಸಿದರೂ ಸಾಲದು. ಯೋಗ್ಯ ಮಾರ್ಗದರ್ಶಕನು ದೊರೆತು ತನ್ನ ಶಕ್ತಿಯಿಂದ ತೀವ್ರ ಸಂಚಾರ ಮಾಡಿಸಿದರೆ ಮಾತ್ರ ಇದು ಸಾಧ್ಯವಾಗುವುದು. ಆದುದರಿಂದಲೇ ನಮ್ಮನ್ನು ಈಯೆಲ್ಲ ಗ್ರಂಥಿಗಳಿಂದ ದಾಟಿಸಿ ಧ್ಯೇಯದ ವರೆಗೆ ತಲುಪಿಸುವ ಗುರುವಿನ ಅವಶ್ಯಕತೆ ಇದೆ. ಚಂದ್ರ ಹಾಗೂ ನಕ್ಷತ್ರಗಳ ಪ್ರಕಾಶ ಇಲ್ಲಿಯೆ ಇದೆ. ಸೂರ್ಯನೂ ಇಲ್ಲಿಯೆ ಬೆಳಗುವುದರಿಂದ ಆತನ ಪ್ರಕಾಶವು ಭೂಮಿಯುವರೆಗೆ ತಲುಪುವುದು. ಈಗ ನಾವು ನಮ್ಮನ್ನು ಈ ಗ್ರಂಥಿ-ಯಲ್ಲಿ ಲಯಗೊಳಿಸುವ ಅಗತ್ಯವುಂಟಾಗುವುದು. ನಮಗೆ ಸ್ವಲ್ಪ ಹೆಚ್ಚಿನ ಜ್ಞಾನವುಂಟಾಗಬೇಕೆಂಬ ದೃಷ್ಟಿಯಿಂದ ನಾವು ಇದರಲ್ಲಿ ಸಂಚರಿಸಿ ಲಯ ಹೊಂದಿದ ಮೇಲೆ ಅದರ ಸಾಗೂಪ್ಯತೆಯ ದಶೆಯನ್ನು ಪಡೆಯಲು ಯತ್ನಿಸುವೆವು. ಈ ಬಿಂದುವಿನಲ್ಲಿ ಸಾಧಕರು ಅವಧೂತರಾಗಿ ಬಿಡುವರು. ಇಲ್ಲಿಯ ದಶೆಯು ಮುಂದೆಹೋಗಲು ಮನಸ್ಸಾಗದಷ್ಟು ಚಿತ್ತಾಕರ್ಷಕ-ವಾಗಿದೆ. ಆದರೂ ನಾವು ಹೇಗೋ ಲಯಾವಸ್ಥೆಯನ್ನು ಪಡೆದು ಅದರ ಸಾರೂಪ್ಯತೆಯ ದಶೆಯಲ್ಲಿ ಪ್ರವೇಶಿಸಿದಾಗ ದೃಶ್ಯವು ಬದಲಾಗಿ ನಮಗೆ

ಆ ಸ್ಥಾನದ ಜ್ಞಾನ ಬರುವುದು. ಇಲ್ಲಿ ಶುದ್ಧತೆಯಿದ್ದರೂ ಅದರಲ್ಲಿ ಸ್ವಲ್ಪ ಮಟ್ಟಿಗೆ ತೀವ್ರತೆಯಿರುತ್ತದೆ. ಆದುದರಿಂದ ಅದರಲ್ಲಿ ಸ್ವಲ್ಪ ಶಕ್ತಿ ಇದ್ದೇ ಇರುತ್ತದೆ. ಈ ಕಾಲದ ಜ್ಞಾನಿಗಳಿಗೆ ಅವರ ಜ್ಞಾನದ ಮಟ್ಟ ಎಷ್ಟೆಂಬುದನ್ನು ಕೇಳಿರಿ. ನಿಜವಾಗಿ ನೋಡಿದರೆ ವಾಸ್ತವಿಕ ಜ್ಞಾನದ ದಶೆಯು ಇನ್ನೂ ಅವರಲ್ಲಿ ಬಂದಿಲ್ಲ. ತಮ್ಮನ್ನು ತಾವು ಅವಾಸ್ತವ ರೂಪದಲ್ಲಿ ಜನತೆಯ ಮುಂದೆ ಪ್ರದರ್ಶಿಸಿಕೊಳ್ಳುವುದು ಶೋಚನೀಯ ಸಂಗತಿ. ಒಂದು, ಅವರು ಈ ವಸ್ತುವನ್ನು ತಪ್ಪು ತಿಳಿದುಕೊಂಡಿದ್ದಾರೆ; ಇಲ್ಲವೆ ತಮ್ಮ ಪ್ರತಿಷ್ಠೆಯನ್ನು ಮೆರೆಯಲು ಹೀಗೆ ಹೇಳುತ್ತಾರೆ. ಏಕೆಂದರೆ, ಕಣ್ಣಿದ್ದವರು ಕ್ವಚಿತ್ತಾಗಿಯೆ ದೊರೆಯುವರೆಂಬುದು ಅವರಿಗೆ ಗೊತ್ತು. ಒಂದುವೇಳೆ ಈ ವಸ್ತುಗಳನ್ನು ನೋಡುವವನು ದೊರೆತರೂ ಆತನನ್ನು ನಂಬುವವರಾರು. ? ಆ ಜನರೇ ಎಲ್ಲರೂ ಕೂಡಿ ಅವನ ಮಾತನ್ನು ಅಲ್ಲಗಳೆಯಲು ಸಿದ್ಧರಾಗಬಹುದು.

ಬಂಧು, ಇದು ಎಂತಹ ಸೊಗಸಾದ ಸ್ಥಾನ ! ಈ ಗ್ರಂಥಿಯ ಪ್ರಶಂಸೆಯನ್ನು ಎಷ್ಟೆಂದು ಮಾಡಬೇಕು ! ಈ ದಶೆಯ ವರ್ಣನೆಯನ್ನು ವಿಸ್ತಾರವಾಗಿ ಬರೆದುದಾದರೆ ವಿಷಯವು ಬಹಳ ದೀರ್ಘವಾಗುವುದು. ಆದುದರಿಂದ ಸಂಕ್ಷೇಪವಾಗಿ ಬರೆಯುವೆನು. ಕೃಷ್ಣಚಕ್ರದ ವಿಷಯವಾಗಿ ಗ್ರಂಥಗಳಲ್ಲಿ ಬಹಳಷ್ಟು ಹೇಳಲಾಗಿದೆ. ಅದರಲ್ಲಿ ಇದೇ ಶಕ್ತಿಯಿದ್ದಿತು. ಈಗ ನಾನು ಈ ಗ್ರಂಥಿಯನ್ನು ಭೇದಿಸಿ ಕೆಲವು ಸಂಗತಿಗಳನ್ನು ಹೇಳುವೆನು. ಅಭ್ಯಾಸಿಯು ಈ ರಹಸ್ಯದಲ್ಲಿ ಕಾಲಿಟ್ಟಾಗ ಚಕ್ರದಂಥ ಏನನ್ನೋ ಅನುಭವಿಸುವನು. ಇದರಲ್ಲಿ ಎಷ್ಟು ಶಕ್ತಿಯಿದೆ ಎಂದರೆ, ಅದನ್ನು ಅತ್ಯಂತ ದೊಡ್ಡ ವಸ್ತುವಿನ ಮೇಲೆ ಪೂರ್ಣವಾಗಿ ಪ್ರಯೋಗಿಸಿದರೆ ಅದು ಬರೀ ಅಲ್ಲಾಡುವುದಷ್ಟೇ ಅಲ್ಲ, ಚೂರು ಚೂರಾಗುವುದು. ಅಭ್ಯಾಸಿಯು ಈ ದಶೆಗೆ ಬಂದಾಗ ಅವನಿಗೆ ಇದರಲ್ಲಿ ಎಷ್ಟೋ ಸಂಗತಿಗಳು ತಿಳಿಯುವುವು. ಈಗ, ಈ ಶಕ್ತಿಯು ಹೇಗೆ ಹುಟ್ಟಿಕೊಂಡಿತು ? ಬೇರೆ ಬೇರೆ ಗ್ರಹಗಳು

ಒಂದೆಡೆ ಸೇರಿದಾಗ ಅವುಗಳನ್ನು ತಮ್ಮ ತಮ್ಮ ಸ್ಥಾನದಲ್ಲಿ ಹಿಡಿದು ನಿಲ್ಲಿಸುವ ಒಂದು ಶಕ್ತಿಯುಂಟಾಗುತ್ತದೆ. ಈ ಬಿಂದುವಿನ ಮೇಲೆ ಪೂರ್ಣ ಅಧಿಕಾರ ಪಡೆದಾಗ ಇಂಥ ಶಕ್ತಿಯು ಲಭಿಸುವುದು. ಪೂರ್ಣ ಅಧಿಕಾರ ಪಡೆಯುವುದೆಂದರೆ ಇದರಲ್ಲಿ ನಮ್ಮನ್ನು ಲಯಗೊಳಿಸುವುದೇ ಹೊರತು ಮತ್ತೇನೂ ಅಲ್ಲ; ಅದೂ ಔಷಧವು ಶರೀರದಲ್ಲಿ ಹೇಗೆ ಬೆರೆತು ಹೋಗುವುದೋ ಹಾಗೆ. ಇಷ್ಟನ್ನು ಮಾಡಿದ ನಂತರ ಇದಕ್ಕಿಂತ ಮೇಲೆಯೂ ಒಂದು ವಸ್ತು ದೊರೆಯುವುದು. ತಿಳಿವಳಿಕೆಗೋಸ್ಕರ ಅದನ್ನು ಮಹಾಕಾಲಚಕ್ರವೆಂದು ಕರೆಯುವೆನು. ಇದರ ಪ್ರಭಾವದಿಂದ ಎಲ್ಲ ನಕ್ಷತ್ರಗಳೂ ತಮ್ಮ ಸ್ಥಳದಲ್ಲಿ ಅಚಲವಾಗಿ ನಿಲ್ಲುವಂತಹ ಒಂದು ಕ್ಷೇತ್ರವು ಸಿದ್ಧವಾಯಿತು. ಇದು ಸುದರ್ಶನ ಚಕ್ರಕ್ಕಿಂತಲೂ ಹೆಚ್ಚು ಶಕ್ತಿಶಾಲಿಯಾಗಿದೆ. ಕಾಲವನ್ನು ಪರಿವರ್ತಿಸುವುದರಲ್ಲಿ ಈ ಅಸ್ತ್ರವು ಅತ್ಯಂತ ಪ್ರಬಲಸಾಧನವಾಗಿದೆ. ಈ ವಸ್ತುವು ಏಳನೆಯ ಗ್ರಂಥಿಯು ಕೊನೆಗೊಳ್ಳುವ ಸ್ಥಾನದಲ್ಲಿದೆ. ಜನರು ನನ್ನನ್ನು ಕ್ಷಮಿಸುವುದಾದರೆ, ಶ್ರೀಕೃಷ್ಣನಿಗೆ ಇದರ ಅಗತ್ಯವಿರದ ಕಾರಣ ಆತನಿಗೂ ಈ ಅಸ್ತ್ರವು ದೊರೆತಿರುವ ಸಂಭವವಿಲ್ಲವೆಂದು ಹೇಳಬಯಸುತ್ತೇನೆ. ಆದರೆ ಈಗ ಅದರ ಅವಶ್ಯಕತೆಯಿದ್ದ ಕಾರಣ ನಿಯತಿಯು ಅದನ್ನು ಯಾರಿಗಾದರೂ ಕೊಟ್ಟಿರುವ ಸಂಭವವಿದೆ.

ಒಂದು ಆಶ್ಚರ್ಯಕರ ಸಂಗತಿಯನ್ನು ಬರೆಯುವೆನು ಕೆಲ ಜನರಿಗೆ ಇದರಿಂದ ಆಘಾತವುಂಟಾಗುವ ಸಂಭವವಿದ್ದರೂ ನಿಜಸಂಗತಿ ಪ್ರಕಟವಾಗಲೇಬೇಕು. 'ಅಹಂ ಬ್ರಹ್ಮಾಸ್ಮಿ' ಯ ಸ್ಥಿತಿಯು ಎಲ್ಲಕ್ಕೂ ದೊಡ್ಡದೆಂದೂ ಅದನ್ನು ಪಡೆದವನು ಜ್ಞಾನಿಯೆಂದೂ ತಿಳಿಯಲಾಗುತ್ತದೆ. ಆದರೆ ಯಾರಾದರೂ ತಮಗೆ ಈ ದಶೆಯುಂಟಾಗಿದೆಯೆಂದು ಎದೆತಟ್ಟಿ ಹೇಳಬಲ್ಲರೊ ? ಗೋದಿಯ ರುಚಿ ಕೇಳಿದರೆ ಜನರು ಸ್ವಲ್ಪ ಸಿಹಿ ಎಂದು ಹೇಳಿಬಿಡುವರು. ಆದರೆ ಅದನ್ನು ತಿನ್ನುವ ವರೆಗೆ ಅದರ ನಿಜವಾದ ಸ್ವಾದದ ಅರಿವಾಗಲಾರದು. ಬಹುಶಃ ನಮ್ಮಲ್ಲಿಯ ಜ್ಞಾನಿಗಳ ಗತಿ ಇದೇ

ಆಗಿದೆ. ವಸ್ತುವನ್ನು ಆಸ್ವಾದಿಸಲಾರದಯೆ ಓದಿ ಓದಿಸಿ ವರ್ಣಿತ ಪರಿಣಾಮದ ತಿಳಿವಳಿಕೆಯನ್ನು ಪಡೆಯುವರು. 'ಸತ್ಯೋದಯ' ದಲ್ಲಿ ಈ ದಶೆಯನ್ನು ಕುರಿತು ಸಾಕಷ್ಟು ಹೇಳಲಾಗಿದೆ. ಇಲ್ಲಿ ಸಂಕ್ಷೇಪವಾಗಿ ಇಷ್ಟು ಹೇಳಬಹುದು : ಆತ್ಮ ಮತ್ತು ಶರೀರದ ಮಿಲನಬಿಂದುವಿನ ಮೇಲೆ ಪ್ರತಿಯೊಂದು ಗ್ರಂಥಿಯಲ್ಲಿಯೂ ಹೆಚ್ಚು ಕಡಮೆ ಇದರ ಅನುಭವ ಬರುವದು. ಆದರೆ ಈ ಗ್ರಂಥಿಯಲ್ಲಿ ಬಂದನಂತರವೇ ಈ ಅನುಭವವು ಸ್ಪಷ್ಟವಾಗಿಯೂ ನಿಚ್ಚಳವಾಗಿಯೂ ಇರುವಂಥ ಮಾನಃಸ್ಥಿತಿ ಉಂಟಾಗುವುದು. ಸೂರ್ಯನಲ್ಲಿ ಪ್ರಕಾಶ ಹಾಗೂ ಉಷ್ಣತೆ, ಚಂದ್ರನಲ್ಲಿಯ ತೇಜ ಮತ್ತು ಶೀತಲತೆ, ನಕ್ಷತ್ರಗಳಲ್ಲಿಯ ಹೊಳಪು- ಇವೆಲ್ಲ ನನ್ನದೆಂದೇ ಅನುಭವವಾಗುವುದು. ಯಾರಾದರೂ ರಾಮ, ಕೃಷ್ಣ ಅಥವಾ ಮೇಲಿನ ದೊಡ್ಡ ಆತ್ಮಗಳ ಬಗೆಗೆ ಚರ್ಚಿಸಿದರೆ ಆ ಚರ್ಚೆ ನನ್ನದೆಂದೇ ನಿಸ್ಸಂದೇಹವಾದ ಅನುಭವ ಬರುವುದು. ಈ ಗ್ರಂಥಿಯಲ್ಲಿ ಸಂಚರಿಸುತ್ತ ಈ ದಶೆಯು ಪೂರ್ಣವಾದಾಗ ಬೇರೆ ರಹಸ್ಯ ಹೊಳೆಯುವುದು. ಅರ್ಥಾತ್ ನಾವು ಈ ದಶೆಯೊಂದಿಗೆ ಸಮರಸವಾದಾಗ ಇಲ್ಲವೇ ಈ ಅನುಭವವನ್ನು ಲಯಗೊಳಿಸಿದಾಗ ಮೇಲೆ ಕಾಣತೊಡಗುವುದು. ಆಗ ಇರುವುದೆಲ್ಲ ಅದೇ ಎಂಬ ಪ್ರತೀತಿ ಬಲವತ್ತರವಾಗುವುದು. ಪ್ರತಿಯೊಂದು ಲಯಾವಸ್ಥೆಯ ನಂತರ "ಇದ್ದುದೆಲ್ಲ ಅದೇ" ಎಂಬ ದಶೆಯು ಸಂಕೇತರೂಪದಲ್ಲಿ ಅವಶ್ಯ ಉಳಿಯುವುದು. ಆದರೆ ಇಲ್ಲಿ ಆ ವಸ್ತುವು ಸ್ಪಷ್ಟ ರೂಪದಲ್ಲಿ ಬರುವುದು ; ಏಕೆಂದರೆ, ಈಗ ನಾವು ಈಶ್ವರೀಯ ಮಂಡಲದ ದೊಡ್ಡ ಕ್ಷೇತ್ರದಲ್ಲಿರುವೆವು. ನಾವು ಇನ್ನೂ ಮುಂದುವರಿದು "ಇದ್ದುದೆಲ್ಲ ಅದೇ" ಎಂಬ ಸ್ಥಿತಿಯಲ್ಲಿ ಲಯಹೊಂದಿದಾಗ ನಮಗೆ "ಎಲ್ಲವೂ ಅವನಿಂದಲೇ" (ಸರ್ವಂ ಬ್ರಹ್ಮಣಃ) ಎಂಬ ಅನುಭವದ ಹೊರತಾಗಿ ಬೇರೆ ಯಾವ ಅನುಭವವೂ ಆಗುವುದಿಲ್ಲ.

ಇದು ಬಹು ದೊಡ್ಡ ಗ್ರಂಥಿ ಇದರಲ್ಲಿ ಯಾವ ಯಾವ ದಶೆಗಳ ಸಾರವಿದೆಯೋ ತಿಳಿಯದು. ಈ ಸ್ಥಾನದ ವಿಶೇಷದಶೆಯೊಂದನ್ನು

ಬರೆದು ಬಿಡುವೆನು. ಅಭ್ಯಾಸಿಯು ಇಲ್ಲಿಗೆ ಬಂದು ಪ್ರಗತಿ ಹೊಂದಿದಾಗ ಅವನು ಪದಾರ್ಥಗಳನ್ನು ನೋಡಿದರೂ ಅವುಗಳ ಅಸ್ತಿತ್ವದ ಭಾನವಿರುವುದಿಲ್ಲ. ಈ ಪದಾರ್ಥಗಳ ಅಸ್ತಿತ್ವದ ಪ್ರಭಾವವು ಹೃದಯದ ಮೇಲೆ ಎಳ್ಳಷ್ಟೂ ಆಗುವುದಿಲ್ಲ. ನಾನು ಇದರ ಮುಖ್ಯಾಂಶಗಳನ್ನಷ್ಟೇ ವಿವರಿಸಿದ್ದೇನೆ. ಈ ಗ್ರಂಥಿಯ ಬಗೆಗೆ ಅಭ್ಯಾಸಿಗೆ ಅಭಿರುಚಿಯಿದ್ದುದಾದರೆ, ಹಾಗು ಜೊತೆಗೆ ಸಮರ್ಥ ಮಾರ್ಗದರ್ಶಿ ದೊರೆತುದಾದರೆ ಲಯಾವಸ್ಥೆ ಮತ್ತು ಸಾರೂಪ್ಯತೆಯು ನಂತರ ಅದರ ಕೊನೆಯ ಅವಸ್ಥೆ ಬರುವುದು. ಆಗ ಮುಂದಿನ ಗ್ರಂಥಿಗೆ ಹೋದ ಶುಭ ಸೂಚನೆ ದೊರೆಯುವುದು.

## ಎಂಟನೆಯ ಗ್ರಂಥಿ :

ಭಾಗ್ಯೋದಯವಾಗಿ ಅಭ್ಯಾಸವು ಸಹಾಯಮಾಡಿದಾಗ ನಾವು ಎಂಟನೆಯ ಗ್ರಂಥಿಗೆ ಬಂದೆವು. ಈಗ ಇಲ್ಲಿ ದೃಶ್ಯವೇ ಬದಲಾಯಿತು. ಏಳನೆಯ ಗ್ರಂಥಿಯಲ್ಲಿ ಪ್ರಾಪ್ತವಾದ ದಶೆಗಳ ಸೂಕ್ಷ್ಮರೂಪವು ಇಲ್ಲಿ ದೊರೆಯುವುದು. ಇಲ್ಲಿ, ಅಭ್ಯಾಸಿಗೆ 'ಸಂಸಾರವು ಸ್ವಪ್ನದಂತೆ' ಎಂಬ ಅನುಭವ ಬರುವದು. ಇದು ಪ್ರಕೃತಿಯ ಕ್ರೀಡಾ ಸ್ಥಳ. ಇಲ್ಲಿಗೆ ಬಂದಮೇಲೆ ವೈರಾಗ್ಯವು ಸುದೃಢವಾಗುವುದು, ಇಲ್ಲಿಂದ ಮುಂದೆ ವೈರಾಗ್ಯದ ಸಂಳಿವಿಲ್ಲವಾದರೂ ಅದರ ರೂಪವು ಬದಲಾಗುವುದು. ಇಲ್ಲಿ ವೈರಾಗ್ಯವು ಪರಿಪಕ್ವವಾಗುವುದು. ಪ್ರತಿಯೊಂದು ವಸ್ತುವೂ ಹಗುರಾಗಿ ಕಾಣುವುದು ವಿಚಾರದಲ್ಲಿ ಭಾರವಿರುಷ್ಪದಿಲ್ಲ. ಅಭ್ಯಾಸಿಯು ಶಾಂತಿ, ಸ್ಥಿರತೆ ಹಾಗು ಸಮಾಧಾನಗಳನ್ನನುಭವಿಸುವನು. ಈ ಶಾಂತಿಯು ಹೆಚ್ಚುತ್ತ ಹೆಚ್ಚುತ್ತ ಕೊನೆಗೆ ವಾಸ್ತವಿಕತೆಯಲ್ಲಿ ಪರಿವರ್ತನ ಹೊಂದುವ ದಶೆಯ ಆನಂದವನ್ನು ಸವಿಯುವನು. ಆದರೆ, ಬಂಧು, ಯಾರಲ್ಲಿ ಶಾಂತಿಯೊಂದಿಗೆ ವೇದನೆ ಹಾಗು ಅಸಮಧಾನಗಳಿವೆಯೋ ಆತನೇ ನಿಜವಾದ ಅಭ್ಯಾಸಿ. ಈ ವಸ್ತುವು ಕಸ-ಕಡ್ಡಿ, ಗಿಡ-ಗಂಟಿಗಳನ್ನು ಸ್ವಚ್ಛಮಾಡಿ ಮುಂದುವರಿಯಲು ಬಯಲನ್ನುಂಟುಮಾಡುವುದು.

ಸಂಸಾರವು ಕನಸಿನಂತೆ ಎಂಬುದನ್ನು ನಾವು ಕೇಳಿದ್ದೇವೆ; ಅದನ್ನು ಹಾಗೆಯೇ ಭಾವಿಸಬೇಕೆಂಬುದನ್ನೂ ಓದಿದ್ದೇವೆ. ಆದರೆ ನನಗೆನಿಸುವ ಮಟ್ಟಿಗೆ, ಕೇವಲ ಓದುವವರಿಗೆ ಆ ರೀತಿಯ ಪ್ರತೀತಿಯೇ ಆಗಿಲ್ಲ. ಹೇಳುವವರಾದರೂ ಯಾವಾಗಲೂ ಇದನ್ನೇ ಒತ್ತಿ ಒತ್ತಿ ಹೇಳುವರು. ಇದಂತೂ ನಿಯಮಿತ ರೂಪದಿಂದ ಅಭ್ಯಾಸಮಾಡುತ್ತ ಮಾಡುತ್ತ ಇಲ್ಲಿಯ ವರೆಗೆ ಬಂದ ಮೇಲೆ ವಿಕಾಸ ಹೊಂದುವ ಸ್ಥಿತಿಯಾಗಿದೆ. ಒಂದುವೇಳೆ ನಾವು 'ಸಂಸಾರವು ಕನಸಿನಂತೆ' ಎಂಬ ವಿಚಾರವನ್ನು ಬಲ ಪೂರ್ವಕ ದೃಢವಮಾಡಿಕೊಂಡುದಾದರೆ ಅದು ಕೃತ್ರಿಮವಾಗುವುದೇ ಹೊರತು ವಾಸ್ತವಿಕ ಸ್ಥಿತಿ ಬರಲಾರದು. ಇದಂತೂ ದಾರಿಕಾರನಿಗೆ ಆತನ ದಾರಿಯಲ್ಲಿ ಸಿಕ್ಕುವ ವಿಶೇಷ ಸ್ಥಾನದ ದಶೆಯಾಗಿದೆ. ಇದನ್ನು ಕೃತ್ರಿಮ ಉಪಾಯಗಳಿಂದ ಪರಿಪಕ್ವಗೊಳಿಸಿಕೊಂಡೆವಾದರೆ ನಮ್ಮದೃಷ್ಟಕ್ಕೆ ನಾವು ಮೋಸಹೋದಂತೆಯೆ. ಈ ಸ್ಥಾನದ ನಿಜವಾದ ದಶೆಯು ಶಾಂತಿಯದು. ನಾವು ಇದರಲ್ಲಿ ಲಯಹೊಂದಿದಾಗ ಇಲ್ಲಿಯ ದಶೆಯನ್ನು ಆತ್ಮಸಾಕ್ಷಾತ್ ಮಾಡಿಕೊಂಡಿರುವೆವೆಂದರ್ಥ. ಇಲ್ಲಿಂದ ಹೊರಗೆ ಬಂದು ಸಾರೂಪ್ಯತೆಯ ದಶೆಯಲ್ಲಿ ಪ್ರವೇಶಿಸಿದೆವೆಂದರೆ ಆ ಸ್ಥಿತಿಯ ಅನುಭವವಾಗುವುದು. ಈ ಸ್ಥಿತಿಯಲ್ಲಿ ಒಂದು ಹೊಸಚೈತನ್ಯ- ವಿರುವುದು. ಬೇಸಗೆಯ ದಿನಗಳಲ್ಲಿ ಬಿಸಿಲಿನ ಜಳದಿಂದ ಪೀಡಿತನಾದ ಮನುಷ್ಯನೊಬ್ಬನು ನದಿಯಲ್ಲಿ ಮುಳುಗಿ ಸ್ನಾನಮಾಡಿ ಬಂದನಂತರ ಹೇಗೆ ಸ್ಫೂರ್ತಿಯನ್ನನುಭವಿಸುವನೋ ಹಾಗೆ ಈ ಸ್ಥಿತಿಯಿದೆ. ಈಗ ನಾವು ಸಾರೂಪ್ಯತೆಯ ದಶೆಯಲ್ಲಿ ಬಂದೆವು, ಅಥವಾ ಇಲ್ಲಿಯ ಜೀವನದಲ್ಲಿ ಜೀವಪಡೆದೆವೆಂದು ಹೇಳಬಹುದು. ಈ ಜೀವನವನ್ನೂ ಲಯಗೊಳಿಸಿದಾಗ ಉಂಟಾಗುವ ಸ್ಥಿತಿಯು ನಾವು ಒಂಬತ್ತನೆಯ ಗ್ರಂಥಿಯನ್ನು ಮುಟ್ಟಿದ ಶುಭಸಂದೇಶವನ್ನೀಯುವುದು.

## ಒಂಬತ್ತನೆಯ ಗ್ರಂಥಿ

ಈಗ ನಾವು ಒಂಬತ್ತನೆಯ ಗ್ರಂಥಿಯನ್ನು ಪ್ರವೇಶಿಸುವೆವು. ನಮ್ಮ ಅನುಭವದ ರೂಪವೂ ಬದಲಾಯಿತು. ಎಲ್ಲಿಂದ ಭೂಮಾದ

*

ವಾಸ್ತವಿಕ ಸಂಬಂಧ ಪ್ರಾರಂಭವಾಗುವುದೋ ಆ ದಶೆಗೆ ಬಂದೆವು. ಯಾವುದೋ ಒಂದು ಬೇರೆ ಪ್ರಪಂಚದಲ್ಲಿ ನಮ್ಮ ಹೊಸ ಜನ್ಮವಾಯಿತೆಂಬುದನ್ನು ಅನುಭವಿಸುವ ಲೋಕವನ್ನು ನಾವೀಗ ಪ್ರವೇಶಿಸುವೆವು. ಇದರಲ್ಲಿ ಪ್ರಸಾರ ಹೊಂದಿ ರಸಾಸ್ವಾದನ ಮಾಡುತ್ತ ಮಾಡುತ್ತ ನಾವು ಪುನರ್ಜನ್ಮ ಹೊಂದಿದ ಲೋಕವು ಯಾರದೆಂಬುದರ ಅರಿವಾಗುವುದು. ಅದರ ಗುರುತನ್ನೂ ಅನುಮಾನವನ್ನೂ ಹೃದಯವು ತೋರಿಸತೊಡಗುವುದು. ಒಡೆಯನ ಇರುವಿಕೆಯನ್ನು ಗ್ರಹಿಸತೊಡಗುವುದು. ಆತನ ಮಹಿಮೆಯು ಎಷ್ಟು ಆಳವಾದ ಪ್ರಭಾವವನ್ನುಂಟುಮಾಡುವುದೆಂದರೆ ತಾನಾಗಿಯೇ ಆತನ ಪೂಜೆಯು ಆರಂಭವಾಗುವುದು. ಈ ದಶೆಯಲ್ಲಿ ಬರುವ ಮುನ್ನ ಸಾಂಸಾರಿಕ ಕ್ರಿಯಾಶೀಲತೆಯು ಹೆಚ್ಚು ಕಡಿಮೆ ಮುಕ್ತಾಯಹೊಂದುವುದು. ಸ್ವಾಮಿ ಮತ್ತು ಸೇವಕ – ಈ ಸಂಬಂಧವೇ ನಮ್ಮ ಮುಂದೆ ಇರುವುದು. ಆತನು ಸ್ವಾಮಿ, ನಾವು ಸೇವಕರು ಎಂಬ ಅನುಭವವೇ ಈ ಗ್ರಂಥಿಯಲ್ಲಿರುವುದು. ಒಡೆಯನ ಇರುವಿಕೆ ಮತ್ತು ಸಂಮಾನ ಪ್ರತಿಯೊಂದು ಸ್ಥಾನದಲ್ಲಿಯೂ ದೃಷ್ಟಿಪಥದಲ್ಲಿರುವುದು, ಒಂದು ವಿಚಿತ್ರರೀತಿಯ ಅಧೀನತೆಯ ದಶೆಯು ನಮ್ಮದಾಗುವುದು. ಸ್ವಭಾವದಲ್ಲಿ ಒಂದು ವಿಲಕ್ಷಣವಾದ ಮಾರ್ದವವಿರು– ವುದು. ದ್ವೇಷಭಾವವು ನಷ್ಟವಾಗುವುದು. ವಾಸ್ತವವಾಗಿ ಇಲ್ಲಿ ಈಶ್ವರನನ್ನು ಗುರುತಿಸುವ ಮೊದಲನೆಯ ಮೆಟ್ಟಲು ಆರಂಭವಾಗುವುದು. ಈ ಸ್ಥಾನದಿಂದ ನಮ್ಮ ಅಸ್ತಿತ್ವವು ಅಳಿಸಿಹೋಗಲು ಮೊದಲಾಗುವುದು. ಇದರಲ್ಲಿ ನಾವು ಆಳವಾಗಿ ಪ್ರವೇಶಿಸಿದಷ್ಟೂ ಅಸ್ತಿತ್ವವನ್ನು ಲಯಗೊಳಿಸುವುದರಲ್ಲಿ ಸಫಲತೆ ಸಿಗುವುದು. ದರ್ಶನದ ಸುಳುವು ಇಲ್ಲಿಂದಲೇ ಆರಂಭವಾಗುವುದು. ಈಗ ನಮ್ಮ ದಶೆಯು ಹೇಗಿರುವುದು ? ಹೆಚ್ಚು ಕಡಮೆ ಹನುಮಂತನ ಅವಸ್ಥೆಯೊಂದಿಗೆ ಹೋಲುವುದೆಂದು ಹೇಳಬಹುದು. ಯಾರಾದರೂ ಆತನಿಗೆ ಆತನ ಶಕ್ತಿಯ ಬಗ್ಗೆ ಎಚ್ಚರತಂದುಕೊಟ್ಟರೆ ಮಾತ್ರ ಆತನ ಉತ್ಸಾಹ ಜಾಗೃತವಾಗುತ್ತಿತ್ತು. ಇಲ್ಲವಾದರೆ ಆತನು ವಿಸ್ಮೃತನಂತೆ ಇದ್ದನು. ಇನ್ನೂ ಮುಂದೆ ನಡೆಯಿರಿ. ಪ್ರತಿಯೊಂದು ಸ್ಥಾನದಲ್ಲಿಯೂ

ಲಯಾವಸ್ಥೆ ಮತ್ತು ಸಾರೂಪ್ಯತೆಯ ಸಂಬಂಧವಿದೆ. ಕೆಲವೆಡೆ ಲಯಾವಸ್ಥೆಯಿದ್ದರೆ ಮತ್ತೆ ಕೆಲವೆಡೆ ಸಾರೂಪ್ಯತೆಯಿದೆ. ಈಗ ಅವಸ್ಥೆಗಳು ಕ್ರಮವಾಗಿ ಲಯಹೊಂದಿ ನಮ್ಮನ್ನು ಸಾರೂಪ್ಯತೆಯಲ್ಲಿ ಒಯ್ಯುವವು. ಸಾರೂಪ್ಯತೆಯೂ ಲಯಾವಸ್ಥೆಗೆ ಬಂದಾಗ ಹತ್ತನೆಯ ಗ್ರಂಥಿಯನ್ನು ತಲುಪಿದ ಶುಭ ಸಮಾಚಾರ ದೊರೆಯುವುದು.

## ಹತ್ತನೆಯ ಗ್ರಂಥಿ :

ಈಗ ನಾವು ಹತ್ತನೆಯ ಗ್ರಂಥಿಗೆ ಬಂದೆವು. ಒಂಬತ್ತನೆಯ ಗ್ರಂಥಿಯ ದಶೆಯು ಬದಲಾಗಿ ಅದರ ದಾರಿ ಬೇರೆಕಡೆಗೆ ತಿರುಗಿತು. ಸೇವೆಯು ಎಷ್ಟು ಮಟ್ಟಿಗೆ ಮೈಗೂಡಿತೆಂದರೆ ಒಡೆಯನ ಮನೆಯನ್ನು ನಮ್ಮ ಮನೆಯೆಂದು ತಿಳಿಯತೊಡಗಿದೆವು. ಅರ್ಥಾತ್ ನಮ್ಮಲ್ಲಿ ಸ್ವಾಮಿತ್ವದ ಗಂಧವು ಸಲ್ಪಮಟ್ಟಿಗೆ ಬರತೊಡಗಿತೆಂದು ಹೇಳಲಡ್ಡಿಯಿಲ್ಲ. ಆದರೆ ಇದು ಕೃತ್ರಿಮವೇನಲ್ಲ. ಈ ದಶೆಯು ಹತ್ತನೆಯ ಗ್ರಂಥಿಯದು. ಅಲ್ಲಿಗೆ ಮುಟ್ಟಿದ ನಂತರ ಇದು ತಾನಾಗಿ ಬರಲೇಬೇಕು. ಸ್ವಾಮಿಯ ಸಾಮೀಪ್ಯ ಹೆಚ್ಚುವುದರಿಂದ ಆತನ ಪ್ರಭಾವವು ನಮ್ಮಲ್ಲಿ ಅನುಭವಕ್ಕೆ ಬರತೊಡಗುವುದು. ಯಾವ ರೀತಿ ನದಿಯ ಹತ್ತಿರ ಹೋದ ಬಳಿಕ ಅದರ ಪ್ರವಾಹವನ್ನು ಕಂಡು ನಮ್ಮೊಳಗೆ ತಾನಾಗಿಯೆ ತರಂಗಗಳೇಳುವುವೋ ಅದೇ ದಶೆಯು ನಮ್ಮದಾಗುವುದು. ಅಭ್ಯಾಸಿಯು ತನ್ನ ಸಮ್ಮಾನವನ್ನು ತಾನೇ ಮಾಡಿಕೊಳ್ಳುವನು. ಅಥವಾ ಹೀಗೆ ಹೇಳಬಹುದು ; ಚಂದನದ ಸುಗಂಧಕ್ಕಾಗಿ ನಾವು ಮರದ ಬಳಿ ಹೋಗಬೇಕಾಗುವುದು. ಆದರೆ ಅದೇ ಚಂದನವನ್ನು ತೇದು ಹಣೆಗೆ ಹಚ್ಚಿಕೊಂಡಾಗ ಸುಗಂಧವು ನಮ್ಮ ಸಮೀಪವೇ ಇರುವುದರಿಂದ ನಾವು ಇದ್ದಲ್ಲಿಯೆ ಅದರ ಆನಂದವನ್ನು ಸವಿಯತೊಡಗುವೆವು. ಈಗ ನಾವು ಆತನ ಮನೆಯನ್ನು ತಲುಪಿದೆವು ; ಅಲ್ಲಿಯ ತಂಪು ಸೋಂಕಹತ್ತಿತು. ಯಾವನೋ ಸೇವಕನೊಬ್ಬ

ತನ್ನ ಪ್ರತೀಕ್ಷೆಯಲ್ಲಿರುವನೆಂದು ಸ್ವಾಮಿಗೂ ಈಗ ಅನುಭವ ಬರತೊಡಗಿತು. ಸಾಮೀಪ್ಯವು ಇನ್ನೂ ದೂರವಿದ್ದರೂ ಸಮರೂಪತೆಯು ಹೆಚ್ಚತೊಡಗಿತು. ಈಶ್ವರನ ಕಾರ್ಯ ಇಲ್ಲಿಗೆ ಮುಗಿಯಿತು. ಇಲ್ಲಿಂದ ಮುಂದೆ ಆತನದೂ ಪ್ರವೇಶವಿಲ್ಲ. ಮುಂದುವರಿದಂತೆ ಭೂಮಾದ ಸಂಬಂಧವು ಆರಂಭ ವಾಗುವುದು; ಹಾಗು ಬಂಧನದಿಂದ ಬಿಡುಗಡೆ ದೊರೆಯುವುದು. ಈ ಸ್ಥಾನದಲ್ಲಿ ತೀರ ವಿರಳ ಜನರೇ ಬರುವರು. ಇಲ್ಲಿ ಗಾಳಿಯ ಸುಳಿವಿಲ್ಲ. ಆದರೆ ಬಹಳ ಪರಿಶ್ರಮ ಹಾಗು ಅಭ್ಯಾಸದ ನಂತರ ದೊರೆಯುವ ಗಾಳಿಯಿದೆ. ಇಲ್ಲವೆ. ಗಾಳಿ ಬದಲಾಗುವುದೆಂದೂ ಹೇಳಬಹುದು. ಗಾಳಿಯ ಮೂಲತತ್ತ್ವ ಮಾತ್ರ ಉಳಿಯುವುದು. ನಾವು ಅದರೊಂದಿಗೇ ಮುಂದು ವರಿಯಬೇಕಾಗಿದೆ. ಆ ತತ್ತ್ವವೆಂಥದು ? 'ಶೂನ್ಯ' ವೆನ್ನುವುದು ಉಚಿತವಾಗಲಿಕ್ಕಿಲ್ಲ. 'ಭೂಮಾದ ನೆರಳೆ'ಂದರೂ ಯೋಗ್ಯ ವರ್ಣನೆ ಯಾಗಲಾರದು. ಕಾರಣವೆಂದರೆ ಅದೂ ಭಾರವೇ ಆಗುವುದು. "ಭೂಮಾ ಇದೆ; ಆದರ ಇರುವಿಕೆಯ ಅನುಭವವೂ ಇದೆ. ಯಾವುದೋ ಒಂದು ಅವಿನಾಶಿ ಹಾಗು ಅಖಂಡ ಅಸ್ತಿತ್ವವಿದ್ದು ನಾವು ಅದರ ಕಡೆಗೆ ಹೋಗ ಬೇಕಾಗಿದೆ–" ಎಂದಿಷ್ಟೇ ಅನುಭವವಿರುವುದೆಂದು ಹೇಳುವುದೇ ಉಚಿತವೆಂದು ತೋರುತ್ತದೆ. ಆಗ ನಾವು ಮುಂದಿನ ಗ್ರಂಥಿಗೆ ಆರೋಹಣ ಮಾಡಿರುವೆ ವೆಂದು ತಿಳಿಯಬೇಕು.

## ಹನ್ನೊಂದನೆಯ ಗ್ರಂಥಿ

ಸ್ಥಿತಿಯು ಹೀಗಿದ್ದಾಗ ನಾವು ಹನ್ನೊಂದನೆಯ ಗ್ರಂಥಿಯಲ್ಲಿ ಕಾಲಿಟ್ಟೆವು. ಈಗ ಆವರಣ ತಿರುವುಮುರುವಾಯಿತು; ನಿಜತ್ವದ ಸುಳುವು ತೋರ ತೊಡಗಿತು. ಅಂತಃಕರಣವು ವಿವಶವಾಯಿತು... ಒಮ್ಮೆ ಮಿಡಿತ, ಒಮ್ಮೆ ನೋವು. ಯಾವಾಗಲೂ ಅವನನ್ನೇ ಪಡೆಯುವ ಶೋಧವಿದೆ. ಆತನಿಲ್ಲದೆ ಶಾಂತಿ–ಸಮಾಧಾನಗಳೆಲ್ಲಿ ? ನಿಜ ಹೇಳಬೇಕಾದರೆ, ಶಾಂತಿಯೂ

ಈಗ ಅಪ್ಪಣೆ ತೆಗೆದುಕೊಂಡಿತು. ಆ ಸ್ಥಾನದಲ್ಲಿ ಈಗ ಏನಿದೆ ? ಶಾಂತಿಯ ದಶೆಯೊಳಗಿಂದ ಶಾಂತಿಯನ್ನು ಸೆಳೆದುಕೊಂಡರೆ ಯಾವ ಅನುಭವ ಬರುವುದೋ ಅದೇ ಸ್ಥಿತಿ ಈ ಗ್ರಂಥಿಯನ್ನು ತಲುಪಿದಾಗ ಬರುವುದು. ನಮಗೆ ಈ ಅನುಭವ ಬಂದು ಅದನ್ನೂ ಲಯಗೊಳಿಸಿದೆವು. ಈಗ ಎಲ್ಲವೂ ವಿಸ್ಮೃತವಾಯಿತು. ನಾವು ಎಲ್ಲಿ ಧುಮುಕಿದ್ದೇವೆಂಬ ಜ್ಞಾನವೂ ನಮಗಿಲ್ಲ. ಆದರೂ ನಾವು ಮುಳುಗಿ ಎದ್ದಾಗ ಅದರ ಲಯಾವಸ್ಥೆಯನ್ನು ದಾಟಿದೆವೆಂದು ಹೇಳಬಹುದು. ಈಗ ಅಲ್ಲೇನಿದೆ ? ಎಲ್ಲವೂ ಹೊರಟು ಹೋದರೂ ನೋವು ಮಾತ್ರ ಇನ್ನೂ ಇದೆ. ಈ ನೋವು ನಮ್ಮನ್ನು ಗುರಿಯ ವರೆಗೆ ತಲುಪಿಸಲು ಸಹಾಯಕವಾಗುವುದು. ನಾವು ಮೂಲದಶೆಯಲ್ಲಿ ಬೆರೆತು ಹೋದಾಗ ಇದು ಇಲ್ಲದಂತಾಗುವುದು. ಈಗ ನಾವು ಸಾರೂಪ್ಯತೆಯ ಅವಸ್ಥೆಯಲ್ಲಿರುವೆವು. ಬರುಬರುತ್ತ ಅದರದೂ ಲಯವಾದಾಗ ನಾವು ತಿಳಿಯಾದ ಸಾರೂಪ್ಯತೆಯ ದಶೆಯನ್ನು ಸೇರುವೆವು. ಇದು ಹನ್ನೆರಡನೆಯ ಗ್ರಂಥಿಯನ್ನು ಮುಟ್ಟಿದ ಸೂಚನೆ ಕೊಟ್ಟಿತು.

## ಹನ್ನೆರಡನೆಯ ಗ್ರಂಥಿ

ಈಗ ನಾವು ಹನ್ನೆರಡನೆಯ ಗ್ರಂಥಿಯನ್ನು ತಲುಪಿದೆವು. ಅಲ್ಲೇನಿದೆ ? ಬೇರೆ ಬೇರೆ ಲಯಾವಸ್ಥೆ ಹಾಗು ಸಾರೂಪ್ಯತೆಯ ಅವಸ್ಥೆಗಳಿಂದ ನಮಗೆ ಏನೆಲ್ಲ ದೊರೆತಿದ್ದಿತೋ ಅದೂ ಈಗ ಲಯವಾಯಿತು. ಇನ್ನು ನಾವು ಅದರ ಸಾರೂಪ್ಯತೆಯಲ್ಲಿ ಬರಬೇಕಾಯಿತು. ಅದೂ ಮುಗಿಯಿತು. ನಾವು ಆ ದಶೆಯಲ್ಲಿ ಬಂದೆವು. ಇಲ್ಲಿಯ ದೃಶ್ಯವು ಬಹಳ ಸ್ವಚ್ಛ ಹಾಗು ನಿರ್ಮಲವಿದೆ. ಇದರಮುಂದೆ ಸರಳತೆಯೂ ಸಾವಿರಪಾಲು ಭಾರವೆನಿಸುವುದು. ನಾವು ಇನ್ನೂ ಮುಂದುವರಿದಾಗ, 'ಸರಳತೆ' ಗಿಂತ ಹೆಚ್ಚು ಒಳ್ಳೆಯ ಶಬ್ದ ಬಳಸಲು ಸಿಕ್ಕರೂ ಇದಕ್ಕಿಂತ ಎಷ್ಟೋ ಪಾಲು ಭಾರವೇ ಆಗುವುದು. ಈಗ ಸಾಯುಜ್ಯತೆ ಬಂದಿತು. ನಮಗೊಂದು ಹೊಸ

ಬಗೆಯ ಜೀವನ ಪ್ರಾಪ್ತವಾಯಿತು. ಅದರ ಅನುಭವವು ನಮಗೆ ಮುಂದಿನ ಗ್ರಂಥಿಯಲ್ಲಾಗುವುದು.

**ಹದಿಮೂರನೆಯ ಗ್ರಂಥಿ :**

ನಾವೀಗ ಹದಿಮೂರನೆಯ ಗ್ರಂಥಿಗೆ ಬಂದೆವು. ಇಲ್ಲಿ ಜೀವನವೇ ಜೀವನ. ನಾನು ಕೇವಲ ದೊಡ್ಡ ದೊಡ್ಡ ಗ್ರಂಥಿಗಳನ್ನು ಕುರಿತು ಹೇಳಿದ್ದೇನೆ. ಸಣ್ಣ ಸಣ್ಣ ಗ್ರಂಥಿಗಳು ಅಗಣಿತವಾಗಿದ್ದು ಅವುಗಳ ನಡುವಿನ ಅಂತರವನ್ನು ವರ್ಣಿಸಲು ಸಾಧ್ಯವಿಲ್ಲ. ಇಲ್ಲಿಯವರೆಗಿನ ಅನುಭವವನ್ನಂತೂ ಶಬ್ದಗಳ ತಿರುವುಮುರುವು ಹೇಳಿಕೊಟ್ಟಿತು. ಮುಂದೆ, ಈ ಅವಸ್ಥೆಯನ್ನು ವರ್ಣಿಸಲು ಶಬ್ದಗಳು ಸಿಗುವುದಿಲ್ಲ. ಆದರೂ ನಮ್ಮ ಯಾತ್ರೆ ಸಾಗುತ್ತಲೇ ಇರುತ್ತದೆ. ಇಂಥ ಅಸಂಖ್ಯ ಗ್ರಂಥಿಗಳು ಸಿಗುವುವು; ಮತ್ತು ಲಯ ಹಾಗು ಸಾರೂಪ್ಯತೆಯ ಅವಸ್ಥೆಗಳು ಜೊತೆ ಜೊತೆಗೇ ನಡೆಯುವುವು. ಈ ಗ್ರಂಥಿಗಳಲ್ಲಿ ಮುಂದುವರಿದಮೇಲೆ ಮಾಯೆಯ ಸ್ಪರ್ಶವೂ ಇಲ್ಲದಂತಾಗುವುದು. ನಾವು ಇನ್ನೂ ದೂರು ನಡೆದು ಒಂದು ಗ್ರಂಥಿಯನ್ನು ಮುಟ್ಟುವೆವು. ಅಲ್ಲಿ ಲಯ ಮತ್ತು ಸಾರೂಪ್ಯತೆಯನ್ನು ಹೊಂದಿದಮೇಲೆ ಬಹುಶಃ ಅಹಂಭಾವ ಸಮಾಪ್ತವಾಗುವುದು. ಅಲ್ಲಿಂದ ಮುಂದೆ ಸ್ವರೂಪವೇ ಬದಲಾಗುವುದು. ಸಾವಿರಾರು ವರ್ಷಗಳಲ್ಲಿ ಎಲ್ಲೋ ಈ ಅವಸ್ಥೆ ಬರುವುದು. ಯಾರಾದರೂ ಸದ್ಗುರು ದೊರೆತರೆ ಮಾತ್ರ ಮುಂದುವರಿಯಲು ಸಾಧ್ಯ. ಯಾರಿಗೆ ಸದ್ಗುರು ದೊರೆತಿರುವನೋ ಅವರು ಪ್ರತಿಯೊಂದು ಗ್ರಂಥಿಯ ಯಾತ್ರೆಯನ್ನೂ ಮಾಡಿ ಕೊನೆಗೆ ಜ್ಞಾನವು ಎಲ್ಲಿ ಪರಿಸಮಾಪ್ತಿಹೊಂದುವುದೋ ಆ ಸಮುದ್ರದ ದಡವನ್ನು ತಲುಪಿದ್ದಾರೆ. ಜನರು ಇದನ್ನೋದಿ ತಮ್ಮನ್ನು ತಾವು ತೂಗಿಕೊಳ್ಳಲಿ. ಆಗ, ಜ್ಞಾನವೆಂದರೇನು, ಅದರ ಕೆಲಸ ಎಲ್ಲಿ ಮುಗಿಯುವುದು ಎಂಬುದು ತಿಳಿದು ಬರುವುದು. ಎಲ್ಲಿ ಜ್ಞಾನದ ಅನುಭವವು ಕೊನೆಗೊಳ್ಳುವುದೋ ಅಲ್ಲಿಗೆ ಅದರ ಕಾರ್ಯ ಮುಗಿಯಿತು,

ಆಗ ಏನೂ ತಿಳಿಯದ ಒಂದು ಹಸುಗೂಸಿನ ಅವಸ್ಥೆ ಬರುವುದು. ಈ ಅಪಾರ ಸಾಗರದ ಸಮೀಪ ಹೋದಾಗಲೇ ಈ ದಸೆಯು ಪ್ರಾಪ್ತವಾಗುವುದು. ಈ ಸ್ಥಿತಿಯು ಅಜ್ಞಾನದ ಪರಿಧಿಯಲ್ಲಿ ಬರುವುದು. ಇದೇ ವಾಸ್ತವಿಕ ಜ್ಞಾನ ಹಾಗು ನಿಜಾವಸ್ಥೆ.

# ಅಂತಿಮದಶಾ ಪ್ರಕರಣ

ಆದರೆ ಬಂಧು, ಇದೂ ಕೊನೆಯಲ್ಲ. ನಮಗೆ ಇದಕ್ಕಿಂತ ಮುಂದೆ ಹೋಗಬೇಕಾಗಿದೆ. ಆದರೀಗ ಜ್ಞಾನದ ಆಸರೆ ತಪ್ಪಿಹೋಗಿದೆ, ಈಗಂತೂ ನಾನು ಯಾವುದನ್ನು ಅಜ್ಞಾನ*ವೆಂದು ಕರೆದಿರುವೆನೋ ಅದೇ ನಮ್ಮದಾಗಿದೆ. ಅದೇ ದಶೆಯು ಪರಿವರ್ತನ ಹೊಂದಿ ನಮ್ಮನ್ನು ಗುರಿಗೆ ಮುಟ್ಟಿಸುವುದು. ಬೇರೆ ಯಾವುದೂ ಸಹಾಯಕವಾಗಲಾರದು. ಇಲ್ಲಿ ಸಾಲೋಕ್ಯತೆ, ಸಾಯುಜ್ಯತೆ ಮುಂತಾದ ಎಲ್ಲ ದಶೆಗಳೂ ಮುಗಿದು ಹೋಗಿವೆ, ಈಗ ನಮಲ್ಲಿ ಅಜ್ಞಾನವುಂಟಾಗಿದೆ ; ಮತ್ತು ಇದು ಯೋಗ್ಯವೂ ಆಗಿದೆ. ಯಾವ ಮನುಷ್ಯನಿಗೆ ಸಾಗರದ ಪರಿಚಯವಿಲ್ಲವೋ ಅವನೇ ತನ್ನನ್ನು ಅದರಲ್ಲಿ ಎಸೆಯಲು ಸಿದ್ಧನಾಗುವನು. ತಿಳಿವಳಿಕೆ-ಯುಳ್ಳವನು ಸಮುದ್ರದಲ್ಲಿ ಕಾಲನ್ನೇ ಇಡಲಾರ, ಏಕೆಂದರೆ ಆತನಿಗೆ ಅದರ ಪರಿಣಾಮ ತಿಳಿದಿದೆ. ಅದರಲ್ಲಿ ಕಾಲಿಟ್ಟುದೇ ಆದರೆ ಜೀವನ ಮುಗಿದಂತೆಯೇ ಎಂಬುದರ ಅರಿವಿದೆ. ಅರ್ಥಾತ್ ಆತನಲ್ಲಿ ತಿಳಿವಳಿಕೆ ಇನ್ನೂ ಉಳಿದಿದೆ. ಈಗ ನಮ್ಮ ಅಜ್ಞಾನವು ಕೊನೆಗೆ ನಮ್ಮನ್ನು ಆ ಅಗಾಧ ಸಮುದ್ರದಲ್ಲಿ ಇಳಿಸಿಯೇ ಬಿಟ್ಟಿತು. ನಾವು ಅದರಲ್ಲಿ ಬಿದ್ದ ಮೇಲೆ ನಮಗೆ ಅದರ ದಂಡೆಯನ್ನು ಸೇರುವ ಚಿಂತೆಯಾಯಿತು. ಆದುದರಿಂದ ಈಗ ನಾವು ಇದೇ ಚಿಂತೆಯಲ್ಲಿ ಮುಂದುವರಿಯ ಹತ್ತಿದ್ದೇವೆ. ನಾವೆಯ ಪತ್ತೆಯೆ ಇಲ್ಲ; ಏಕೆಂದರೆ, ಅದಂತೂ ಇಲ್ಲಿಗೆ ಬರುವುದಕ್ಕಿಂತ ಮುಂಚೆಯೇ ಮುಳುಗಿಬಿಟ್ಟಿದ್ದಿತು. ಈಗ ಹೇಗೋ ಸಾಗಬೇಕಾಗಿದ್ದು ಈಜುತ್ತ ನಡೆದಿದ್ದೇವೆ. ಹೀಗೆಯೆ ಎಷ್ಟೋ ಹರದಾರಿ ಮುಂದೆಹೋದೆವು. ನಮಗೆ ಯಾತ್ರೆಯಲ್ಲಿ ನಾನಾ ತರಂಗಗಳೂ ಏರಿಳಿತಗಳೂ ತಿರುವುಗಳೂ

---

* ಪರಿಶಿಷ್ಟ – ೨ ನೋಡಿರಿ.

ದೊರೆತುವಾದರೂ ಅವೆಲ್ಲ ಮೌನವಾಗಿದ್ದುವು. ಅವುಗಳ ಇರುವಿಕೆಯು ಅನುಮಾನ ಮಾತ್ರ ಇದ್ದಿತು. ಇದೇ ಅನುಮಾನದಲ್ಲಿಯೆ ನಾವು ಮುಂದು-ವರಿದಿದ್ದೇವೆ. ಕೊನೆಗೆ ಆ ಅನುಮಾನವೂ ಇಲ್ಲದಾಯಿತು. ಈಗ ಸಮನಾದ ಪಾತಳಿ ದೊರೆಯುವುದು. ತರಂಗಗಳಾಗಲಿ ಏರಿಳಿತಗಳಾಗಲಿ ಇಲ್ಲ. ಇದನ್ನು ತಿಳಿಸಲು ನಾನು 'ಸತ್ಯೋದಯ'ದಲ್ಲಿ ಏಳು ವೃತ್ತಗಳನ್ನು ತೋರಿಸಿದ್ದೇನೆ. ಬಂಧು, ಅನುಮಾನವಾದರೂ ಎಲ್ಲಿಯವರೆಗೆ ? ಅದೂ ಕೊನೆಗೊಳ್ಳಲೇಬೇಕು. ಮನುಷ್ಯನು ದೀರ್ಘ ಪ್ರವಾಸ ಮಾಡಿದಾಗ, ದಾರಿ ನಡೆಯುತ್ತ`ನಡೆಯುತ್ತ ದಣಿವನ್ನೂ ಮರೆಯುವ ಸ್ಥಿತಿ ಬರುವುದು. ಇದು ಅನುಭವದ ಮಾತು. ಬೇಕಾದರೆ ಇದನ್ನು ಮಾಡಿ ನೋಡಬಹುದು. ಈ ಪ್ರಕಾರ ನಮ್ಮ ಯಾವ ಅಜ್ಞಾನದಿಂದ ನಾವು ಸಮುದ್ರದ ದಡವನ್ನು ಸೇರಿದೆವೋ ಅದೂ ಈಗ ಕೊನೆಗೊಂಡಿತು. ನಮ್ಮ ವಿಚಾರದಲ್ಲಿ ಅಜ್ಞಾನದ ಸುಳಿವು ಸಹ ಇಲ್ಲ. ಆದರೆ ನಮಗಿನ್ನೂ ಮುಂದೆ ಹೋಗಬೇಕಾಗಿದೆ.

ಅಜ್ಞಾನವನ್ನಂತೂ ಸಮಾಪ್ತಗೊಳಿಸಿದೆವು. ಇನ್ನು ಮುಂದೆ ಉಂಟಾಗುವ ಸ್ಥಿತಿಗೆ–ಅದು ಉಂಟಾಗಿಲ್ಲವೆಂದೇ ಹೇಳಬಹುದಾದರೂ– 'ತಮ ಅವಸ್ಥೆ'ಯೆಂಬ ಶಬ್ದವೇ ಉಪಯುಕ್ತವಾಗಿದೆ. ಇದೇ ನಮ್ಮನ್ನು ಮುಂದಕ್ಕೊಯ್ಯುತ್ತ ನಡೆಯುವುದು. ಇದಕ್ಕೆ ಕೊನೆಯಿಲ್ಲ. ನಾವು ಮುಂದುವರಿದಂತೆಲ್ಲ. ಈ ವಸ್ತುವು ನಿರಂತರವಾಗಿ ಇದ್ದೇ ಇರುವುದು. ಯಾವನಾದರೂ ಸಾಹಸಿಗ ಮನುಷ್ಯನಲ್ಲಿ ಮುಂದಿನ ವಸ್ತುವನ್ನು ಅನುಮಾನ ಮಾಡುವ ವಿಶೇಷ ಯೋಗ್ಯತೆಯುಂಟಾದುದಾದರೆ, ಇದರಾಚೆ ಒಂದು ಬಿಂದುವಿರುವುದೆಂದು ಮಾತ್ರ ತಿಳಿದುಬರುವುದು. ಬಿಂದುವೇನು ಬಂತು, ಅದರ ಸುತ್ತಲೂ ವೃತ್ತವಿರುವುದೆಂದೇ ಹೇಳಬೇಕು ಇಲ್ಲಿ, ಈ ಕೇಂದ್ರ ಬಿಂದುವಿನ ಅನುಭವ ಪಡೆಯುವ ವ್ಯಕ್ತಿಯು ಕ್ವಚಿತ್ತಾಗಿಯೆ ಹುಟ್ಟುವನು. ಇರಲಿ, ಅದನ್ನೂ ಹೇಳಿಯೆ ಬಿಡುವೆನು. ಒಬ್ಬ ಮಹಾತ್ಮನು ಹುಟ್ಟಿದನೆಂದು ತಿಳಿಯಿರಿ. ಆತನು ಅದರ ಅಂದಾಜು ಹಚ್ಚಬಯಸಿದ.

*

ಯಾವ ವೃತ್ತದ ಕೆಳಗೆ ಶಕ್ತಿಗಳು ಆರಂಭವಾಗುವುವೋ ಆ ವೃತ್ತದಲ್ಲಿ ಸ್ವಲ್ಪ ಇಣಿಕಿ ನೋಡಲು ಪ್ರಯತ್ನಿಸಿದ್ದಾದರೆ ವೃತ್ತದ ಪರಿಧಿಯು ಆತನನ್ನು ಹೊರಕ್ಕೆಸೆದುಬಿಡುವುದು. ಪೆಟ್ಟುತಿಂದ ನಂತರವೂ ಆತನು ಹೇಗೋ ಅದರ ಅಂದಾಜನ್ನು ಹಚ್ಚಿದರೂ ಅದನ್ನು ವ್ಯಕ್ತಗೊಳಿಸಲು ಆತನಿಗೆ ಶಬ್ದಗಳು ಸಿಗುವುದಿಲ್ಲ. ಇದಕ್ಕಿಂತ ಮುಂದೆ ಮನುಷ್ಯನ ನಿಲುಕು ಅಸಂಭವವಿದೆ. ಇಲ್ಲಿಯವರೆಗಂತೂ ಇದರಾಚೆಗೆ ಯಾರೂ ಮುಂದುವರಿದಿಲ್ಲ. ಭವಿಷ್ಯದ ಮಾತು ಬಲ್ಲವನೇ ಬಲ್ಲ. ಇಲ್ಲಿಂದ ಮುಂದೆ ಪ್ರಾರಂಭವಾಗುವ ವೃತ್ತಗಳು ಸಮಸ್ತ ಶಕ್ತಿಗಳ ಸಾರವಾಗಿವೆ. ಇದು ಬಹಳೇ ಉನ್ನತಮಟ್ಟದ ವಸ್ತು. ಈ ವೃತ್ತಗಳನ್ನು ದಾಟುವುದು ಪ್ರಾಯಃ ಅಸಂಭವ. ಆದರೂ ಉಪಾಯವನ್ನೂ ಹೇಳಿಬಿಡುವೆನು. ಅದು ಅಂಥ ದೊಡ್ಡದೇನೂ ಅಲ್ಲ ; ತೀರ ಸಾಧಾರಣವಾದುದು. ನಮಗೆ ಮೇಲಕ್ಕೆ ಜಿಗಿಯಬೇಕೆಂಬ ವಿಚಾರ ಬಂದಾಗ ಆ ವಿಚಾರದ ಸಂಬಂಧವು ವೃತ್ತದೊಂದಿಗೆ ತಾನಾಗಿಯೆ ಉಂಟಾಗುತ್ತದೆ. ಈಗ ಯಾರಾದರೂ ಸಾಹಸ ಮಾಡಿ ಈ ವೃತ್ತದಲ್ಲಿ ತಮ್ಮ ವಿಚಾರವನ್ನು ಲಯಗೊಳಿಸಿದ್ದಾದರೆ ಇದರ ವಿಷಯ ಅಲ್ಪ–ಸ್ವಲ್ಪ ಹೊಳೆಯುವುದು ; ಅದೂ ಕೆಲ ಕ್ಷಣ ಮಾತ್ರ. ಆದರೆ ಅವರು ತಮ್ಮ ಹೃದಯವನ್ನು ನೋಡಿಕೊಳ್ಳುತ್ತಿರಬೇಕು. ಅನಂತರ ಅವರು ಅಲ್ಲಿಂದ ಸರಿಯಬೇಕಾಗುವುದು. ಹೃದಯದ ಮೇಲೆ ದೃಷ್ಟಿಯಿಡು ವುದರ ಅಗತ್ಯವೇನೆಂದರೆ ಅದು ಒಡೆದುಹೋಗುವ ಸಂಭವವಿರುವುದು. ತಲೆಯ ನದಗಳೂ ಹರಿದುಹೋಗಬಹುದು. ಉಪಾಯವನ್ನಂತೂ ಹೇಳಿದ್ದೇನೆ. ಜನರು ಸಾಹಸ ಮಾಡಲಿ.

ಅಧ್ಯಾತ್ಮಿಕತೆಯಲ್ಲಿ ವಿಶಿಷ್ಟಸಮೀಹೆ (*Special Will*) ಎಂಬುದೊಂದಿರುತ್ತದೆ. ಜನರು ಅದನ್ನು ತಿಳಿದಿರುವ ಸಂಭವ ಕಡಮೆ. ಸಮೀಹೆ ಅತ್ಯಂತ ಉನ್ನತಮಟ್ಟದಲ್ಲಿ ನಿಂತಾಗ ಅದರ ಶಕ್ತಿ ಅಮೋಘವಾಗಿ ಬಿಡುತ್ತದೆ. ಆದರೆ, ಯಾವ ಗ್ರಂಥಿಯ ವರೆಗೆ ಈ ಸಮೀಹೆ ತಲುಪುವುದೋ

ಆ ಸ್ಥಿತಿಯವರೆಗೆ ಮಾತ್ರ ಅದು ವಿಕಾಸಹೊಂದುವುದೆಂಬುದನ್ನು ಮರೆಯ ಬಾರದು. ಒಂದು ವೇಳೆ ಕೇಂದ್ರಮಂಡಲದ ಏಳು ವೃತ್ತಗಳನ್ನು ದಾಟಿ ಅದರ ನಿಲುಗಡೆಯಾದರೆ ಅದು ಅತ್ಯಂತ ಪ್ರಭಾವಶಾಲಿಯಾಗುವುದು. ಯಾವುದನ್ನೇ ಕುರಿತು ಧ್ಯಾನಿಸಲಿ, ಅದರ ಪರಿಣಾಮ ಆಗಿಯೇ ತೀರುವುದು. ಈ ಇಚ್ಛಾಶಕ್ತಿಯಿಂದ ನಕ್ಷತ್ರಗಳ ಗತಿಯನ್ನು ನಿಲ್ಲಿಸಬಹುದು. ಹೀಗೆ ಇಚ್ಛಾಶಕ್ತಿ ಅಮೋಘವಾಗುವುದೇ ಬ್ರಹ್ಮಗತಿ. ಧಾರ್ಮಿಕ ಗ್ರಂಥಗಳಲ್ಲಿ ಬ್ರಹ್ಮಗತಿಯ ವ್ಯಾಖ್ಯೆಯನ್ನು ಬಹಳವಾಗಿ ಮಾಡಲಾಗಿದೆ. ಮಹಾತ್ಮರು ತಮ್ಮನ್ನು ಅದರೊಂದಿಗೆ ಹೋಲಿಸಿಕೊಳ್ಳಲೆಂದು ನಾನು ಕೆಲವೇ ಶಬ್ದ ಗಳಲ್ಲಿ ಅದನ್ನು ವಿವರಿಸಿದ್ದೇನೆ. ಆದರೆ, ಬಂಧು, ಇಂಥ ವಿಭೂತಿಪುರುಷನು ಮೇಲಿಂದಮೇಲೆ ಹುಟ್ಟುವುದಿಲ್ಲ. ಅಲ್ಲದೆ, ಆತನು ತನ್ನ ಇಚ್ಛಾಶಕ್ತಿ ಯನ್ನು ಕೇವಲ ಅಧ್ಯಾತ್ಮಿಕ ಕ್ಷೇತ್ರದಲ್ಲಷ್ಟೇ ಪ್ರಯೋಗಿಸುವನು. ಇಲ್ಲವೆ ಅದಕ್ಕೆ ಸಂಬಂಧಪಟ್ಟ ಇತರ ಕಾರ್ಯಗಳಲ್ಲಿ ತೊಡಗಿಸುವನು. ಆತನ ದೃಷ್ಟಿ ಬೇರೆ ಕಡೆಗೆ ಹರಿಯುವುದೇ ಇಲ್ಲ.

ಈ ಸಮೀಹೆಯ ಸ್ವರೂಪವೇನು ? ಅದಕ್ಕೆ ವ್ಯಾಘಾತ ವುಂಟಾಗುವುದಿಲ್ಲ. ಏನಾಗಬೇಕೋ ಅದು ಆಗಿಯೇತೀರುವುದು. ಅದರ ವಿರುದ್ಧ ವಿಚಾರವು ಮನಸ್ಸಿನಲ್ಲಿ ಸುಳಿಯಲಾರದಷ್ಟು ಆತ್ಮವಿಶ್ವಾಸವು ಹೆಚ್ಚುವುದು. ಅನೇಕ ಸಾಹಸಿಗರಲ್ಲಿ ಅಭ್ಯಾಸ ಪ್ರಾರಂಭಿಸುತ್ತಲೇ ಇದು ಬೆಳೆಯತೊಡಗುವುದು. ಆದರೆ ಅದು ತನ್ನ ಪರಿಮಿತಿಯಲ್ಲಿಯೇ ಕಾರ್ಯ ಮಾಡುವುದು. ಉನ್ನತ ಕ್ಷೇತ್ರಗಳಲ್ಲಿ ಫಲಕಾರಿಯಾಗಲಾರದು. ಕನಿಷ್ಠ ಪಕ್ಷ, ಜನರು ಪ್ರಯತ್ನವನ್ನಾದರೂ ಮಾಡಲೆಂಬ ಉದ್ದೇಶದಿಂದ ಈ ರಹಸ್ಯ ವನ್ನು ಬರೆದಿದ್ದೇನೆ. ಲೌಕಿಕ ಕಾರ್ಯವೇ ಆಗಲಿ, ಪಾರಲೌಕಿಕವೇ ಆಗಲಿ, ಅದನ್ನು ಮಾಡುವಾಗ ಅದು ಆಗಲಿಕ್ಕಿಲ್ಲವೆಂಬ ವಿಚಾರಕ್ಕೆ ಆಸ್ಪದ ವನ್ನೇ ಕೊಡಬಾರದು. ಈ ಮಾತು ಅಧ್ಯಾತ್ಮಿಕತೆಯೊಂದಿಗೇ ಸಂಬಂಧ ಪಟ್ಟಿದ್ದರೂ ಈ ವಿಜ್ಞಾನವು ಭೌತಿಕ ಲಾಭಗಳಿಗಾಗಿ ಉಪಯೋಗವಾಗ

ಬಾರದೆಂದೇನಿಲ್ಲ. ಅಧ್ಯಾತ್ಮಿಕ ವ್ಯಕ್ತಿಗೆ ಇದೆಲ್ಲ ತೀರ ಸಾಮಾನ್ಯವಾಗಿದ್ದು ಆತನು ಬೇಕಾದಾಗ ಇದನ್ನು ಪ್ರಯೋಗಿಸಬಲ್ಲನು. ಜ್ಞಾನವನ್ನು ಕುರಿತು ಬರೆಯುತ್ತ ನಾನು ಪದಾರ್ಥವಿಜ್ಞಾನದ ಮೇಲೂ ಸ್ವಲ್ಪ ಬೆಳಕನ್ನು ಬೀರಿದ್ದೇನೆ. ಆದರೆ ಅದನ್ನು ಕುರಿತು ಧ್ಯಾನಪೂರ್ವಕ ವಿಚಾರಮಾಡಿದಾಗಲೇ ಅದು ತಿಳಿದುಬರುವುದು,

ಪ್ರಕೃತಿಯಲ್ಲಿ ನಿರ್ಮಾಣ ಹಾಗು ವಿನಾಶ– ಇವೆರಡೂ ಶಕ್ತಿಗಳಿವೆ. ಎಲ್ಲಿ ನಿರ್ಮಾಣದ ಸ್ಥಿತಿಯಿದೆಯೋ ಅದರ ಮಗ್ಗುಲಲ್ಲಿಯೇ ವಿನಾಶದ ರೂಪವೂ ದೊರೆಯುವುದು. ನಾನು ಮೊದಲನೆಯ ಗ್ರಂಥಿಯ ಬಗ್ಗೆ ಮೊದಲೇ ಬರೆದಂತೆ ಇದರ ನಟ್ಟನಡುವೆ ಒಂದು ಬಿಂದು ಅಥವಾ ಕಾಳಿನಂಥದಿದೆ. ನಾವು ಅಧ್ಯಾತ್ಮಿಕತೆಯಲ್ಲಿ ಇದನ್ನೇ ತೆಗೆದುಕೊಳ್ಳುವೆವು. ಏಕೆಂದರೆ, ಈ ಕಾಳಿನಿಂದ ಜೇಡದ ಬಲೆಯಂತೆ ಶಾಖೆಗಳು ಹೊರಡುವುವು. ನಾವು ಇದೇ ಕಾಳಿನಲ್ಲಿ ನಮ್ಮನ್ನು ಲಯಗೊಳಿಸಿ ಇಲ್ಲಿಂದಲೇ ಮೇಲಕ್ಕೆದ್ದು ಸಾರೂಪ್ಯತೆಯ ದಶೆಯನ್ನು ಮುಟ್ಟುವೆವು. ಯಾವ ಮೂಲದಶೆಯಲ್ಲಿ ಅಥವಾ ಯಾವ ಸ್ಥಿತಿಯಲ್ಲಿಯೇ ಆಗಿರಲಿ ಭೂಮಾ ಇದೆಯೋ ಅದರ ಸುತ್ತಲೂ ಒಂದು ವೃತ್ತವಿದೆ. ತಿಳಿವಳಿಕೆಗಾಗಿ ಅದನ್ನು ಶಕ್ತಿಯ ಅಥವಾ ಪ್ರಕಾಶದ ಕ್ಷೇತ್ರವೆನ್ನಬಹುದು. ಅದು ಯಾರನ್ನೂ ಒಳಗೆ ನಿಲ್ಲಗೊಡುವುದಿಲ್ಲ. ಇಂಥದೇ ಸ್ಥಿತಿ ಈ ಗ್ರಂಥಿ ಅಥವಾ ಕಾಳಿನದಿದೆ. ಇದರಲ್ಲಿಯೂ ಒಂದು ಪ್ರಕಾರದ ವೃತ್ತವಿದೆ. ಆದರೆ ಒಳಗೆ ಹೋಗಗೊಡದಷ್ಟು ಶಕ್ತಿ ಇದರಲ್ಲಿಲ್ಲ. ಈ ವೃತ್ತವು ವಿನಾಶಕಾರಿಯಾಗಿದ್ದು ತನ್ನ ಕ್ಷೇತ್ರದಲ್ಲಿ ವಿನಾಶದ ಸ್ಥಿತಿಯನ್ನುಂಟುಮಾಡಬಲ್ಲದು. ಯಾವುದೇ ಲೌಕಿಕ ಅಥವಾ ಪದಾರ್ಥಕ್ಕೆ ಸಂಬಂಧಪಟ್ಟ ವಸ್ತುವನ್ನು ನಿರ್ಮಿಸುವುದಕ್ಕಾಗಲಿ ಕೆಡಿಸುವುದಕ್ಕಾಗಲಿ ಇದನ್ನು ಉಪಯೋಗಿಸಬಹುದು. ಹನೂಮಂತನು ಈ ಶಕ್ತಿಯ ಪ್ರಯೋಗವನ್ನು ಬಹಳ ಮಾಡಿದ್ದನು. ನಾನು 'ರಾಜಯೋಗದ ಪ್ರಭಾವ'ದಲ್ಲಿ ಬರೆದಂತೆ, ಇದೇ ಶಕ್ತಿಯೆ ಹಿಂದೀಮಹಾಸಾಗರದ ವಾಯುವನ್ನು

ಲಂಕಾದಹನಕ್ಕಾಗಿ ಎಳೆದುಕೊಂಡಿದ್ದಿತು. ಅಪೇಕ್ಷಿತ ಪ್ರಭಾವವನ್ನುಂಟು ಮಾಡಲು ವಿನಾಶಕರ ವಾಯುವನ್ನು ಸೆಳೆದುಕೊಳ್ಳುವ ವಿಧಾನ ಹೇಗೆಂದರೆ, ತನ್ನ ಇಚ್ಛಾಶಕ್ತಿಯಿಂದ ಅದನ್ನು ಒಂದು ವಿಶಿಷ್ಟ ಸ್ಥಾನದಮೇಲೆ ಕೇಂದ್ರೀಕರಿಸಲಾಗುತ್ತದೆ. ಅಥವಾ ಆ ವೃತ್ತದ ಶಕ್ತಿಯನ್ನು ಯಾವುದಾದರೊಂದು ಸ್ಥಾನದ ಮೇಲೆ ಎಸೆದುಬಿಡುವುದಾದರೂ ಆಗಬಹುದು. ಅದರ ಪರಿಣಾಮವಾಗಿ ಆ ಸ್ಥಾನವು ಸುಟ್ಟು ಕಾಡಿಗೆಯಾಗುವುದು. ಇದನ್ನೇ ಒಳ್ಳೆಯ ಸ್ಥಾನದಲ್ಲಿ ಪ್ರಯೋಗಿಸಿದ್ದಾದರೆ, ಹಜರತ್ ಮೂಸಾ ಅವರು ತೂರ್ ಪರ್ವತದ ಮೇಲೆ ಕಂಡಿದ್ದರೆಂದು ಹೇಳಲಾದ ಜ್ಯೋತಿಯಂಥ ಜ್ಯೋತಿ ಉತ್ಪನ್ನವಾಗುವುದು. ಈ ಪ್ರಕಾರ ಇದರಿಂದ ಒಳ್ಳೆಯ ಹಾಗು ಕೆಟ್ಟ ಕೆಲಸಗಳೆರಡನ್ನೂ ತೆಗೆದುಕೊಳ್ಳಬಹುದು. ಆದರೆ ಯೋಗಿಯ ದೃಷ್ಟಿ ಯಾವಾಗಲೂ ಒಳಿತಿನ ಮೇಲಿರುವುದರಿಂದ ಕೇವಲ ವಿಶೇಷ ಪರಿಸ್ಥಿತಿಗಳ ಹೊರತಾಗಿ ಇದರ ಪ್ರಯೋಗವನ್ನು ಮಾಡಲಾಗುವುದಿಲ್ಲ. ಇದೇ ರೀತಿ ಮುಂದಿನ ಗ್ರಂಥಿಗಳ ಸ್ಥಿತಿ ಎಂದು ತಿಳಿಯಬೇಕು.

ಇನ್ನೂ ಒಂದು ರಹಸ್ಯವನ್ನು ನಾನು ಹೇಳಿಬಿಡುವೆನು. ಈಶ್ವರನ ಇಚ್ಛೆಯಿಲ್ಲದೆ ಹುಲ್ಲುಕಡ್ಡಿಯೂ ಅಲುಗಾಡದೆಂದು ನಾವು ಭಕ್ತಿ ಭಾವದಲ್ಲಿ ಹೇಳುತ್ತ ಬಂದಿದ್ದೇವೆ. ಇದು ನಿಜವೂ ಇದೆ. ಆದರೆ ಭಕ್ತನ ಇಚ್ಛೆಯಿಲ್ಲದೆ ಭಗವಂತನೂ ಅಲುಗಾಡಲಾರನೆಂದು ನಾನು ಹೇಳಿದರೆ ಮಹಾತ್ಮರು ನನ್ನ ಬಗ್ಗೆ ಏನು ತಿಳಿದುಕೊಳ್ಳುವರೋ ? ಆದರೆ ವಾಸ್ತವಿಕತೆ ಹೀಗೆಯೇ ಇದೆ. ಸತ್ಯವನ್ನು ಹೇಳಲೇಬೇಕು. ಅದು ಎಲ್ಲರಿಗೂ ತಿಳಿಯಲೇ ಬೇಕಲ್ಲವೆ ? ನನ್ನ ವಿಷಯದಲ್ಲಿ ಹೇಳುವುದಾದರೆ, ನಾನು ಅಭ್ಯಾಸಮಾಡಲು ಪ್ರಾರಂಭಿಸಿದಂದಿನಿಂದ ನನ್ನ ಗುರುಗಳಾದ ಫತೆಹ್‌ಗಡದ ಸಮರ್ಥಗುರು ಮಹಾತ್ಮಾ ಶ್ರೀರಾಮಚಂದ್ರಜಿ ಮಹಾರಾಜರನ್ನು ನನ್ನ ಸರ್ವಸ್ವವೆಂದು ತಿಳಿದೆ. ಭಗವಂತನ ದಯೆಯಿಂದ ಇದೇ ಭಾವನೆ ಎಂದೆಂದಿಗೂ ಉಳಿಯಲಿ. ನಾನು ಅನ್ಯಸಂಬಂಧವನ್ನಿಟ್ಟು–

ಕೊಳ್ಳಲಿಲ್ಲ. ಏಕೆಂದರೆ, ಬಂಧನದಿಂದ ಬಿಡುಗಡೆ ಮಾಡುವವರು ಇವರೇ ತಾನೆ. ಈ ರಹಸ್ಯದ ಮೇಲೆ ನಾನು 'ರಾಜಯೋಗದ ಪ್ರಭಾವ'ದಲ್ಲಿ ತಕ್ಕಮಟ್ಟಿಗೆ ಬೆಳಕನ್ನು ಬೀರಿದ್ದೇನೆ. ಅದಿರಲಿ; ಈಗ ಪ್ರಕೃತ ವಿಷಯಕ್ಕೆ ಬರೋಣ. ಈಶ್ವರನಿಗೆ ಮನಸ್ಸು ಇರುವುದಿಲ್ಲ. ಇಲ್ಲಿ ಈಶ್ವರನೆಂದರೆ ಕೇಂದ್ರ ಅಥವಾ ಭೂಮಾ ಎಂದರ್ಥ. ಒಂದು ವೇಳೆ ಆತನಿಗೆ ಮನಸ್ಸಿದ್ದರೆ ಕರ್ಮಸಿದ್ಧಾಂತವು ಆತನಿಗೂ ಅನ್ವಯಿಸಿ ನಮ್ಮೆಲ್ಲರಂತೆ ಆತನೂ ಸಂಸಾರ ದಲ್ಲಿರಬೇಕಾಗುತ್ತಿತ್ತು. ಮನಸ್ಸು 'ಆತನು' ನಮಗೆ ಕೊಟ್ಟ ಉಪಕರಣ ವೆಂಬುದು ನಿಜ. ಇದರ ಒಂದು ಭಾಗ ನಮ್ಮ ಹತ್ತಿರ ಇದೆ. ಇನ್ನೊಂದು ಭಾಗ 'ಆತನ' ಹತ್ತಿರವಿದೆ. ನಮ್ಮ ಒಲವು ಎರಡೂ ಕಡೆಗಿದೆ. ಒಂದು ಭಾಗದಿಂದ ನಾವು ಲೌಕಿಕ ಕಾರ್ಯಗಳನ್ನೂ ಇನ್ನೊಂದರಿಂದ ಪಾರಲೌಕಿಕ ಕಾರ್ಯಗಳನ್ನೂ ಮಾಡುವೆವು. ನಾವು ನಮ್ಮ ಮನಸ್ಸನ್ನು ಆತನ ಹತ್ತಿರ-ವಿದ್ದ ತುದಿಯೊಂದಿಗೆ ಜೋಡಿಸಿದಾಗ ಒಂದೇ ಧಾರೆ ಹರಿಯತೊಡಗುವುದು. ಮತ್ತು ಇದರದೇ ಅಭ್ಯಾಸದ ಆವಶ್ಯಕತೆಯಿದೆ. ಏಕೆಂದರೆ, ಆತನ ಹತ್ತಿರವಿದ್ದ ಭಾಗದಲ್ಲಿ ಯಾವ ಮಿಡಿತವಿರುವುದೋ ಅದೇ ನಮ್ಮ ಹತ್ತಿರವಿದ್ದ ಭಾಗ ಅಥವಾ ಮನಸ್ಸಿನಲ್ಲಿ ಉಂಟಾಗಬೇಕು. ಈಗ, ಯಾವನಾದರೊಬ್ಬನ ಮನಸ್ಸು ಸುದೈವದಿಂದ ಕೇಂದ್ರ ಮಂಡಲದೊಂದಿಗೆ ಸಂಬಂಧಪಡುವಷ್ಟು ಮಟ್ಟಿಗೆ ರೂಪಗೊಂಡಿತೆಂದು ತಿಳಿಯಿರಿ. ಏಳು ವೃತ್ತಗಳನ್ನು ದಾಟಿ ಅಪಾರಸಾಗರದಲ್ಲಿ ಈಜುವ ಅವಕಾಶ ಆತನಿಗೆ ದೊರೆಯಿತು. ಅನಂತರ ಏನು ? ಅವನು ಭೂಮಾಕ್ಕೆ ತೀರ ಸಮೀಪವಾಗುವನು. ಮುಂದು-ವರಿದ ನಂತರ ಯಾವುದನ್ನು ಭೂಮಾದಲ್ಲಿ ಒಂದು ಪ್ರಕಾರದ ಲಯಾವಸ್ಥೆ ಯೆಂದು ಹೇಳಬಹುದೋ ಆ ಸಂಬಂಧ ಉಂಟಾಯಿತೆಂದರೆ ಎಲ್ಲವೂ ಸಮಾಪ್ತವಾದಂತೆಯೆ. ಈ ಕ್ಷೇತ್ರದಲ್ಲಿ ನಮ್ಮ ಪ್ರಯಾಸ ಮುಗಿಯಿತು. ಇನ್ನು ಉಳಿದ ಒಂದೆರಡು ಸಂಗತಿಗಳನ್ನು ವಿವರಿಸಬೇಕೆಂದರೆ ಅದು ಕಲ್ಪನೆಗೂ ನಿಲುಕದ ವಿಷಯ. ಈ ಲಯ ಅವಸ್ಥೆಯ ನಂತರ ಬರುವ

ಜೀವನವೇ ನಿಜವಾದ ಜೀವನ. ಆ ದಿಶೆಯಲ್ಲಿ ಅಸ್ತಿತ್ವವನ್ನು ಅಳಿಸಿದ ನಂತರವೇ ಅದು ಪ್ರಾಪ್ತವಾಗುವುದು.

ಈಗ ಅದನ್ನೂ ನೀವು ಲಯಗೊಳಿಸಿದರೆ ಅದೊಂದು ನಿರ್ಮಲ ಜೀವನವೆಂದು ಹೇಳಬಹುದು. ಈ ನಿರ್ಮಲ ಜೀವನವನ್ನೂ ಲಯಗೊಳಿಸಿದ ಮೇಲೆ ಏನು ಇರುವುದೋ ಅದೇ ನಿಜ ವಸ್ತು. ಇದನ್ನೂ ಲಯಗೊಳಿಸಿದ ನಂತರ ಬರುವ ಸ್ಥಿತಿಯನ್ನು ಚಿತ್ರಿಸಲು ಶಬ್ದಗಳು ದೊರೆಯುವುದಿಲ್ಲ. ನಿರ್ಮಲ ಜೀವನದ ಲಯಾವಸ್ಥೆಯ ನಂತರ ಉತ್ಪನ್ನವಾಗುವ ಪದಾರ್ಥದಲ್ಲಿಯೂ ಭೂಮಾದಲ್ಲಿಯೂ ನಾಮ ಮಾತ್ರದ ಅಂತರ ಉಳಿಯುವುದು. ಮುಂದೆ, ಭೂಮಾದ ಅನುಮಾನವು ಪೂರ್ಣವಾಗುವುದೊಂದೇ ಬಾಕಿ. ಇದರ ನಂತರ ಏನೂ ಹೇಳಲು ಬರುವುದಿಲ್ಲ. ವಿಚಾರವು ಇದಕ್ಕಿಂತ ಮುಂದೆ ಹೋಗುವುದಾದರೂ ಕೊನೆ ಎಲ್ಲಿಯೂ ಸಿಗುವುದಿಲ್ಲ. ನಾವು ಅಂತಿಮದಶೆಯಲ್ಲಿ ಬಂದು ಈಶ್ವರೀಯ ಆಜ್ಞೆಗಳನ್ನು ಪಡೆಯುತ್ತಿದ್ದ ಮೇಲೆ ಬುದ್ಧಿ ಕೆಲಸ ಮಾಡುವುದಿಲ್ಲ. ಆಜ್ಞೆಗಳು ಎಲ್ಲಿಂದ ಬಂದುವೆಂಬುದು ತಿಳಿಯುವುದಿಲ್ಲ. ಈ ಅವಸ್ಥೆ ಉಂಟಾದಾಗ, ಭಕ್ತನು ಅಲುಗಾಡಿಸದೆ ಭಗವಂತನು ಕೂಡ ಅಲುಗಾಡಲಾರನೆಂಬ ಮಾತಿನ ಸತ್ಯತೆಯನ್ನು ಮನಗಾಣುವ ಸ್ಥಿತಿ ಬಂದಿತೆಂದೇ ತಿಳಿಯಬೇಕು. ನಾವು ಈ ಅಂತಿಮ ದಶೆಗೆ ಬಂದಮೇಲೆ ವೇದಗಳಲ್ಲಿ ದೊರೆಯುವ ವಿವರಣೆಯಂತೆ ಅದ್ವೈತದ ಕ್ಷೇತ್ರಕ್ಕೆ ಬರುವೆವು. ಇದು ವಾಸ್ತವವಾಗಿಯೂ ಅದ್ವೈತದ ಕ್ಷೇತ್ರವಾಗಿದೆ. ಆದರೂ ನಮಗೆ ಇದರ ಭಾನವುಳಿದುದಾದರೆ ನಿಜಾರ್ಥದಲ್ಲಿ ದ್ವೈತವು ಇನ್ನೂ ಕೊನೆಗೊಂಡಿಲ್ಲ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಇನ್ನೂ ಅಪರಿವರ್ತನಶೀಲ ದಶೆಯುಂಟಾಗಿಲ್ಲ. ನಿಜ ಏನೆಂದರೆ, ಇಲ್ಲಿ ದ್ವೈತ ಹಾಗು ಅದ್ವೈತ ಇವೆರಡರ ಭಾನವೂ ಸಮಾಪ್ತವಾಗಬೇಕು. ಇದೇ ಈ ಕೊನೆಯ ಗ್ರಂಥಿಯ ಚರಮಾವಸ್ಥೆಯಾಗಿದೆ, ಇಲ್ಲಿ ನಿಜಾರ್ಥದಲ್ಲಿ :

ನಾನು ನೀನಾಗಿರುವೆ, ನೀನು ನಾನಾಗಿರುವಿ
ನಾನು ದೇಹವು ನೀನು ಪಂಚಪ್ರಾಣ ;
ನೀನು-ನಾನಿಬ್ಬರೂ ಬೇರೆ ಬೇರೆ ಎಂದು
ಮುಂದೆ ಯಾರೂ ನುಡಿಯರಿಂಥ ವಚನ

ನಾವು ಈ ರೀತಿಯಲ್ಲಿ ರಮಿಸತೊಡಗಿ ಈ ಮಟ್ಟದ ವರೆಗೆ ಸಾಧ್ಯವಾದಷ್ಟು ಲಯಹೊಂದಿದಾಗ ನಮ್ಮಲ್ಲಿ ಯಾವ ವಿಶೇಷತೆ ಉಂಟಾಗುವುದು ? ಯಾವ ಶಕ್ತಿಗಳಿಗೆ ಕೇಂದ್ರವು ಕಾರಣವಾಗಿದೆಯೋ ಆ ಎಲ್ಲ ಶಕ್ತಿಗಳೂ ನಮ್ಮಲ್ಲಿ ಉಂಟಾಗುವುವೆಂದೇ ನಾನು ಹೇಳುವೆ. ಈ ಅವಸ್ಥೆಯನ್ನು ಮುಟ್ಟಿದ ಅಭ್ಯಾಸಿಯು ಆ ಮಹಾಶಕ್ತಿಯು ಮೂಲಕ ವ್ಯಕ್ತವಾಗುವ ಕಾರ್ಯಗಳನ್ನೇ ಮಾಡಬಲ್ಲನು, ಒಂದು ವೇಳೆ ಹೀಗೆ ಮಾಡಲು ಅಸಮರ್ಥನಾದರೆ ಅದ್ವೈತಕ್ಕೆ ಯಾವ ಅರ್ಥವೂ ಇಲ್ಲ.; ಮತ್ತು ಅದರ ವಾಸ್ತವಿಕತೆಯೂ ಉಳಿಯಲಿಲ್ಲ. ಎಲ್ಲ ದೈವೀ ಶಕ್ತಿಗಳೂ ಆತನ ಆಜ್ಞೆಗೆ ಅಧೀನವಾಗಿರುವುವು. ಪ್ರಕೃತಿಯ ಕಾರ್ಯದಲ್ಲಿ ಬಾಧೆಯುಂಟಾಗಬಾರದೆಂದು ಆತನೇ ಅವೆಲ್ಲವುಗಳಿಗೆ ಶಕ್ತಿಯನ್ನು ಕೊಡುವನು. ಈ ಮಾತನ್ನು 'ರಾಜಯೋಗದ ಪ್ರಭಾವ'ದಲ್ಲಿ ನಾನು ಹೇಳಿಯೆ ಇದ್ದೇನೆ ಹಿಂದಕ್ಕೆ ವಿವಿಧ ಯಜ್ಞಗಳ ಮೂಲಕ ಬೇರೆ ಬೇರೆ ದೇವತೆಗಳಿಗೆ ಶಕ್ತಿಗಳನ್ನು ಕೊಡಲಾಗುತ್ತಿತ್ತೆಂಬುದರ ವಿವರಣೆ ನಮ್ಮ ಪವಿತ್ರ ಗ್ರಂಥಗಳಲ್ಲಿ ಬಹುಶಃ ದೊರೆಯುವುದು. ಅಪೇಕ್ಷಿತ ಉದ್ದೇಶಗಳು ಇದರಿಂದಲೇ ಈಡೇರುತ್ತಿದ್ದುವು. ಆದರೆ ಈ ವಿಧಿಯು ದ್ವೈತಭಾವವುಳ್ಳವರಿಗಾಗಿ ಮಾತ್ರ ವಿಹಿತವಾಗಿದ್ದಿತು. ಈ ಚಕ್ರದಲ್ಲಿ ಸಿಲುಕುವವರಾದರೂ ಅವರೇ. ಆದರೆ ಯಾವ ಅಭ್ಯಾಸಿಯು ಅದ್ವೈತದಲ್ಲಿ ಬಂದು ಅದರ ನೆನಪನ್ನೂ ಮರೆತುಬಿಡುವನೋ ಆತನಲ್ಲಿ ಕೇವಲ ಮೂಲದ ಹೊರತು ಬೇರೇನೂ ಇರಲಾರದು. ಆತನು ಪ್ರಪಂಚದಲ್ಲಿ ಬೇಕಾದ ಪರಿವರ್ತನವನ್ನುಂಟುಮಾಡಬಲ್ಲನು. ಸಂಸಾರದ ಆಯುಸ್ಸನ್ನು ಕಡಮೆ ಮಾಡುವ ಶಕ್ತಿ ಆತನಲ್ಲಿ ಬರುವುದು. ಆತನ ಇಚ್ಛಾಶಕ್ತಿಯು

ಪ್ರತಿಯೊಂದು ವಿಷಯದಲ್ಲಿಯೂ ಕೆಲಸ ಮಾಡುವುದು. ಇದರಲ್ಲಿ ಸಮಯವು ಅವಶ್ಯ ಹಿಡಿಯುವುದು. ಸೃಷ್ಟಿರಚನೆಗಾದರೂ ಸಾಕಷ್ಟು ಕಾಲ ಹಿಡಿಯಿತು. ಸರ್ವೋತ್ಕೃಷ್ಟ ಪ್ರಜ್ಞಾನದ *(Highest type of Superconscious state)* ಸ್ಥಿತಿಯಲ್ಲಿ ಧ್ಯಾನಪೂರ್ವಕ ನೋಡುವುದ-ರಿಂದ ಈ ಪ್ರಪಂಚದ ರಚನೆಗೆ ಒಂದುಲಕ್ಷ ಇಪ್ಪತ್ತು ಸಾವಿರ ವರ್ಷಗಳು ಹಿಡಿದುವೆಂದು ಗೊತ್ತಾಗಿದೆ. ಭೂಮಾದ ಕೆಳಗೆ ಶಕ್ತಿಯು ಕೇಂದ್ರದಲ್ಲಿ ಒಂದೇ ಒಂದು ಆಘಾತವುಂಟಾಗಿದ್ದರೂ ಅದರ ಪ್ರಭಾವವು ಪ್ರಕಟವಾಗಲು ಹಾಗು ರಚನಾ ಸಾಮಗ್ರಿಯು ಒಟ್ಟುಗೂಡಲು ಇಷ್ಟು ಸಮಯ ಬೇಕಾಯಿತು. ವಾಚಕರ ಮನೋರಂಜನಕ್ಕಾಗಿ ಇನ್ನೊಂದು ಮಾತನ್ನು ಹೇಳಿಬಿಡುವೆನು. ಸೃಷ್ಟಿಯು ಎಲ್ಲ ಕ್ರಿಯೆಗಳೂ ಗಡಿಯಾರದ ಸಮದಿಶೆ-ಯಲ್ಲಿದ್ದುವು. ಈಗ ಒಂದು ವೇಳೆ ಅವುಗಳಿಗೆ ವಿಷಮದಿಶೆಯಲ್ಲಿ ಪ್ರೇರಣೆ ಮಾಡಿದರೆ ಪ್ರಪಂಚವು ನಷ್ಟವಾಗತೊಡಗುವುದು. ಸೂರ್ಯ-ಚಂದ್ರರ ಪ್ರಕಾಶವು ಕಡಮೆಯಾಗುತ್ತ ನಡೆಯುವುದು. ಮತ್ತು ಸಂಸಾರದ ಆಯುಸ್ಸು ಕ್ಷೀಣಿಸುವುದು.

ಕೇಂದ್ರದ ನಾಲ್ಕೂ ಕಡೆಗೆ ಒಂದು ವೃತ್ತವಿದೆ. ಇದೇ ಪರಿಮಿತಿ. ನಾನು ಹೇಳಿದಂತೆ, ಇದನ್ನು ದಾಟಿಹೋಗುವುದು ಅಸಂಭವ. ಮಹಾ ಶಕ್ತಿಶಾಲಿ ವ್ಯಕ್ತಿಯಾಗಿದ್ದರೆ ಮಾತ್ರ ಕೆಲವು ಕ್ಷಣಗಳ ವರೆಗೆ ಅದರಲ್ಲಿ ಇಣಿಕಿ ನೋಡಲು ಸಾಧ್ಯವಾದೀತು. ಈ ವೃತ್ತದ ನಾಲ್ಕೂ ಕಡೆಗೂ ತನ್ನ ಇಚ್ಛಾಶಕ್ತಿಯಿಂದ ಈ ವಿಶ್ವವನ್ನು ಕೊನೆಗೊಳಿಸಬೇಕೆಂಬ ಒಂದು ಸಜೀವ ವಿಚಾರವನ್ನಿಟ್ಟುಕೊಂಡು ಅದರ ಧಾರೆಗಳನ್ನು ಕೇಂದ್ರಮಂಡಲದಲ್ಲಿ ಸಂಕಲಿತಗೊಳಿಸಿದ್ದಾದರೆ ಅದು ಕೇಂದ್ರದ ಶಕ್ತಿಯಿಂದೊಡಗೂಡಿ ಸ್ಪಂದನವನ್ನುಂಟುಮಾಡುವುದು. ಅನಂತರ ಅದು ಬೆಳಯತೊಡಗಿ ಅದೇ ಶಕ್ತಿಯು ಕೆಳಗಿಳಿಯಲಾರಂಭಿಸುವುದು. ಈಗ, ಇದರಲ್ಲಿ ಎಷ್ಟು ವೇಗವನ್ನು ಹುಟ್ಟಿಸಲಾಗುವುದೋ ಅಷ್ಟೇ ತ್ವರಿತ ಗತಿಯಿಂದ ಈ ಪದಾರ್ಥವು

*

ಹೆಚ್ಚುವುದು. ಇನ್ನೊಂದು ಉಪಾಯವೆಂದರೆ, ಪ್ರವಾಹಿತ ಶಕ್ತಿಯನ್ನು ತನ್ನ ಇಚ್ಛಾಶಕ್ತಿಯಿಂದ ಕೇಂದ್ರದಲ್ಲಿ ಎಳೆಯಲು ಆರಂಭಿಸುವುದು. ಹೀಗೆ ಮಾಡುವುದರಿಂದ ಗತಿಗಳು ಗಡಿಯಾರದ ವಿಷಮ ದಿಶೆಯಲ್ಲಿ ತಾವಾಗಿಯೇ ಚಲಿಸತೊಡಗುವುವು. ಅದರ ಮೇಲೆ ಇಚ್ಛಾಶಕ್ತಿಯನ್ನೂ ಉಪಯೋಗಿಸಿದರೆ ಪ್ರಭಾವವು ಶೀಘ್ರವೇ ಉಂಟಾಗುವುದು. ಮತ್ತು ಕೇಂದ್ರದ ವೃತ್ತದ ಮೇಲೆ ಇಚ್ಛಾಶಕ್ತಿಯ ವೇಗವನ್ನು ಬಿಟ್ಟು ಬಿಟ್ಟರೆ ಉದ್ದೇಶವು ಸಾವಕಾಶವಾಗಿ ಸಫಲವಾಗುವುದು. ಸ್ಥಿತಿಯು ಹೀಗಿರುವಾಗ, ದಿವ್ಯ ಅಥವಾ ಆಂತರಿಕ ದೃಷ್ಟಿಯ ವಿಸ್ತಾರದ ಅನುಮಾನವನ್ನು ಯಾರೂ ಮಾಡಲಾರರು. ನಾನು ಎಲ್ಲವನ್ನೂ ಹೇಳಿದ್ದರೂ ಅದರ ವ್ಯಾಖ್ಯೆಯನ್ನು ಮಾತ್ರ ಬಹಳ ಜಾಗ್ರತೆ ವಹಿಸಿ ಮಾಡಿದ್ದೇನೆ. ಯಾರಾದರೂ ಈ ಮಟ್ಟದ ವರೆಗೆ ಉನ್ನತಿ ಹೊಂದಿ ಪ್ರಕೃತಿಯಲ್ಲಿ ಯಾವುದಾದರೊಂದು ವಿಶೇಷ ಪರಿವರ್ತನವನ್ನು ಮಾಡಬಯಸಿದರೆ ಅದರ ವಿಧಾನ ತೀರ ಚಿಕ್ಕದಾಗಿದೆ. ಇದರಲ್ಲಿ ಆತನು ಅಸಫಲನಾಗುವುದೇ ಅಸಂಭವ. ಆತನಿಗೆ ಪ್ರತಿಯೊಂದು ಮಾತು ಸಾಧ್ಯವಿದೆ. ಆ ಉಪಾಯವು ಹೀಗಿದೆ : ತನ್ನ ಆ ಮೂಲದಶೆಯಲ್ಲಿ ಶಬ್ದಗಳೇ ಲುಪ್ತವಾಗಿರುವಂಥ ಒಂದು ವಿಚಾರವನ್ನು ನಿಲ್ಲಿಸಬೇಕು. ಕೇವಲ ಭಾವಮಾತ್ರವೆ ಆ ಅಭಿಪ್ರಾಯವನ್ನು ವ್ಯಕ್ತಗೊಳಿಸುವಂತಿರಬೇಕು. ಆಗ ಅದೇ ವಸ್ತು ಈ ಕೆಲಸವನ್ನು ಮಾಡತೊಡಗುವುದು. ಅದೇ ಈಶ್ವರೀಯ ಆಜ್ಞೆಯಾಗುವುದು. ಆದರೆ, ಮೇಲೆ ವರ್ಣಿಸಲಾದಂತೆ, ಸರಿಯಾದ ಅಂದಾಜು ಬರುವ ಹಾಗೆ ಭೂಮಾದೊಂದಿಗೆ ಸಂಬಂಧವುಂಟಾಗಬೇಕು. ಆಗ ಇದರಲ್ಲಿ ಹುಟ್ಟಿದ ವಸ್ತುವಿಗೂ ಅದೇ ರೂಪ ಬರುವುದು. ಉದಾಹರಣಾರ್ಥ ಒಂದು ತಂತಿಯನ್ನು ಮೀಟಿದರೆ ಎಲ್ಲ ತಂತಿಗಳಲ್ಲಿ ಹೇಗೆ ಅದೇ ಝುಂಕಾರ ಅಥವಾ ಸ್ಪಂದನ ಉಂಟಾಗುವುದೋ ಹಾಗೆ. ಭಕ್ತನ ನಿಲುಕು ಈ ಮಟ್ಟದವರೆಗೆ ಬಂದಾಗ ಆತನು ಭಕ್ತನಾಗಿ ಉಳಿಯುವುದಿಲ್ಲ. ಆದರೂ ಆತನ ಸೇವಕತ್ವವು ಅಳಿಯುವುದಿಲ್ಲ. ಯಾವ ಸಂಬಂಧವು ಆತನನ್ನು ಇಲ್ಲಿಯವರೆಗೆ

ಮುಟ್ಟಿಸಿತೋ ಅದನ್ನು ಆತನ ಹೃದಯವು ಬಿಟ್ಟುಕೊಡದಿರುವುದು ಆತನ ಸೌಜನ್ಯವಾಗಿದೆ. ಇದರಂತೆಯೆ, ಆತನು ಪ್ರಪಂಚಕ್ಕೆ ಆವಶ್ಯಕವಾದ ಆಜ್ಞೆಗಳನ್ನೂ ಹೀಗೆಯೆ ಪಡೆಯುವನು. ಆತನಿಗೆ ಸ್ವಂತದ ಸ್ವಾರ್ಥ ಯಾವುದೂ ಇರುವುದಿಲ್ಲ. ಒಂದು ರೀತಿಯಿಂದ ಆತನು ಭೂಮಾದ ಅಂಶವಾಗಿಬಿಡುತ್ತಾನೆ. ಈ ದಶೆಯು ಕಂಡವರಿಗೆಲ್ಲ ಬರುವುದಿಲ್ಲ. ನಿಯತಿಯು ಸಂಸಾರದಲ್ಲಿ ಪರಿವರ್ತನ ಬಯಸಿದಾಗ ಮಾತ್ರ ಪ್ರಾಪ್ತವಾಗುತ್ತದೆ. ಈ ಕೋಟಿಯ ವ್ಯಕ್ತಿಗಳು ಎಂದಿಗೂ ಒಂದೇ ಕಾಲಕ್ಕೆ ಇಬ್ಬರಿರುವುದಿಲ್ಲ. ಇಡೀ ಪ್ರಪಂಚದಲ್ಲಿ ಒಂದು ಕಾಲಕ್ಕೆ ಒಂದೇ ಸತ್ತೆಯು ಹೀಗಿರಬಲ್ಲುದು–ಅದೂ ಪ್ರಕೃತಿಗೆ ಆವಶ್ಯಕವಾದಾಗ ಮಾತ್ರ.

ಜ್ಞಾನದ ಕೊನೆಯ ಮೇರೆಯನ್ನು ಹೇಳಿಬಿಟ್ಟಿದ್ದೇನೆ. ಅದನ್ನು ಶಬ್ದಗಳ ಮೂಲಕ ಅಭಿವ್ಯಕ್ತಗೊಳಿಸಬೇಕಾದರೆ ಜ್ಞಾನವೆಂಬ ಶಬ್ದವು ಅದಕ್ಕೆ ಉಚಿತವಾಗಲಾರದು. ಅಭ್ಯಾಸಿಗಳು ಈ ಮಟ್ಟದವರೆಗೆ ಮುಟ್ಟಲು ಪ್ರಯತ್ನ ಮಾಡಬೇಕು. ಅದಕ್ಕೂ ಮುಂದೆ ಏನಿದೆಯೆಂಬುದರ ತಿಳಿವಳಿಕೆಯಾಗುವ ಸಂಭವವೂ ಇದೆ. ಈ ಸೂಚನೆ ಮುಂಬರುವ ಪೀಳಿಗೆಗಾಗಿ. ವರ್ತಮಾನಕಾಲದ ಜನರೂ ಇದನ್ನು ಕುರಿತು ವಿಚಾರಮಾಡಲಿ.

* * * *

# ಪರಿಶಿಷ್ಟ - ೧

ಕೇವಲ ಪರಬ್ರಹ್ಮವೇ ಇದ್ದು ಸೃಷ್ಟಿ ಇಲ್ಲದಿದ್ದಾಗ ಕಾಲದ ಪ್ರಶ್ನೆಯೆ ಉದ್ಭವಿಸಲಿಲ್ಲ. ಸೃಷ್ಟಿಯು ವಿಚಾರ ಮೂಲದಲ್ಲಿ ಜಾಗೃತವಾದಾಗ ಅದು ಸಂಪೂರ್ಣ ನಿರ್ವಿಷಯವಾಗಿತ್ತು. ಅದು ಹಾಗೆಯೆ ಮುಂದುವರಿಯಿತು. ಕ್ಷೋಭದ ಪರಿಣಾಮವಾಗಿ ಅದು ಕಾರ್ಯೋನ್ಮುಖ ಸಂಸ್ಕಾರವುಳ್ಳ ಶಕ್ತಿಯಾಗಿ ರೂಪಗೊಂಡಿತು. ಕಾರ್ಯಕ್ಕಾದರೂ ಸಹಜವಾಗಿ ಒಂದು ಕ್ಷೇತ್ರದ ಅಥವಾ ಅವಕಾಶದ ಅಗತ್ಯವಿರುವುದು. ಮೂಲ ಸಂಕಲ್ಪ ಹಾಗು ತದನಂತರದ ಅಸ್ತಿತ್ವ–ಕಾರಣ ಹಾಗು ಪರಿಣಾಮ–ಇವುಗಳ ನಡುವೆ ಸ್ವಲ್ಪ ವಿರಾಮವು ಮೊದಲಿನಿಂದಲೂ ಇದ್ದಿತು. ಅದನ್ನು ನಾವು 'ಕಾಲ'ವೆಂದಾಗಲಿ 'ಅವಧಿ' ಎಂದಾಗಲಿ ಹೇಳಬಹುದು. ಅದು ಸಂಕಲ್ಪದ ಕಾರ್ಯಕ್ಕೆ ಕ್ಷೇತ್ರವಾಯಿತು. ಈ ಪ್ರಕಾರ ಕಾಲವು ಶಕ್ತಿಯಲ್ಲಿ ಲೀನವಾಗಿ ಸೃಷ್ಟಿ–ಕಾರ್ಯವನ್ನು ಮುಂದುವರಿಸಲು ಸ್ವಯಂ ಶಕ್ತಿಯಾಗಿ ಪರಿಣಮಿಸಿತು.

ಸಂಕಲ್ಪವು ಗಾಢವಾದಾಗ ಶಕ್ತಿಯುತವಾದ ಏನೋ ಒಂದನ್ನು ಹುಟ್ಟಿಸುವುದೆಂಬುದು ಸಾಮಾನ್ಯ ನಿಯಮ. ಅದನ್ನು ನಾವು 'ವಿರಾಮ' ವೆನ್ನಬಹುದು. ಕೇಂದ್ರದ ವಿಷಯದಲ್ಲಿ ಆಳದ ಪ್ರಶ್ನೆಯೆ ಏಳುವುದಿಲ್ಲ; ಏಕೆಂದರೆ ಅಲ್ಲಿ ಪೂರ್ಣ ಏಕರೂಪತೆಯಿದೆ. ಮನಸ್ಸಿನ ನೇರವಾದ ಕಾರ್ಯವೆನಿಸುವ ಬಲದ ವೇಗದ ಕಲ್ಪನೆಕೂಡ ಅಲ್ಲಿ ಇದ್ದಿಲ್ಲ. ಏಕೆಂದರೆ ಕೇಂದ್ರ ಅಥವಾ ಪರಬ್ರಹ್ಮಕ್ಕೆ ಮನಸ್ಸೆಂಬುದು ಇರಲಿಲ್ಲ.

ಹೀಗೆ, ಸಂಕಲ್ಪ ಮತ್ತು ಕಾರ್ಯಗಳ ನಡುವೆ ಇದ್ದುದೆಲ್ಲ ಶಕ್ತಿಯೆ ಆಗಿದ್ದು ಕಾಲವೆಂದು ಸಂಕೇತಿತವಾಗಿದೆ. ಅದೇ ಶಕ್ತಿಯಲ್ಲಿಯೆ ನಾವು ನಮ್ಮ ನಮ್ಮ ಸಾಮರ್ಥ್ಯಕ್ಕನುಗುಣವಾಗಿ ಪಾಲುಗಾರರಾಗಿದ್ದೇವೆ.

ಈಗ ಈ ಶಕ್ತಿಯನ್ನು ಉಪಯೋಗಿಸಬೇಕಾದರೆ ಕೇಂದ್ರದ ಮಹತ್ತರವಾದ ಕೇವಲ ಶಕ್ತಿಯಲ್ಲಿ ಅದನ್ನು ವಿಲೀನಗೊಳಿಸಬೇಕು. ಈ ಮಹಾಶಕ್ತಿಗೆ ಸಮಾನವಾದುದು ಪ್ರಪಂಚದಲ್ಲಿ ಯಾವುದೂ ಇಲ್ಲ. ಆಧುನಿಕ ವಿಜ್ಞಾನದ 'ಮೆಗಾಟನ್ ಬಾಂಬ್' ಕೂಡ ಇದರ ಮುಂದೆ ಅಲ್ಪ. ಇದರ ಸಂಪೂರ್ಣ ಮಹತ್ತ್ವವನ್ನು ಇಂದಿನ ವಿಜ್ಞಾನವು ಇನ್ನೂ ಅರಿತಿರಲಿಕ್ಕಿಲ್ಲ. ಅರಿತಿದ್ದರೂ ಅದನ್ನು ವಿನಾಶಕಾರಿ ಪ್ರಯೋಜನಕ್ಕಾಗಿ ಬಳಸಿರಬಹುದು.

ಆ ಶಕ್ತಿಯನ್ನು ಭೂಮಿಗೆ ತಂದು ಬಲವಾದ ಸಂಕಲ್ಪದ ಮೂಲಕ ಅದರ ಪ್ರಯೋಜನ ಪಡೆಯಬಹುದು. ಆರೋಹಣದ ಅತ್ಯುನ್ನತ ಘಟ್ಟದಲ್ಲಿ ಯೋಗಿಯು ತಿಳಿದಾಗಲಿ ತಿಳಿಯದೆ ಆಗಲಿ ಅದನ್ನು ಪಡೆದಿರುತ್ತಾನೆ. ನನ್ನ ದೃಷ್ಟಿಯಲ್ಲಿ ಎಲ್ಲ ಶಕ್ತಿಗಳಿಗೂ ನಿಜವಾಗಿ ಮೂಲವೆನಿಸಿದ ಈ ಮಹಾಶಕ್ತಿಯ ಸಂಪೂರ್ಣ ಜ್ಞಾನವಿಲ್ಲದೆ ಭೌತಶಾಸ್ತ್ರವು ಪರಿಪೂರ್ಣವಾಗಲಾರದು.

X X X X

# ಪರಿಶಿಷ್ಟ - ೨

ಅಜ್ಞಾನ ಹಾಗು ಜ್ಞಾನ – ಇವು ಒಂದೇ ವಸ್ತುವಿನ ಎರಡು ತುದಿಗಳು. ಕೆಲವೊಂದು ಘಟ್ಟದವರೆಗೆ ಅದನ್ನು ಅಜ್ಞಾನವೆನ್ನುವರು : ಅನಂತರ ಅದು ಜ್ಞಾನವಾಗುವುದು. ಇವೆರಡೂ ಚುಂಬಕದ ಎರಡು ಧ್ರುವಗಳಂತೆ. ಹೀಗೆ, ವಿದ್ಯೆಯಿಲ್ಲದೆ ಅವಿದ್ಯೆಯು ಅಸ್ತಿತ್ವವಿಲ್ಲ; ಅವಿದ್ಯೆ–ಯನ್ನು ಬಿಟ್ಟು ವಿದ್ಯೆಯು ಇರವಿಲ್ಲ. ಒಂದಿದ್ದರೆ ಇನ್ನೊಂದು ಇರಲೇಬೇಕು; ಅರ್ಥಾತ್ ಅಜ್ಞಾನದ ತೆರೆಯು ಹರಿದುಹೋದಾಗ ವಿದ್ಯೆ–ಅವಿದ್ಯೆಗಳೆರಡೂ ಇಲ್ಲದಂತಾಗುವುವು. ಈ ಪ್ರಕಾರ, ಅವಿದ್ಯೆಯು ವಿದ್ಯೆ–ಅವಿದ್ಯೆಗಳಲ್ಲಿ ಅಡಕವಾದ ಕ್ಷೇತ್ರವನ್ನೆಲ್ಲ ವ್ಯಾಪಿಸಿದೆ. ಇವೆರಡರ ಆಚೆಗಿರುವುದೇ ತಮದ ಅವಸ್ಥೆ. ನಿಜಾರ್ಥದಲ್ಲಿ ಅದೇ ಸಾಕ್ಷಾತ್ಕಾರದ ಸ್ಥಿತಿ. ಅಲ್ಲಿ ಅವಿದ್ಯೆಯೂ ಇಲ್ಲ, ವಿದ್ಯೆಯೂ ಇಲ್ಲ. ಹಾಗಾದರೆ ಅಲ್ಲೇನಿದೆ ? ಯಾವುದೂ ಇಲ್ಲ; ಪೂರ್ಣ ಅದೃಶ್ಯ ಸ್ಥಿತಿ–ಬಾಲ್ಯಾವಸ್ಥೆಯಲ್ಲಿರುವ ಅಜ್ಞಾನದ ಸ್ಥಿತಿ. ವಸ್ತುತಃ ಅಜ್ಞಾನವು ಜ್ಞಾನದ ಪರಮೋಚ್ಚದಶೆ. ನಾವು ಅಜ್ಞಾನದ ಸ್ಥಿತಿಯಿಂದ ಹೊರಟು ಸಂಪೂರ್ಣ ಅಜ್ಞಾನವನ್ನು ಮುಟ್ಟುವೆವೆಂದು ಹೇಳಬಹುದು. ಸಾಮಾನ್ಯವಾಗಿ ನಾವು ತಿಳಿದಂತೆ ಜ್ಞಾನದ ವಲಯವು ಕೇವಲ ನಡುವಿನ ಘಟ್ಟ. ನಿಜ ಹೇಳುವುದಾದರೆ, ಜ್ಞಾನದ ಕ್ಷೇತ್ರವೆನ್ನಿಸಿಕೊಳ್ಳುವುದು ವಸ್ತುತಃ ಅಜ್ಞಾನದ ಕ್ಷೇತ್ರವೇ.

ಅಜ್ಞಾನದ ತೆರೆಯು ಹರಿದುಹೋದಮೇಲೆ ಉದಯವಾಗುವುದನ್ನು ಜ್ಞಾನವೆನ್ನಬಹುದೆ ? ಖಂಡಿತವಾಗಿ ಅಲ್ಲ. ಆದರೂ ಎರಡೂ ವಿರುದ್ಧ ವಸ್ತುಗಳನ್ನು ಗಮನಿಸಿ ನಾವು ತೋರಿಕೆಯ ಅರ್ಥದಲ್ಲಿ ಹಾಗೆ ಕರೆಯುವೆವು. ಅದು ಜ್ಞಾನದ ಅರ್ಥವನ್ನು ಒಳಗೊಳ್ಳುವುದೇ ? ಇಲ್ಲ. ಜ್ಞಾನವೆಂದರೆ ತನ್ನಿಂದ ಆಚೆಗಿರುವ ಎಲ್ಲದರ ತಿಳಿವಳಿಕೆಯನ್ನು ಒಳಗೊಳ್ಳುವುದು,

ಸಾಕ್ಷಾತ್ಕಾರವೆಂದರೆ ಕೇವಲದಲ್ಲಿ ಲಯಹೊಂದುವುದು. ಆ ದಶೆಯಲಿ ಜ್ಞಾನದ ಪ್ರಶ್ನೆಯೇ ಹುಟ್ಟುವುದಿಲ್ಲ. ಆಗ ಏನಿರುವುದು ? ಜ್ಞಾನಹೀನತೆ, ತಿಳಿವಳಿಕೆಯಿಲ್ಲದಿರುವುದು, ಅಥವಾ ಮತ್ತೇನಾದರೂ ? ಅದನ್ನು ಶಬ್ದಗಳಲ್ಲಿ ವ್ಯಕ್ತಗೊಳಿಸುವುದು ಅಸಂಭವಪ್ರಾಯವಾದರೂ ಅಂಥದೇ ಏನಾದರೂ ಇದ್ದೀತೆಂದು ಹೇಳಬಹುದು. 'ಸಂಪೂರ್ಣ ಅಜ್ಞಾನ' ವೆಂಬುದು ಅದಕ್ಕೆ ಸಮೀಪದ ಅತ್ಯಂತ ಯೋಗ್ಯ ಪದ.

ದೈವೀ ಮಾರ್ಗದಲ್ಲಿ ಮುನ್ನಡೆಯುವರು ಕತ್ತಲೆಯಿಂದ ಬೆಳಕಿನ ಕಡೆಗೆ ಸಾಗುವರೆಂದು ನಂಬಲಾಗುತ್ತದೆ. ಸಾಮಾನ್ಯ ತಿಳಿವಳಿಕೆಯಂತೆ ಅವಿದ್ಯೆಯೆ ಕತ್ತಲು ; ವಿದ್ಯೆಯೆ ಬೆಳಕು. ಸಹಜಮಾರ್ಗವು ಬೆಳಕನ್ನು ಗುರಿಯಾಗಿಟ್ಟುಕೊಳ್ಳುವುದಿಲ್ಲ. ಅದು ನಡುವಿನ ಮಜಲು. ಬೆಳಕಾಗಲಿ ಕತ್ತಲೆಯಾಗಲಿ ಇಲ್ಲದ, ಇವೆರಡರ ಆಚೆಗಿರುವ ಅನಂತದ ಕಡೆಗಿನ ನಮ್ಮ ಯಾತ್ರೆಯಲ್ಲಿ ನಾವು ಅದನ್ನು ದಾಟಿಹೋಗುವೆವು. ಹೀಗೆ ನಾವು ಅವಿದ್ಯೆ-ಯಿಂದ ಹೊರಟು ವಿದ್ಯೆಯನ್ನು ದಾಟಿ ಇವೆರಡರ ಆಚೆಗಿರುವ ನೆಲೆಯನ್ನು ಮುಟ್ಟುವೆವು. ಬೆಳಕೂ ಅಲ್ಲದ ಕತ್ತಲೆಯೂ ಅಲ್ಲದ, ವಿದ್ಯೆಯೂ ಅಲ್ಲದ ಅವಿದ್ಯೆಯೂ ಅಲ್ಲದ, ಸ್ಥಿತಿಯನ್ನು ಯಾವ ಶಬ್ದವು ತಾನೆ ಸಮರ್ಪಕವಾಗಿ ಸೂಚಿಸಬಲ್ಲದು ? ಪ್ರಪಂಚದ ಶಬ್ದ–ಭಾಂಡಾರದಲ್ಲಿ ಅಂಥ ಯಾವುದಾದರೂ ಶಬ್ದವಿದೆಯೆ ? ನಿಶ್ಚಯವಾಗಿಯೂ ಇಲ್ಲ. ಆದುದರಿಂದಲೇ, ಪ್ರಾರಂಭಿಕ ಅಜ್ಞಾನದಶೆಯಿಂದ ಭಿನ್ನವಾದ ಅದನ್ನು 'ಸಂಪೂರ್ಣ ಅಜ್ಞಾನ' ವೆಂದು ಕರೆದಿದ್ದೇನೆ.